Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–18 | ಸಂಚಿಕೆ–52 | ಡಿಸೆಂಬರ್ 23–29, 2024 | ಪುಟ 16 | ರೂ.10/–
Volume-18 | Issue-52 | December 23-29, 2024 | Pages:16 | Price: 10/-

ತುಮಕೂರು: ಸಿಪಿಐ(ಎಂ) ಸಮ್ಮೇಳನಕ್ಕೆ ಭರದ ಸಿದ್ಧತೆ







ಏಕಕಾಲದ ಚುನಾವಣೆಗಳು: ಸಂವಿಧಾನದ ಬುಡಮೇಲು

ಗೃಹಮಂತ್ರಿಗಳ ಏಳು ಜನ್ಮಗಳು ಪ್ರಧಾನಿಗಳ ಹನ್ನೊಂದು ಮಂತ್ರಗಳು



ಮಂಡ್ಯ: ಸಾಹಿತ್ಯ ಸಮ್ಮೇಳನ-ಗಟ್ಟಿ ಸಂದೇಶ

ಬ್ರಿಟಿಷರ ವಾಸಕ್ಕೆ, ಅವರ ಕೈಗಾರಿಕೆಗಳಿಗೆ ಬ್ರಿಟನ್‌ನ 125 ಪಟ್ಟು ವಿಸ್ತಾರದ ಪ್ರದೇಶ ದಕ್ಕಿತು!!!

ಬ್ರಿಟನ್‌ಗಿಂತ 125 ಪಟ್ಟು ಹೆಚ್ಚು ವಿಸ್ತೀರ್ಣ, ಕೋಟ್ಯಾಂತರ ಆದಿವಾಸಿಗಳ ಬಲಿ, ಕಪ್ಪು ಜನರ ಗುಲಾಮಗಿರಿ ಬೆಳೆಸಿದ ಬಂಡವಾಳ. ವಿಶ್ವ ಇತಿಹಾಸದ ಈ ವಿಚಿತ್ರ, ವಿಶೇಷ ಸಂಗತಿ ನೋಡಿ! ಪೋರ್ಚುಗೀಸ್ ಮತ್ತು ಸ್ಪೇನಿನ ರಾಜ ಪ್ರಭುತ್ವಗಳ ನಿರ್ದೇಶನದಲ್ಲಿ ಪ್ರಾಣಗಳನ್ನು ಪಣಕ್ಕಿಟ್ಟು ಸಾಗರ ಸಾಹಸಗಳನ್ನು ಮಾಡಿ ಅಮೆರಿಕ ಖಂಡ ಮತ್ತು ಭಾರತಕ್ಕೆ ದಾರಿಯನ್ನು ಕಂಡು ಹಿಡಿದದ್ದು ಕೊಲಂಬಸ್, ಗಾಮಾಗಳು. ಆದರೆ ವಿಶ್ವದ ಬಹುಭಾಗದ ಮೇಲೆ ಹಿಡಿತ ಸ್ಥಾಪಿಸಿದ್ದು ಬ್ರಿಟನ್. ಅತ್ಯಂತ ಹೆಚ್ಚು ದುರ್ಲಾಭ ಪಡೆದದ್ದು ಬ್ರಿಟನ್!

ಭಾಗ 10

ಜಿ.ಎನ್. ನಾಗರಾಜ್

ಕೊಲಂಬಸ್ ತಲುಪಿದ ಉತ್ತರ ಅಮೆರಿಕ, ಡಚ್ಚರು ಮೊದಲು ತಲುಪಿದ ಆಸ್ಟ್ರೇಲಿಯಾ ಖಂಡಗಳ ವಿಸ್ತಾರ ಪ್ರದೇಶದ ಮೇಲೆ ಅಧಿಪತ್ಯ ಸ್ಥಾಪಿಸಿದ್ದು ಬ್ರಿಟನ್. ಇದು ಭಾರತದಂತೆ ಕೇವಲ ಅಧಿಪತ್ಯ ಮಾತ್ರವಲ್ಲ, ಆ ಪ್ರದೇಶದಲ್ಲಿ ನೆಲೆಸಿದ್ದ ಆದಿವಾಸಿ ಬುಡಕಟ್ಟುಗಳನ್ನು ಬರ್ಬರವಾಗಿ ಕೊಂದು ಅಥವಾ ಓಡಿಸಿ ಆ ಪ್ರದೇಶಗಳಲ್ಲಿ ಬ್ರಿಟನ್‌ನ ಜನರು ನೆಲೆ ನಿಂತರು. ಉತ್ತರ ಅಮೆರಿಕದಲ್ಲಿ ಮೆಕ್ಸಿಕೊ ಹೊರತಾಗಿ ಈಗ ಅಮೆರಿಕ ಎಂದು ಸಾಮಾನ್ಯವಾಗಿ ಕರೆಯಲಾಗುವ ಅಮೆರಿಕಾ ಸಂಯುಕ್ತ ಸಂಸ್ಥಾನ, ಕೆನಡಾಗಳಲ್ಲಿ, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಟಸ್ಮಾನಿಯಾ ಮೊದಲಾದ ದ್ವೀಪಗಳಲ್ಲಿ ಬ್ರಿಟನ್‌ನಿಂದ ವಲಸೆ ಹೋದ ಜನರೇ ಅತಿ ದೊಡ್ಡ ಭಾಗ.

ವಿಶ್ವದ ವಸಾಹತುಶಾಹಿ ಚರಿತ್ರೆಯನ್ನು ಉದ್ಘಾಟಿಸಿದ ಈ ಯುಗದಲ್ಲಿ ಎರಡು ರೀತಿಯ ವಸಾಹತುಶಾಹಿಯನ್ನು ಗುರುತಿಸುತ್ತಾರೆ. ಒಂದು, ನೆಲಸು ವಸಾಹತುಶಾಹಿ (ಸೆಟ್ಲರ್ ಕಲೋನಿಯಲಿಸಂ) ಮತ್ತೊಂದು ಶೋಷಣೆಗೆ ಸೀಮಿತವಾದ ವಸಾಹತುಶಾಹಿ (ಎಕ್ಸ್‌ಪ್ಲಾಯಿಟೇಟಿವ್ ಕಲೋನಿಯಲಿಸಂ). ಮೇಲೆ ಹೇಳಿದ ಅಮೆರಿಕ, ಆಸ್ಟ್ರೇಲಿಯಾ ವಸಾಹತುಗಳು ಮೊದಲನೆಯ ರೀತಿಯದು. ಭಾರತ ಸೇರಿದಂತೆ ಏಷ್ಯಾ, ಆಫ್ರಿಕಾದ ವಸಾಹತುಶಾಹಿ ಎರಡನೇ ರೀತಿಯದು.

ಅಮೆರಿಕಾ, ಆಸ್ಟ್ರೇಲಿಯಾಗಳೆಂದರೆ ಬ್ರಿಟನ್‌ನ 125 ಪಟ್ಟು

ಬ್ರಿಟನ್ ಎಂದರೆ ಕೇವಲ ಒಂದು ಸಣ್ಣ ದ್ವೀಪಗಳ ಸಮುಚ್ಚಯ. ಇಂದಿನ ಭಾರತದ ಕೇವಲ ಶೇ. 7.4ರಷ್ಟು ಚಿಕ್ಕದು, ಹದಿಮೂರನೇ ಒಂದು ಭಾಗದಷ್ಟು. 17ನೇ ಶತಮಾನದ ಅಂತ್ಯದ ವೇಳೆಗೆ ಬ್ರಿಟನ್‌ನ ಜನಸಂಖ್ಯೆ ಕೇವಲ 65 ಲಕ್ಷ. ಭಾರತದ ಜನಸಂಖ್ಯೆ 15 ಕೋಟಿ.

ಕೇವಲ 65 ಲಕ್ಷ ಜನರಿದ್ದ ಬ್ರಿಟನ್‌ಗೆ ಅದರ 125 ಪಟ್ಟು ಹೆಚ್ಚು ವಿಸ್ತಾರವಾದ ಪ್ರದೇಶ– ಅದರ ಫಲವತ್ತಾದ ಕೃಷಿ ಯೋಗ್ಯ ಭೂಮಿ, ನದಿ, ಖನಿಜ ಮತ್ತಿತರ ಅಪಾರ ಸಂಪನ್ಮೂಲಗಳು ದೊರಕಿದರೆ ಅದರ ಶ್ರೀಮಂತಿಕೆ ಎಷ್ಟು ಪಟ್ಟು ಹೆಚ್ಚಬಹುದು!

ಇದಕ್ಕೊಂದು ಉದಾಹರಣೆ ಇಲ್ಲಿಯ ಜನಸಾಂದ್ರತೆ. ಅಮೆರಿಕ ಖಂಡದಲ್ಲಿ ಅದು ಒಂದು ಚದರ ಕಿಮೀಗೆ ಕೇವಲ 22.67. ಆಸ್ಟ್ರೇಲಿಯಾ ಖಂಡದಲ್ಲಿ ಇನ್ನೂ ಕಡಿಮೆ ಕೇವಲ 3.6. ಅಂದರೆ ಒಂದು ಕಿಮೀ ಉದ್ದ ಒಂದು ಕಿಮೀ ಅಗಲದಷ್ಟು ವಿಶಾಲ ಪ್ರದೇಶದಲ್ಲಿ ಕೇವಲ ನಾಲ್ಕು ಜನಕ್ಕಿಂತ ಕಡಿಮೆ. ಅಮೆರಿಕದಲ್ಲಿ ಕೇವಲ 23 ಜನ. ಅದರಲ್ಲಿ ಕೆನಡಾದಲ್ಲಿ ಅರಣ್ಯಗಳೇ ಮುಖ್ಯ ಬೆಳೆ. ಭಾರತದಲ್ಲಿ ಜನಸಾಂದ್ರತೆ 427.7. ಹೀಗಾಗಿ ಅಲ್ಲಿ ಒಬ್ಬೊಬ್ಬರ ಹಿಡುವಳಿಗಳ ಗಾತ್ರ ಹತ್ತಾರು ಸಾವಿರ ಎಕರೆಗಳಿಂದ ಲಕ್ಷಾಂತರ ಎಕರೆಗಳು.

ಉದಾಹರಣೆಗೆ ಭಾರತೀಯರ ವಾಸ ಮತ್ತು ಜೀವನಕ್ಕೆ ಭೂಗ್ರಹದ ಮೇಲಿನ ನೆಲವೆಲ್ಲ ಸಿಕ್ಕು, ಅದರ ಜೊತೆಗೆ ಬುಧ ಗ್ರಹವೂ ಕೂಡಾ ದೊರಕಿದರೆ ಭಾರತದ ಸಂಪತ್ತು ಎಷ್ಟು ದೊಡ್ಡದಾಗಿ ಬೆಳೆಯಬಹುದು! ಭಾರತದ ಅಪಾರ ಜನಸಂಖ್ಯೆ ಅಲ್ಲೆಲ್ಲ ಹರಡಿ ಅಲ್ಲಿಯ ಭೂಮಿ, ಖನಿಜ ಮತ್ತಿತರ ಸಂಪನ್ಮೂಲಗಳನ್ನು ಉಪಯೋಗಿಸಲು ಸಾಧ್ಯವಾದರೆ! ಭಾರತದ ಕೃಷಿ, ಆಹಾರ ಸುಭದ್ರತೆ, ಕೈಗಾರಿಕಾ ಬೆಳವಣಿಗೆ ಸಂಪತ್ತು ಹೇಗಿರಬಹುದು! ಇದು ಆದರೆ, ಹೋದರೆ ಎಂಬ ಕಲ್ಪನೆಯ ಲೋಕ ಎನಿಸುತ್ತದೆಯಲ್ಲವೇ! ಆದರೆ ಇದು ಬ್ರಿಟನ್‌ನ ವಿಷಯದಲ್ಲಿ ವಸ್ತು ಸತ್ಯವಾಯಿತು.

ಇದಿಷ್ಟೂ ನೆಲಸು ವಸಾಹತುಶಾಹಿಗೆ ಸಂಬಂಧಿಸಿದ್ದು ಮಾತ್ರ. ಭಾರತ ಮೊದಲಾದ ಏಷ್ಯಾ, ಆಫ್ರಿಕಾದ ಜನಭರಿತ ದೇಶಗಳ ಶೋಷಕ ವಸಾಹತುಶಾಹಿಯಿಂದ ದೋಚಿದ ಸಂಪತ್ತು ಮೇಲಿನ ಲೆಕ್ಕದಲ್ಲಿ ಸೇರಿಲ್ಲ.

1914ರಲ್ಲಿ ಮೊದಲ ಮಹಾಯುದ್ಧದ ಸಮಯದಲ್ಲಿ ವಸಾಹತುಶಾಹಿ ಗರಿಷ್ಠ ಮಟ್ಟ ಮುಟ್ಟಿತ್ತು. ಆಗ ವಿಶ್ವದ ಶೇ. 84ರಷ್ಟು ಭೂಪ್ರದೇಶ, 56 ಕೋಟಿ ಜನಸಂಖ್ಯೆ ಯುರೋಪಿನ ವಿವಿಧ ದೇಶಗಳ ವಸಾಹತುಗಳಾಗಿದ್ದವು. ವಿವಿಧ ದೇಶಗಳ ಹಿಡಿತದಲ್ಲಿದ್ದ ಜನಸಂಖ್ಯೆಯ ಪ್ರಮಾಣ ಆಯಾ ವಸಾಹತುಶಾಹಿ ದೇಶಗಳ ಹಿಡಿತವನ್ನು ಸೂಚಿಸುತ್ತದೆ.

ಬ್ರಿಟನ್ – ಶೇ.70
ಫ್ರಾನ್ಸ್– ಶೇ.10
ಡಚ್ – ಶೇ.9 (ನೆದರ್ಲ್ಯಾಂಡ್ಸ್)
ಜಪಾನ್– ಶೇ.4
ಪೋರ್ಚುಗಲ್– ಶೇ.3
ಜರ್ಮನಿ– ಶೇ. 2
ಅಮೆರಿಕ– ಶೇ.2
ಬೆಲ್ಜಿಯಂ– ಶೇ.1
ಇಟಲಿ– ಶೇ.0.5

ಅಮೆರಿಕ, ಆಸ್ಟ್ರೇಲಿಯಾಗಳಲ್ಲಿ ವಸಾಹತುಶಾಹಿ ಕ್ರೌರ್ಯಗಳು

ಯುರೋಪಿಯನ್ನರು ಅಮೆರಿಕಾಕ್ಕೆ ಪ್ರವೇಶ ಮಾಡುವ ಮೊದಲು ಅಲ್ಲಿ ಮಾಯಾ, ಅಜ್ಟೆಕ್, ಇಂಕಾ ಎಂಬ ಮೂರು ನಾಗರೀಕತೆಗಳು ತಮ್ಮದೇ ಆದ ಸಂಸ್ಕೃತಿಗಳು, ಸಾಮ್ರಾಜ್ಯಗಳೊಂದಿಗೆ ಬೆಳಗುತ್ತಿದ್ದವು. ಉತ್ತರ ಅಮೆರಿಕದಲ್ಲಿ ನೂರಾರು ಮೂಲ ನಿವಾಸಿ ಬುಡಕಟ್ಟಿನ ಜನರು ಅಲ್ಲಿಯ ವಿವಿಧ ಪ್ರದೇಶಗಳನ್ನು ನೆಲೆ ಮಾಡಿಕೊಂಡು ತಮ್ಮದೇ ಗಡಿ ನಿಯಮಗಳೊಂದಿಗೆ ಜೀವಿಸುತ್ತಿದ್ದರು.

ಮಾಯಾ ಮತ್ತು ಅಜ್ಟೆಕ್ ಸಾಮ್ರಾಜ್ಯಗಳು ಮಧ್ಯ ಅಮೆರಿಕದ ಪ್ರದೇಶಗಳಲ್ಲಿ ರೂಪುಗೊಂಡಿದ್ದರೆ, ಇಂಕಾ ಸಾಮ್ರಾಜ್ಯವು ದಕ್ಷಿಣ ಅಮೆರಿಕಾದ ಸಮುದ್ರ ತೀರದಲ್ಲಿ ಇಂದಿನ ಪೆರು, ಈಕ್ವೆಡಾರ್, ಬೊಲಿವಿಯಾ, ಅರ್ಜೆಂಟೈನಾ, ಚಿಲಿ ದೇಶಗಳ ಭಾಗಗಳನ್ನು ವ್ಯಾಪಿಸಿತ್ತು. ಅಂದಿನ ಯುರೋಪಿನ ಯಾವುದೇ ಸಾಮ್ರಾಜ್ಯದ ಜೊತೆ ತುಲನೆ ಮಾಡುವಂತಿತ್ತು.

ಈ ನಾಗರೀಕತೆಗಳು ತಮ್ಮದೇ ಆದ ಖಗೋಳ ಜ್ಞಾನ, ಕಾಲ ಹಾಗೂ ಋತುಗಳ ಗಣನೆ, ಕೃಷಿ, ಪಶು ಸಂಗೋಪನೆ, ಜೀವನ ಪದ್ಧತಿಗಳನ್ನು ಹೊಂದಿದ್ದರು. ಆ ಸಮಯದಲ್ಲಿ ಇಲ್ಲಿಯ ಮೂಲ ನಿವಾಸಿಗಳ ಜನಸಂಖ್ಯೆ ಐದು ಕೋಟಿ ಇತ್ತೆಂದು ಅಂದಾಜಿಸಲಾಗಿದೆ.

ಸ್ಪೇನಿನ ನೆರವಿನೊಂದಿಗೆ ಕೊಲಂಬಸ್ ಈ ಪ್ರದೇಶಕ್ಕೆ ಮೊದಲು ಹೆಜ್ಜೆ ಇಟ್ಟದ್ದರಿಂದ ಸ್ಪೇನು ಈ ಪ್ರದೇಶಗಳೆಲ್ಲವೂ ತನ್ನ ಹಕ್ಕು ಎಂದು ಭಾವಿಸಿತು. ಸೈನ್ಯದೊಂದಿಗೆ ಧಾಳಿ ಮಾಡಿ ಆ ಸಾಮ್ರಾಜ್ಯಗಳನ್ನು ನಿರ್ನಾಮ ಮಾಡಿತು. ಈ ಯುದ್ಧಗಳಲ್ಲಿ ಯುರೋಪಿನ ಬಂದೂಕು, ಫಿರಂಗಿಗಳ ಭೋರ್ಗರೆತ ಈ ನಾಗರೀಕತೆಗಳ ಹಲವು ಲಕ್ಷ ಜನರನ್ನು ಕೊಂದುಹಾಕಿತು. ಅದರಲ್ಲಿ ಹೆಜ್ಜೆ ಹೆಜ್ಜೆಗೂ ವಂಚನೆ, ಕ್ರೌರ್ಯದ ಕತೆಗಳು ಕರುಳು ಹಿಂಡುತ್ತವೆ.

ಅದರ ಒಂದು ಉದಾಹರಣೆ ಹೀಗಿದೆ: ಇಂತಹ ಸ್ಪೇನ್ ಮಿಲಿಟರಿ ಅಧಿಕಾರಿಯನ್ನು ನೋಡಿದ ಮೂಲ ನಿವಾಸಿಗಳು ಬೇರೆ ಲೋಕದಿಂದ ಬಂದ ನ್ಯಾಯ ದೇವತೆ ಎಂದು ಭಾವಿಸಿ ಸ್ವಾಗತಿಸಿದರು. ತಮ್ಮ ಬಳಿಯಿದ್ದ ಚಿನ್ನವನ್ನು ಮೊಗೆದು ಮೊಗೆದು ಒಂದು ಕೊಠಡಿ ತುಂಬುವಷ್ಟನ್ನು ನೀಡಿದರು. ಆದರೆ ಆ ನ್ಯಾಯ ದೇವತೆ ಮಾಡಿದ ಕೆಲಸವೆಂದರೆ ಆ ಸಮುದಾಯದ ಮುಖ್ಯಸ್ಥನನ್ನು ಮೋಸದಿಂದ ಕೊಂದು ಹಾಕಿದ್ದು.

ಇಲ್ಲಿನ ಜನರನ್ನು ಸರಪಳಿಗಳಿಂದ ಬಂಧಿಸಿ ಕ್ರೂರವಾಗಿ ಸಾಮಾನು ಸರಂಜಾಮುಗಳನ್ನು ಎಳೆದೊಯ್ಯುವಂತೆ ಎಳೆದೊಯ್ದರು. ತಮ್ಮ ಶಿಬಿರಗಳಲ್ಲಿ, ಮುಂದೆ ತಾವು ಆರಂಭಿಸಿದ ಕಬ್ಬಿನ, ಹತ್ತಿಯ ವಿಸ್ತಾರ ಪ್ಲಾಂಟೇಷನ್‌ಗಳಲ್ಲಿ, ಗಣಿಗಳಲ್ಲಿ ದುಡಿಮೆಗೆ ಹಚ್ಚಿದರು. ಮಹಿಳೆಯರ ಮೇಲೆ ಅತ್ಯಾಚಾರ ಮಾಡಿದರು. ಜನರನ್ನೆಲ್ಲ ಹಿಂಸಿಸಿದರು. ಅವರ ಪ್ರದೇಶಗಳಿಂದ ಅವರನ್ನು ಓಡಿಸಿ, ಸೀಮಿತವಾದ ಜಾಗಗಳನ್ನು ಸಂರಕ್ಷಿತ ಪ್ರದೇಶಗಳೆಂದು ಘೋಷಿಸಿ ಬೇಲಿ ಹಾಕಿ ಅಲ್ಲಿ ಮಾತ್ರ ವಾಸಿಸುವಂತೆ ಕಟ್ಟುಪಾಡು ಮಾಡಿದರು.

ಅಮೆರಿಕದ ಸಂಯುಕ್ತ ಸಂಸ್ಥಾನದ ಪ್ರದೇಶವೊಂದರಲ್ಲೇ 1,500 ಧಾಳಿಗಳು, ಯುದ್ಧಗಳನ್ನು, ದರೋಡೆಗಳನ್ನು ಮಾಡಲಾಗಿದೆ. ಇಂದಿನ ಕ್ಯಾಲಿಫೋರ್ನಿಯಾದ ಪ್ರದೇಶದಲ್ಲಿ ಒಮ್ಮೆ ಎರಡೂವರೆ ಲಕ್ಷ ಇದ್ದ ಮೂಲನಿವಾಸಿಗಳ ಸಂಖ್ಯೆ ಗಣಿ ಮಾಲಿಕರ, ಭೂಮಿ ಆಕ್ರಮಣದಾರರ ಹಿಂಸೆ, ಸಾಮೂಹಿಕ ಹತ್ಯೆಗಳಿಂದಾಗಿ ಕೇವಲ ಇಪ್ಪತ್ತು ಸಾವಿರಕ್ಕೆ ಇಳಿಸಲ್ಪಟ್ಟರು.

ಈ ಮೂಲ ನಿವಾಸಿಗಳಲ್ಲಿ ಎಷ್ಟೋ ಜನಕ್ಕೆ ಯುರೋಪಿನ ರೋಗಗಳ ಸಂಪರ್ಕವಿರಲಿಲ್ಲ. ಅಲ್ಲಿಯ ಜನರ ಸಂಪರ್ಕಕ್ಕೆ ಬಂದ ಮೇಲೆ ಪ್ಲೇಗ್ ಮೊದಲಾದ ರೋಗಗಳಿಂದ ಲಕ್ಷಾಂತರ ಆದಿವಾಸಿಗಳು ಸಾವನ್ನಪ್ಪಿದರು. ಇಂತಹ ರೋಗಗಳನ್ನು ನಿಯಂತ್ರಿಸುವ, ಗುಣ ಮಾಡುವ ಚಿಕಿತ್ಸಾ ಕ್ರಮಗಳು ಯುರೋಪಿನ ಧಾಳಿಕೋರರಿಗೆ ತಿಳಿದಿದ್ದರೂ ಕ್ರಮ ವಹಿಸದೆ ಲಕ್ಷಾಂತರ ಜನ ಸಾವನ್ನಪ್ಪಿದ್ದಾರೆ.

ಹೀಗೆ ಬೇಟೆಯಾಡಲ್ಪಟ್ಟ ಮೃಗಗಳಂತೆ ಅವರ ಸಂಖ್ಯೆ 5 ಕೋಟಿಯಿಂದ ಕೇವಲ 80 ಲಕ್ಷಕ್ಕೆ ಇಳಿಯಿತು.

ಆಸ್ಟ್ರೇಲಿಯಾದಲ್ಲಿ ಮಾವೋರಿ ಮೊದಲಾದ ಆದಿವಾಸಿಗಳನ್ನು ಕೂಡಾ ಇದೇ ರೀತಿ ಹಿಂಸೆ, ಕಗ್ಗೊಲೆಗೆ ಈಡುಮಾಡಲಾಗಿದೆ. ಈ ಖಂಡಕ್ಕೆ ಸೇರಿದ ಸೌತ್ ಸೀ ಎಂಬ ದ್ವೀಪದ ವಾಸಿಗಳನ್ನು ಅಪಹರಿಸಿ, ಮೋಸದಿಂದ ಅಥವಾ ಅನುನಯದಿಂದ ಕರೆತಂದು ಉತ್ತರ ಕ್ವೀನ್ಸ್ ಲ್ಯಾಂಡ್‌ನ ಕಬ್ಬಿನ ಪ್ಲಾಂಟೇಷನ್‌ಗಳಲ್ಲಿ ಜೀತಗಾರರನ್ನಾಗಿ ದುಡಿಸಿಕೊಳ್ಳಲಾಯಿತು. ಹಲವಾರು ದಶಕಗಳ ನಂತರ ಆಸ್ಟ್ರೇಲಿಯಾ ಬಿಳಿಯರಿಗಾಗಿ ಮಾತ್ರ ಎಂಬ ನೀತಿಯ ಪ್ರಕಾರ ಇವರನ್ನು ಸಿಕ್ಕ ಸಿಕ್ಕ ದ್ವೀಪಗಳಿಗೆ ಮರು ಸಾಗಿಸಲಾಯಿತು. ಅಲ್ಲಿಯ ಮೂಲ ನಿವಾಸಿಗಳ ಮ್ಯೂಸಿಯಂಗಳಲ್ಲಿ ಅವರ ನೂರಾರು ಹೋರಾಟಗಳ, ಸಾವಿರಾರು ಜನರ ಕತೆಗಳನ್ನು ಇಂದು ಪ್ರದರ್ಶಿಸಲಾಗಿದೆ.

15ನೇ ಶತಮಾನದ ಕೊನೆಯ ವರ್ಷಗಳಲ್ಲಿ ಆರಂಭವಾದ ಈ ಕ್ರೌರ್ಯ, ಅಮೆರಿಕ ಸಂಯುಕ್ತ ಸಂಸ್ಥಾನ, ಕೆನಡಾ, ದಕ್ಷಿಣ ಅಮೆರಿಕದ ಹಲವು ದೇಶಗಳಲ್ಲಿ, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗಳಲ್ಲಿ 21ನೆಯ ಶತಮಾನದಲ್ಲಿಯೂ ಮುಂದುವರೆದಿದೆ.

ಚಿನ್ನ, ಬೆಳ್ಳಿ, ಕಬ್ಬು, ಹತ್ತಿ, ಹೊಗೆಸೊಪ್ಪು

ಈ ಪ್ರದೇಶಗಳ ಪ್ರಾಕೃತಿಕ ಸಂಪನ್ಮೂಲಗಳನ್ನೆಲ್ಲ ಸಮೀಕ್ಷೆ ಮಾಡುವುದೇ ಇಲ್ಲಿಗೆ ಬಂದ ಯುರೋಪಿಯನ್ನರ ಮೊದಲ ಕೆಲಸವಾಗಿತ್ತು ಎಂಬುದನ್ನು ಹಿಂದಿನ ಸಂಚಿಕೆಯಲ್ಲಿ ಹೇಳಲಾಗಿದೆ. ಯುರೋಪಿನಲ್ಲಿ ಬಹಳ ವೇಗವಾಗಿ ಬೆಳೆಯುತ್ತಿದ್ದ ವ್ಯಾಪಾರ, ಕೈಗಾರಿಕಾ ವಹಿವಾಟುಗಳಿಗೆ ಹಣದ ಆಗರವಾದ ಚಿನ್ನ, ಬೆಳ್ಳಿಗಳು ಬಹಳ ಮುಖ್ಯವಾಗಿದ್ದವು. ಇಲ್ಲಿನ ಮೆಕ್ಸಿಕೊ, ಪೆರು ಮೊದಲಾದ ಪ್ರದೇಶಗಳಲ್ಲಿ ಅಲ್ಲಿಯ ಇಂಕಾ, ಅಜ್ಟೆಕ್ ಮಾಯಾ ನಾಗರಿಕತೆಗಳು ಕಂಡುಹಿಡಿದು ಉಪಯೋಗಿಸುತ್ತಿದ್ದ ಚಿನ್ನ, ಬೆಳ್ಳಿಗಳ ನಿಕ್ಷೇಪಗಳ ಗಣಿ ಮಾಡಿ ತೆಗೆದು, ಸಾವಿರಾರು ಟನ್‌ಗಳಷ್ಟು ದೊಡ್ಡ ಪ್ರಮಾಣದಲ್ಲಿ ಯುರೋಪಿಗೆ ರಫ್ತು ಮಾಡಲಾಯಿತು. ಇದರಿಂದಾಗಿ ನಾಣ್ಯಗಳ ಚಲಾವಣೆ ಇದ್ದಕ್ಕಿದ್ದಂತೆ ಹೆಚ್ಚಾಯಿತು. ಹಣ ಚಲಾವಣೆಯ ಸಮತೋಲನ ತಪ್ಪಿತು. ಇದರಿಂದಾಗಿ ಬೆಲೆಗಳು ಐದು ಪಟ್ಟು ಹೆಚ್ಚಾಯಿತು. ಬಡವರ ಬದುಕು ಸಂಕಟಕ್ಕೀಡಾಯಿತು. ಅದೇ ಸಮಯದಲ್ಲಿ ಬಂಡವಾಳದ ಶೇಖರಣೆ ವೇಗೋತ್ಕರ್ಷ ಪಡೆದುಕೊಂಡಿತು.

ಯುರೋಪಿನಲ್ಲಿನ ತಂಪಾದ ವಾಯುಗುಣದ ಕಾರಣ ಅಲ್ಲಿ ಕಬ್ಬು ಬೆಳೆಯುತ್ತಿರಲಿಲ್ಲ. ಭಾರತ, ಚೀನಾಗಳಿಂದ ಚೀನಿ(ಸಕ್ಕರೆ)ಯನ್ನು ಅರಬ್ ವ್ಯಾಪಾರಿಗಳ ಮೂಲಕ ಆಮದು ಮಾಡಿಕೊಳ್ಳುವುದು ಬಹಳ ದುಬಾರಿಯಾಗಿತ್ತು. ಕೇವಲ ಪ್ರತಿಷ್ಠಿತ ನೋಬಲ್‌ಗಳಿಗೆ ಮಾತ್ರ ದಕ್ಕುತ್ತಿತ್ತು. ಅಮೆರಿಕಾದ ಹಲವು ಭಾಗಗಳ ಉಷ್ಣ ವಲಯದಿಂದ ಅಲ್ಲಿ ಕಬ್ಬು ಬೆಳೆಯುವುದು ಸಾಧ್ಯವಾಯಿತು. ಇಲ್ಲಿ ತಯಾರಾದ ಸಕ್ಕರೆ ಅಗ್ಗವಾಗಿ ದೊರಕಿದ್ದರಿಂದ ಯುರೋಪಿನ ಸಕ್ಕರೆ ಬಳಕೆ ಹತ್ತಾರು ಪಟ್ಟು ಹೆಚ್ಚಿತು. ಚಾಕೊಲೇಟ್, ಕೇಕ್, ಸಿಹಿ ಪಾನೀಯಗಳು ಇತ್ಯಾದಿ ಇದರ ಫಲವಾಗಿ ಬಂದ ಹೊಸ ತಯಾರಿಕೆಗಳು. ಹೊಸ ಸರಕುಗಳು. ಅದಕ್ಕೆ ತಕ್ಕಂತೆ ಜಮೈಕಾ, ಕ್ಯೂಬಾ ಕೆರಿಬಿಯನ್ ದ್ವೀಪಗಳು, ಬ್ರೆಜಿಲ್ ಮೊದಲಾದ ದೇಶಗಳು ಸಕ್ಕರೆ ಉತ್ಪಾದನೆ ಪುಟ 6 ಕ್ಕೆ



ಕೆಡಹುವುದು ಸುಲಭ, ಕಟ್ಟುವುದು ಕಷ್ಟ. ಕನ್ನಡ ಸಾಹಿತ್ಯ ಸಮ್ಮೇಳನದ 'ಪಾಠ'

ಸಂಪಾದಕೀಯ

"ಗುಡಿ, ಮಸೀದಿ, ಗುರುದ್ವಾರ, ಚೈತ್ಯಾಲಯ, ಬಸದಿಗಳು ಮತೀಯ ಸಂಘರ್ಷದ ಕೇಂದ್ರಗಳಾಗುತ್ತಿರುವುದು ಖೇದನೀಯ. ನಾವು ಕಟ್ಟುವವರಾಗಬೇಕೇ ವಿನಃ ಕೆಡವುವವರಾಗಬಾರದು. ಕೆಡಹುವುದು ಸುಲಭ, ಕಟ್ಟುವುದು ಕಷ್ಟ. ಹಿಂದಿನ ತಪ್ಪುಗಳು ಮರುಕಳಿಸಬಾರದು. ನಾವು ಮುಂದೆ ಹೋಗಬೇಕೇ ವಿನಾ ಹಿಂದೆ ಹೋಗಬಾರದು" ಇವು ಮಂಡ್ಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ 94 ವರ್ಷದ ಹಿರಿಯ ಜೀವ ನಾಡೋಜ ಡಾ. ಗೊ.ರು.ಚನ್ನಬಸಪ್ಪ ಅವರ ಸ್ಪಷ್ಟವಾದ ಮಾತುಗಳು.

ಯಾವ ಮಂಡ್ಯದ ನೆಲದಲ್ಲಿ ಉರಿಗೌಡ, ನಂಜೇಗೌಡ ಎಂಬ ಹೆಸರಿನಲ್ಲಿ ಕೋಮುದ್ವೇಷದ ಉರಿಯನ್ನು ಹಚ್ಚಲು ಇತ್ತೀಚೆಗೆ ಮತಾಂಧ ಶಕ್ತಿಗಳು ಸಂಚುಗಳನ್ನು ಹೂಡಿದ್ದವೋ, ಯಾವ ಮಂಡ್ಯದ ನೆಲದಲ್ಲಿ ಹನುಮಧ್ವಜ, ಹನುಮ ದೇಗುಲ ಇತ್ಯಾದಿಗಳ ಹೆಸರಿನಲ್ಲಿ ಗಲಭೆ-ವಿವಾದಗಳನ್ನು ಹುಟ್ಟುಹಾಕಲು ಪ್ರಯತ್ನಿಸಲಾಗುತ್ತಿದೆಯೋ ಅದೇ ಮಂಡ್ಯದ ನೆಲದಲ್ಲಿ ಹಿರಿಯ ಸಾಹಿತಿಯೊಬ್ಬರು ಸ್ಪಷ್ಟವಾದ ಸೌಹಾರ್ದ ಸಂದೇಶವನ್ನು ಮೊಳಗಿಸಿದ್ದಾರೆ. ಧರ್ಮದ ದುರುಪಯೋಗದ ವಿರುದ್ಧ ದನಿ ಎತ್ತಿದ್ದಾರೆ. 'ಭಾರತ ಬಹುಧರ್ಮಗಳ ನೆಲೆ' ಎಂದು ಸಾರಿ 'ಧರ್ಮಗಳು ಜನಸಮೂಹವನ್ನು ಒಂದುಗೂಡಿಸಬೇಕೇ ಹೊರತು, ಅಸಹನೆಯನ್ನು, ಅಸಮಾನತೆಯನ್ನು ಬಿತ್ತುವ ಸಾಧನಗಳಾಗಬಾರದು' ಎಂದು ಕಿವಿಮಾತು ಹೇಳಿದ್ದಾರೆ. ಶ್ರಮಿಕ ವರ್ಗದ ಕಷ್ಟನಷ್ಟಗಳ ಬಗೆಗೆ,

ಮಹಿಳೆಯರ ಮೇಲಿನ ದೌರ್ಜನ್ಯದ ದಬ್ಬಾಳಿಕೆಗಳ ಬಗೆಗೆ ಸಹ ಅವರು ದನಿ ಎತ್ತಿದ್ದಾರೆ. ರಾಜ್ಯದಲ್ಲಿ ಹತ್ತನೇ ತರಗತಿವರೆಗೆ ಕನ್ನಡ ಮಾಧ್ಯಮ ಕಡ್ಡಾಯ ಮಾಡಬೇಕು. ಇಂಗ್ಲೀಷನ್ನು ಒಂದು ಭಾಷೆಯಾಗಿ ಚೆನ್ನಾಗಿ ಕಲಿಸಬೇಕು. ಶಾಲಾ ಕಾಲೇಜುಗಳ ಸಬಲೀಕರಣವಾಗಬೇಕು ಎಂದೂ ಆಗ್ರಹಿಸಿದ್ದಾರೆ. ಬಹಳ ಮುಖ್ಯವಾಗಿ ಇಂದು ಒಕ್ಕೂಟದ ವ್ಯವಸ್ಥೆಯ ಮೇಲೆ ನಡೆಯುತ್ತಿರುವ ಧಾಳಿ, ತೆರಿಗೆ, ಕೇಂದ್ರದಿಂದ ಸಂಪನ್ಮೂಲದಲ್ಲಿ ರಾಜ್ಯಕ್ಕೆ ನ್ಯಾಯಯುತ ಪಾಲು ಸಿಗದಿರುವ ಅನ್ಯಾಯ, ಹಿಂದಿ ಹೇರಿಕೆ, ಉದ್ಯೋಗ, ಶಿಕ್ಷಣದ ಹಲವಾರು ಸಮಸ್ಯೆಗಳ ಬಗ್ಗೆ ಧೃಡವಾಗಿ ಮಾತನಾಡಿದ್ದಾರೆ. ಸಮ್ಮೇಳನಾಧ್ಯಕ್ಷರ ಮಾತುಗಳಿಗೆ ಸರಕಾರಗಳು ಗೌರವ ಕೊಡದಿರುವ ಪ್ರವತ್ತಿಯನ್ನು ಟೀಕಿಸಿ, ಈಗಿನ ಸಲಹೆಗಳ ಬಗೆಗೆ ಸರಕಾರಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದ್ದಾರೆ.

ಆರಂಭದಿಂದಲೂ 'ಶುದ್ಧ ಕನ್ನಡ'ದ ಹೆಸರಿನಲ್ಲಿ ಜನವಿರೋಧಿ ಧೋರಣೆ ತೋರುತ್ತಾ, ಸಮ್ಮೇಳನಾಧ್ಯಕ್ಷರ ಸ್ಥಾನಕ್ಕೆ ಸಾಹಿತ್ಯೇತರ ವ್ಯಕ್ತಿಗಳನ್ನು ಆಯ್ಕೆ ಮಾಡಬೇಕೆಂಬ ರೀತಿಯ ಕುಮ್ಮಕ್ಕು ನೀಡುತ್ತಾ, ಸಾಹಿತ್ಯ ಸಮ್ಮೇಳನದ ಗೋಷ್ಠಿ, ಚರ್ಚೆಗಳನ್ನು ಸಾಧ್ಯವಾದಷ್ಟೂ ಮತೀಯಗೊಳಿಸಲು ಯತ್ನಿಸುತ್ತಾ ಬಂದ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಮಹೇಶ ಜೋಷಿಯವರಿಗೆ ಮಂಡ್ಯದ ಸಾಹಿತ್ಯ ಸಮ್ಮೇಳನದ ಮೂಲಕ ಸರಿಯಾದ ಉತ್ತರ ಸಿಕ್ಕಿದೆ.

ತಂಬಾಕು, ಮದ್ಯ ಮುಂತಾದ ನಿಷೇಧಿತ ವಸ್ತುಗಳ ಪಟ್ಟಿಗೆ ಮಾಂಸಾಹಾರವನ್ನು ಸೇರಿಸಿರುವ ಬಗೆಗೆ, ಅದನ್ನು ಯಾರೇ ಸೇರಿಸಿರಲಿ ನೈತಿಕ ಹೊಣೆ ಹೊತ್ತು ಕ್ಷಮೆ ಕೋರಿ ತಪ್ಪು ಸರಿಪಡಿಸಿಕೊಳ್ಳದೇ ಕಳ್ಳಾಟವಾಡಿದ ಜೋಷಿಯವರ ಶ್ರೇಷ್ಠತೆಯ ವ್ಯಸನದ ಬಲೂನಿಗೆ ಮಂಡ್ಯದ ಜನತೆ ಸೂಚಿ ಚುಚ್ಚಿ ಪಾಠ ಕಲಿಸಿದ್ದಾರೆ. ಮಂಡ್ಯದ ಜನಪರ ಸಂಘಟನೆಗಳು ಜನರಿಂದಲೇ ಕೋಳಿ, ಕುರಿ ಸಂಗ್ರಹಿಸಿ ಮಾಂಸದ ಊಟವನ್ನು ಸಾಹಿತ್ಯ ಸಮ್ಮೇಳನದಲ್ಲಿ ಬಡಿಸಿ ಆಹಾರದ ಹಕ್ಕು ಎತ್ತಿ ಹಿಡಿದಿದ್ದಲ್ಲದೇ, ಆಹಾರದಲ್ಲೂ ಶ್ರೇಷ್ಟ, ಕನಿಷ್ಠವೆಂಬ ತಾರತಮ್ಯಕ್ಕೆ ತಪರಾಕಿ ಕೊಟ್ಟಿದ್ದಾರೆ. ಇದಲ್ಲದೇ ಜಿಲ್ಲಾಡಳಿತವೂ ಸಹ ಸಮ್ಮೇಳನದ ಕೊನೆಯ ದಿನ ಕೋಳಿಮೊಟ್ಟೆಗಳನ್ನು ವಿತರಿಸಿ ಜನರ ಆಹಾರದ ಹಕ್ಕನ್ನು ಗೌರವಿಸುವ ಧೋರಣೆಗೆ ಮುನ್ನುಡಿ ಬರೆಯಲೇ ಬೇಕಾಗಿ ಬಂದಿದೆ.

ಸಮ್ಮೇಳನದ ಮೊದಲ ದಿನದ ಮೆರವಣಿಗೆಯಲ್ಲಿಯೇ ಸುಮಾರು ಒಂದು ಲಕ್ಷ ಜನರು ಪಾಲ್ಗೊಂಡಿದ್ದರು ಎನ್ನುತ್ತವೆ ವರದಿಗಳು. ಮೂರು ದಿನಗಳಲ್ಲಿ ಪಾಲ್ಗೊಂಡವರ ಲೆಕ್ಕ ಸೇರಿಸಿದರೆ ಸಂಖ್ಯೆ ಇನ್ನೂ ಜಾಸ್ತಿಯಾಗುತ್ತದೆ. ಸಾಹಿತ್ಯ ಸಮ್ಮೇಳನಗಳ ಕುರಿತು ಅವು ಜಾತ್ರೆಗಳಂತೆ, ಅಲ್ಲಿ ಗಂಭೀರ ಚರ್ಚೆಗಳು ನಡೆಯುವುದಿಲ್ಲ, ನಡೆಯುವುದು ಕಷ್ಟ ಎಂಬೆಲ್ಲಾ ಟೀಕೆಗಳಿವೆ. ಆದರೆ ಕೆಲವು ಗೊಂದಲ, ಗೋಜಲುಗಳ ನಡುವೆಯೂ ಮೂರು ದಿನಗಳ ಸಮ್ಮೇಳನದಲ್ಲಿ ಮಹತ್ವದ ಚರ್ಚೆ, ಕಲಾಪಗಳು ನಡೆದ ಬಗೆಗೆ ವರದಿಯಾಗಿದೆ.

ಮೊಬೈಲ್ ನೆಟ್‌ವರ್ಕ್ ಸಿಗಲಿಲ್ಲ. ಕವಿ-ಸಾಹಿತಿಗಳಿಗಿಂತ ರಾಜಕಾರಣಿ, ಸ್ವಾಮೀಜಿಗಳಿಗೆ ಆದ್ಯತೆ, ನೂಕು ನುಗ್ಗಲು, ವಸತಿ ವ್ಯವಸ್ಥೆಯ ಗೊಂದಲ, ವಾಹನ ದಟ್ಟಣೆ ಸಮಸ್ಯೆ ಮುಂತಾದ ಸಮಸ್ಯೆಗಳ ಬಗೆಗೂ ವರದಿಯಾಗಿದೆ. ಆದರೆ ಈ ಎಲ್ಲ ಸಮಸ್ಯೆಗಳಾಚೆಗೂ ಸಮ್ಮೇಳನವು ಹಲವು ಕಾರಣಗಳಿಗಾಗಿ ಮಹತ್ವದ್ದಾಗುತ್ತದೆ.

ನಾಡು-ನುಡಿ- ಜನರ ಬದುಕಿಗೆ ಸಂಬಂಧಿಸಿದ ಸಾಹಿತ್ಯ ಸಮ್ಮೇಳನದ ಹೆಸರಿನಲ್ಲಿ ಲಕ್ಷಗಟ್ಟಲೆ ಸಂಖ್ಯೆಯಲ್ಲಿ ಜನಸಾಮಾನ್ಯರು ಒಂದೆಡೆ ಸೇರುವುದು, ಸಾಹಿತಿಗಳು ಜನರೊಂದಿಗೆ ಬೆರೆಯುವುದು ಒಂದು ಮಹತ್ವದ ವಿಷಯ. ಇದಲ್ಲದೇ ಸುಮಾರು 450 ಪುಸ್ತಕ ಮಳಿಗೆಗಳಲ್ಲಿ ಪುಸ್ತಕ ಪ್ರದರ್ಶನ ಮತ್ತು ಮಾರಾಟದ ಏರ್ಪಾಡು ಆಗಿದ್ದು ಬಹಳಷ್ಟು ಪುಸ್ತಕ ಪ್ರಕಾಶಕರು, ಮಾರಾಟಗಾರರು ಪುಸ್ತಕ ಮಾರಾಟದ ಬಗೆಗೆ ಸಂತಸ ವ್ಯಕ್ತಪಡಿಸಿದ್ದಾರೆ. ನಾಡಿನ ಮೂಲೆಮೂಲೆಗಳಿಂದ ಬಂದ ಸಾಹಿತ್ಯಾಸಕ್ತರು ಸಮಾಜಮುಖಿ ಸಾಮಾಜಿಕ ಕಾರ್ಯಕರ್ತರು ಒಂದೆಡೆ ಕಲೆತು ಮುಖಾಮುಖಿ ಚರ್ಚಿಸಿದ್ದಾರೆ. ಮಂಡ್ಯ ಜನರ ಬದುಕು, ಭಾಷೆ, ಸಂಸ್ಕೃತಿಯನ್ನು ಸನಿಹದಿಂದ ಕಂಡಿದ್ದಾರೆ. ಆತಿಥ್ಯದ ಸವಿಯನ್ನು ಉಂಡಿದ್ದಾರೆ. ಅದೇ ಹೊತ್ತಿನಲ್ಲಿ ಸಾಹಿತ್ಯ ಸಮ್ಮೇಳನದಲ್ಲಿ ಸಾಹಿತ್ಯವೇ ಕಡಿಮೆ ಆಗಿದೆ ಎನ್ನುವ ವಿಮರ್ಶೆಯನ್ನು ಸಂಘಟಕರು ಗಂಭೀರವಾಗಿ ಪರಿಗಣಿಸಬೇಕಿದೆ. ಮುಂಬರುವ ಸಮ್ಮೇಳನಗಳಲ್ಲಾದರೂ ಸರಿ ಪಡಿಸಿಕೊಳ್ಳಬೇಕಿದೆ.

ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಇನ್ನೂ ಹೆಚ್ಚು ಅರ್ಥಪೂರ್ಣವಾಗಿ ಇನ್ನೂ ಹೆಚ್ಚು ವ್ಯವಸ್ಥಿತವಾಗಿ ನಡೆಸಬೇಕಾದ ಬಗೆಗೆ ಚರ್ಚೆ ಮಾಡಲು ಅವಕಾಶವಿದೆ. ಆದರೆ ಕನ್ನಡ ಸಾಹಿತ್ಯ ಸಮ್ಮೇಳನಗಳಂತಹ ಸಂದರ್ಭಗಳು ನಮ್ಮ ನಾಡಿನ ಜನರ ಬದುಕು ಸಾಗುತ್ತಿರುವ ಹಾದಿ, ಸಾಹಿತ್ಯ ಲೋಕವು ಅದಕ್ಕೆ ಸ್ಪಂದಿಸುತ್ತಿರುವ ರೀತಿಯ ಬಗೆಗೆ, ಎದುರಾಗಿರುವ ಸವಾಲುಗಳ ಬಗೆಗೆ ಹಾಗೆಯೇ ಪರಿಹಾರದ ದಾರಿಗಳ ಬಗೆಗೆ ಚರ್ಚಿಸುವ ಒಂದು ಮಹತ್ವದ ಸಂದರ್ಭ. ಮಡಿವಂತಿಕೆ, ಸಿನಿಕತನ ಎರಡನ್ನೂ ದೂರವಿಟ್ಟು ಸಾಹಿತ್ಯ ಸಮ್ಮೇಳನಗಳ ಎಲ್ಲ ಉತ್ತಮ ಶಿಫಾರಸ್ಸುಗಳನ್ನು ಜಾರಿ ಮಾಡುವಂತೆ ಸರಕಾರಗಳನ್ನು ಒತ್ತಾಯ ಮಾಡಬೇಕಾದ ಸಂದರ್ಭವಿದು. ಹಾಗೆಯೇ ಸಾಹಿತಿಗಳು ಜನರ ಬದುಕಿನ ದಟ್ಟ ಅನುಭವಗಳನ್ನು ಸಮರ್ಥವಾಗಿ ಬಿಂಬಿಸುವ ಗಟ್ಟಿ ಸಾಹಿತ್ಯವನ್ನು ಸೃಜಿಸಲು ಸಮ್ಮೇಳನವು ಸ್ಫೂರ್ತಿಯಾಗಲಿ.

ಚುನಾವಣೆಗಳನ್ನು ನಡೆಸುವ ನಿಯಮಗಳಿಗೆ ತರಬೇಕೆಂದಿರುವ ತಿದ್ದುಪಡಿಗಳನ್ನು ಹಿಂತೆಗೆದುಕೊಳ್ಳಬೇಕು

ರಾಜಕೀಯ ಪಕ್ಷಗಳು ಹಾಗೂ ಅಭ್ಯರ್ಥಿಗಳಿಗೆ ವೀಡಿಯೋ ಮತ್ತಿತರ ಡಿಜಿಟಲ್ ಜಾಡುಗಳ ಇಲೆಕ್ಟ್ರಾನಿಕ್ ದಾಖಲೆಗಳ ಲಭ್ಯತೆಯನ್ನು ನಿರ್ಬಂಧಿಸುವುದಕ್ಕಾಗಿ ಚುನಾವಣೆ ನಡೆಸುವ ನಿಯಮಗಳಿಗೆ ತಿದ್ದುಪಡಿ ತರುವ ಸರಕಾರದ ನಡೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾದ ಆಕ್ಷೇಪವನ್ನು ವ್ಯಕ್ತಪಡಿಸಿದೆ. ಚುನಾವಣಾ ಆಯೋಗ ಇದುವರೆಗೆ ಇರುವ ನಿಯಮಗಳನ್ನು ಹೆಚ್ಚಿನ ಪಾರದರ್ಶಕತೆಯನ್ನು ಖಾತ್ರಿಪಡಿಸುವ ಸಲುವಾಗಿ ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಿ ಜಾರಿಗೆ ತಂದಿತ್ತು.

ಈ ಹೊಸ ನಿಯಮಗಳ ಕರಡನ್ನು ಸಿದ್ದಪಡಿಸುವಾಗ ಸರ್ಕಾರವು ಭಾರತದ ಚುನಾವಣಾ ಆಯೋಗದೊಂದಿಗೆ ಸಮಾಲೋಚನೆ ನಡೆಸಿದೆ ಎಂದು ಪತ್ರಿಕಾ ವರದಿಗಳು ಹೇಳುತ್ತವೆ. ಇದಕ್ಕೆ ಚುನಾವಣಾ ಆಯೋಗ ಸಮ್ಮತಿ ವ್ಯಕ್ತಪಡಿಸಿದೆ ಎಂದೂ ವರದಿಯಾಗಿದೆ. ಆದರೆ ಇಂತಹ ಯಾವುದೇ ಸಮ್ಮತಿಯ ಮೊದಲು ಎಲ್ಲಾ ರಾಜಕೀಯ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸುವುದು ಹಲವಾರು ವರ್ಷಗಳಿಂದ ಸ್ಥಾಪಿತಗೊಂಡಿರುವ ವಿಧಾನ. ಸರಕಾರದ ಈಗಿನ ಕ್ರಮ ಇದಕ್ಕೆ ವ್ಯತಿರಿಕ್ತವಾಗಿದೆ ಎಂದು ಸಿಪಿಐ(ಎಂ) ಹೇಳಿದೆ.

ಚುನಾವಣಾ ಪ್ರಕ್ರಿಯೆಗಳನ್ನು ನಡೆಸುವ ವಿಷಯದಲ್ಲಿ ಪ್ರಶ್ನಿಸಲು ಅರ್ಜಿದಾರರಿಗೆ ಯಾವುದೇ ಹಕ್ಕಿಲ್ಲ ಎಂಬ ಸರ್ಕಾರದ ವಾದವು ಆಭಾಸಕಾರಿ. ಈ ನಿಲುವು ಈ ವಿಷಯದಲ್ಲಿ ಅನುಸರಿಸಬೇಕಾದ ವಿಧಿ-ವಿಧಾನಗಳಲ್ಲಿ ರಾಜಕೀಯ ಪಕ್ಷಗಳನ್ನು ಒಳಗೊಳ್ಳದಂತೆ ಸಂಪೂರ್ಣವಾಗಿ ಹೊರಗಿಡುತ್ತದೆ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಈ ಹಿಂದೆ, ನಿರ್ದಿಷ್ಟವಾಗಿ ತ್ರಿಪುರಾದಲ್ಲಿ ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಅವ್ಯವಹಾರದ ಆರೋಪಗಳು ಬಂದಾಗಿನ ಸಿಪಿಐ(ಎಂ) ಅನುಭವವೆಂದರೆ, ವೀಡಿಯೋ ದಾಖಲೆಗಳ ಪರೀಕ್ಷಣೆಯ ಫಲಿತಾಂಶವಾಗಿ ಎರಡೂ ಮತ ಕ್ಷೇತ್ರಗಳಲ್ಲಿ ಸುಮಾರು ಅರ್ಧದಷ್ಟು ಮತಗಟ್ಟೆಗಳಲ್ಲಿ ಮರು ಮತದಾನವನ್ನು ಪ್ರಕಟಿಸಲಾಗಿತ್ತು.

ಚುನಾವಣಾ ಪ್ರಕ್ರಿಯೆಗಳಲ್ಲಿ ತಂತ್ರಜ್ಞಾನವು ಒಂದು ಅವಿಭಾಜ್ಯ ಅಂಗವಾಗಿರುವ ಈ ಯುಗದಲ್ಲಿ, ಸರ್ಕಾರದ ಈ ನಡೆಯು ಒಂದು ಪ್ರತಿಗಾಮಿ ಹೆಜ್ಜೆಯನ್ನು ಸೂಚಿಸುತ್ತದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ, ಇದರಿಂದಾಗಿ ಚುನಾವಣೆ ನಡೆಸುವ ನಿಯಮಗಳಿಗೆ ಪ್ರಸ್ತಾಪಿತ ತಿದ್ದುಪಡಿಗಳನ್ನು ತಕ್ಷಣವೇ ಹಿಂತೆಗೆದುಕೊಳ್ಳಬೇಕೆಂದು ಆಗ್ರಹಿಸಿದೆ.

ಅಮಿತ್ ಷಾ ರಾಜೀನಾಮೆಗೆ ಆಗ್ರಹಿಸಿ ಎಡಪಕ್ಷಗಳ ದೇಶವ್ಯಾಪಿ ಪ್ರತಿಭಟನೆ: ಡಿಸೆಂಬರ್ 30

ರಾಜ್ಯಸಭೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ ನೀಡಿರುವ ಡಾ. ಬಿ.ಆರ್.ಅಂಬೇಡ್ಕರ್ ಬಗ್ಗೆ ಅಗೌರವ ಮತ್ತು ಅವಹೇಳನಕಾರಿ ಹೇಳಿಕೆಗಳ ಪರಿಣಾಮವಾಗಿ, ದೇಶಾದ್ಯಂತ ವ್ಯಾಪಕ ಆಕ್ರೋಶ ಮತ್ತು ಪ್ರತಿಭಟನೆಗಳು ನಡೆದಿವೆ. ಆದರೆ, ಅಮಿತ್ ಷಾ ಆಗಲೀ ಅಥವಾ ಪ್ರಧಾನ ಮಂತ್ರಿ ನರೇಂದ್ರ ಮೋದಿಯಾಗಲೀ ಇದಕ್ಕೆ ತಾವು ಹೊಣೆ ಎಂಬುದನ್ನು ಸ್ವೀಕರಿಸಲು, ಮತ್ತು ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಿದ್ಧರಿಲ್ಲ. ಆದ್ದರಿಂದ ಎಡಪಕ್ಷಗಳು ಈಗ ನಡೆಯುತ್ತಿರುವ ಪ್ರತಿಭಟನೆಗಳನ್ನು ಮುಂದುವರಿಸಲು ನಿರ್ಧರಿಸಿವೆ ಮತ್ತು ಡಿಸೆಂಬರ್ 30ರಂದು ಜಂಟಿಯಾಗಿ ಪ್ರತಿಭಟನಾ ದಿನವನ್ನು ಆಯೋಜಿಸಲು ನಿರ್ಧರಿಸಿವೆ. ಅಮಿತ್ ಷಾ ಗೃಹ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಈ ರಾಷ್ಟ್ರವ್ಯಾಪಿ ಪ್ರತಿಭಟನಾ ದಿನವು ಆಗ್ರಹಿಸಲಿದೆ ಎಂದು ದಿಲ್ಲಿಯಲ್ಲಿ ಸಭೆ ಸೇರಿದ ಎಡಪಕ್ಷಗಳ ಮುಖಂಡರು ಪ್ರಕಟಿಸಿರುವ ಜಂಟಿ ಪತ್ರಿಕಾ ಹೇಳಿಕೆಯಲ್ಲಿ ಹೇಳಿದ್ದಾರೆ.

ಏಕಕಾಲದಲ್ಲಿ ಚುನಾವಣೆಗಳು: ಪ್ರಜಾಪ್ರಭುತ್ವ ಮತ್ತು ಒಕ್ಕೂಟ ತತ್ವದ ಮೇಲೆ ಆಕ್ರಮಣ

ಈಗ ಸಂಸತ್ತಿನಲ್ಲಿ ಒಂದು ಸಂವಿಧಾನ ತಿದ್ದುಪಡಿ ವಿಧೇಯಕ ಸೇರಿದಂತೆ ಎರಡು ವಿಧೇಯಕಗಳ ಮೂಲಕ ಮಂಡಿಸಲಾಗಿರುವ 'ಒಂದು ರಾಷ್ಟ್ರ, ಒಂದು ಚುನಾವಣೆ' ಪ್ರಸ್ತಾವನೆಯನ್ನು ಎಡಪಕ್ಷಗಳು ನಿಸ್ಸಂದಿಗ್ಧವಾಗಿ ವಿರೋಧಿಸುವುದಾಗಿ ಎಡಪಕ್ಷಗಳ ಮುಖಂಡರ ಹೇಳಿಕೆ ತಿಳಿಸಿದೆ. ಸಂವಿಧಾನಕ್ಕೆ ಪ್ರಸ್ತಾವಿತ ತಿದ್ದುಪಡಿಗಳು ಒಕ್ಕೂಟ ರಚನೆ ಮತ್ತು ರಾಜ್ಯ ಶಾಸನ ಸಭೆಗಳು ಹಾಗೂ ಅವುಗಳನ್ನು ಆಯ್ಕೆ ಮಾಡುವ ಜನರ ಹಕ್ಕುಗಳ ಮೇಲೆ ನೇರ ಪ್ರಹಾರವಾಗಿವೆ.

ಇದು ಶಾಸನ ಸಭೆಗಳ ಐದು ವರ್ಷಗಳ ಅವಧಿಯನ್ನು ಮನಬಂದಂತೆ ಕಡಿತಗೊಳಿಸುವ ಮೂಲಕ ಕೇಂದ್ರೀಕರಣ ಮತ್ತು ಜನರ ಇಚ್ಛೆಯನ್ನು ಮೊಟಕುಗೊಳಿಸುವ ಕ್ರಮವಾಗಿದೆ ಎಂದಿರುವ ಎಡಪಕ್ಷಗಳು 'ಒಂದು ರಾಷ್ಟ್ರ, ಒಂದು ಚುನಾವಣೆ' ಯೋಜನೆಯ ವಿರುದ್ಧ ದೇಶಾದ್ಯಂತ ಪ್ರಚಾರಾಂದೋಲನ ನಡೆಸುವುದಾಗಿ ಹೇಳಿವೆ.

ಸಿಸಿಟಿವಿ ಕ್ಯಾಮೆರಾ ಮತ್ತು ವೀಡಿಯೋ ಫೂಟೇಜ್ ನಂತಹ ಎಲೆಕ್ಟ್ರಾನಿಕ್ ದಾಖಲೆಗಳ ಸಾರ್ವಜನಿಕ ತಪಾಸಣೆಯ ಹಕ್ಕನ್ನು ರದ್ದುಪಡಿಸುವ ಚುನಾವಣೆ ನಡೆಸುವ ನಿಯಮಗಳ ತಿದ್ದುಪಡಿಯನ್ನು ಹಿಂಪಡೆಯಬೇಕು ಎಂದು ಎಡಪಕ್ಷಗಳು ಒತ್ತಾಯಿಸಿವೆ.

ಐಕ್ಯ ಮಧ್ಯಪ್ರವೇಶ

ಮುಂದಿನ ದಿನಗಳಲ್ಲಿ ರಾಜಕೀಯ ಮತ್ತು ಜನರ ಸಮಸ್ಯೆಗಳ ಬಗ್ಗೆ ಎಡಪಕ್ಷಗಳ ಮಧ್ಯಪ್ರವೇಶವನ್ನು ಹೆಚ್ಚಿಸಲು ಸಭೆ ನಿರ್ಧರಿಸಿತು. ಇದಕ್ಕಾಗಿ, ಎಡ ನೀತಿಗಳನ್ನು ಮುಂದಿಡಲು ಮತ್ತು ಜಂಟಿ ಕಾರ್ಯಾಚರಣೆಗಳನ್ನು ಉತ್ತೇಜಿಸಲು ಎಡಪಕ್ಷಗಳ ನಿಯಮಿತ ಸಭೆಗಳನ್ನು ನಡೆಸಲು ಈ ಸಭೆ ನಿರ್ಧರಿಸಿತು. ಈ ಜಂಟಿ ಹೇಳಿಕೆಗೆ ಡಿ.ರಾಜಾ (ಸಿಪಿಐ ಪ್ರಧಾನ ಕಾರ್ಯದರ್ಶಿ), ಪ್ರಕಾಶ್‌ಕಾರಟ್ (ಸಿಪಿಐ(ಎಂ) ಪೊಲಿಟ್‌ಬ್ಯುರೊ ಸಂಯೋಜಕರು), ದೀಪಂಕರ ಭಟ್ಟಾಚಾರ್ಯ (ಸಿಪಿಐ(ಎಂಎಲ್) ಲಿಬರೇಶನ್ ಪ್ರಧಾನ ಕಾರ್ಯದರ್ಶಿ), ಮನೋಜ್ ಭಟ್ಟಾಚಾರ್ಯ (ಆರ್‌ಎಸ್‌ಪಿ ಪ್ರಧಾನ ಕಾರ್ಯದರ್ಶಿ) ಮತ್ತು ಜಿ.ದೇವರಾಜನ್ (ಅಖಿಲ ಭಾರತ ಫಾರ್ವರ್ಡ್ ಬ್ಲಾಕ್‌ನ ಪ್ರಧಾನ ಕಾರ್ಯದರ್ಶಿ) ಸಹಿ ಹಾಕಿದ್ದಾರೆ.

ಬ್ರಾಹ್ಮಣತ್ವವನ್ನು ತಗ್ಗಿಸಿದ ಬ್ರಿಟಿಷ್ ಕಾನೂನುಗಳು

ಪ್ರಸ್ತುತ ಅಧಿಕಾರದಲ್ಲಿರುವ ಬಿಜೆಪಿ ನೇತೃತ್ವದ ಸರಕಾರ ಈಗಿರುವ ಸಂವಿಧಾನವನ್ನು ಬದಿಗೊತ್ತಿ, ಅದರ ಸ್ಥಾನದಲ್ಲಿ ಮನುಸ್ಮತಿಯನ್ನು ತಂದು ನಿಲ್ಲಿಸಲು ಪ್ರಯತ್ನಿಸುತ್ತಿದೆ. ಈ ಸಂದರ್ಭದಲ್ಲಿ ಮನುಸ್ಮೃತಿ ಎಂದರೇನು? ಬ್ರಾಹ್ಮಣವಾದ ಎಂದರೇನು? ಭಾರತದಲ್ಲಿ ಭಯಾನಕವಾಗಿ ಬೇರೂರಿದ್ದ ಮನುವಾದಿ ಸಿದ್ಧಾಂತವನ್ನು ದುರ್ಬಲಗೊಳಿಸಲು ಬ್ರಿಟಿಷರು ಏನೆಲ್ಲಾ ಕಾನುನುಗಳನ್ನು ತಂದು ಹೇಗೆಲ್ಲಾ ನಿರ್ವಹಿಸಿದರು ಎಂಬುದನ್ನು ಪ್ರಸಿದ್ಧ ಸಾಹಿತಿ, ಜೀವಶಾಸ್ತ್ರಜ್ಞರಾದ ಡಾ.ದೇವರಾಜು ಮಹಾರಾಜು ಅವರು (ಮೆಲ್ಬೋರ್ನ್‌ನಿಂದ) ಈ ಲೇಖನದಲ್ಲಿ ವಿವರಿಸಿದ್ದಾರೆ.

ಒಂದು ಕಾಲದಲ್ಲಿ ಭಾರತದಲ್ಲಿ ಸಮುದಾಯದ ಜೀವನ ಎಷ್ಟು ಶೋಚನೀಯವಾಗಿತ್ತು ಎಂದು ತಿಳಿದರೆ ಹೃದಯ ವಿದ್ರಾವಕವಾಗುತ್ತದೆ. ಅಂದಿನ ಬ್ರಿಟಿಷ್ ಸರ್ಕಾರ ಮಾಡಿದ ಕಾನೂನುಗಳು ಅಂದಿನ ಸಮಾಜದಲ್ಲಿ ಬದಲಾವಣೆಗಳನ್ನು ತರಲು ಎಷ್ಟರ ಮಟ್ಟಿಗೆ ಉಪಯುಕ್ತವಾಗಿವೆ? ಭಯಾನಕವಾಗಿ ಬೇರೂರಿದ್ದ ಮನುವಾದಿ ಸಿದ್ಧಾಂತವನ್ನು ದುರ್ಬಲಗೊಳಿಸಲು ಆ ಕಾನೂನುಗಳು ಹೇಗೆಲ್ಲಾ ನಿರ್ವಹಿಸಿದವು? ಒಂದು ಅವಲೋಕನವನ್ನು ನೀಡಲು ನಾನು ಇಲ್ಲಿ ಕೆಲವು ಪ್ರಮುಖ ಅಂಶಗಳನ್ನು ಸೇರಿಸುತ್ತಿದ್ದೇನೆ.

'ಸತಿ ಸಹಗಮನ' ಪದ್ಧತಿ

'ಸತಿ ಸಹಗಮನ' ಎಂಬ ಅನಿಷ್ಟ ಪದ್ಧತಿ ಅಂದಿನ ಸಮಾಜದಲ್ಲಿ ಅತ್ಯಗತ್ಯವಾಗಿತ್ತು. ಗಂಡ ಸತ್ತರೆ ಗಂಡನ ಚಿತೆಗೆ ಹೆಂಡತಿಯನ್ನು ಎಸೆದು ಜೀವಂತವಾಗಿ ಸುಟ್ಟು ಹಾಕುತ್ತಿದ್ದರು. ಹೆಂಡತಿ ಎಷ್ಟು ಚಿಕ್ಕವಳು ಎಂಬುದನ್ನೂ ಅವರು ಲೆಕ್ಕಿಸುತ್ತಿರಲಿಲ್ಲ. ವಯಸ್ಸಾದ ಪುರುಷರಿಗೆ (ಮುದುಕರು) ಯುವತಿಯರನ್ನು ಮದುವೆ ಮಾಡಿಕೊಡುವುದು ವಾಡಿಕೆಯಾಗಿತ್ತು. ಮುದುಕ ಸತ್ತರೆ, ಹೆಂಡತಿಯಾಗಿ ಎಷ್ಟೇ ಚಿಕ್ಕ ಹುಡುಗಿ ಅಥವಾ ಯುವತಿಯಾದರೂ ಸರಿ, ಆಕೆ ಆತನ ಶವದ ಜೊತೆಯಲ್ಲಿ ತಾನೂ ಚಿತೆಗೆ ಹೋಗಬೇಕಾಗಿತ್ತು. ಆ ರೀತಿ ಚಿತೆಗೆ ಹಾಕುವ ಹೆಣ್ಣು (ಹೆಂಡತಿ) ಬೆಂಕಿಯಲ್ಲಿ ಸುಟ್ಟು ಮೈ ಮೇಲಿನ ಗುಳ್ಳೆಗಳೊಂದಿಗೆ ಹೊರಬರಲು ಪ್ರಯತ್ನಿಸಿದರೆ, ಅವಳನ್ನು ನಿರ್ದಯವಾಗಿ ದೊಡ್ಡ ಕೋಲುಗಳಿಂದ ಚಿತೆಯ ಬೆಂಕಿಗೆ ಮತ್ತೆ ತಳ್ಳಲಾಗುತ್ತಿತ್ತು. ಅವಳು ಸುಟ್ಟು ಬೂದಿಯಾಗುವವರೆಗೂ ಇದೇ ರೀತಿ ಮಾಡುತ್ತಿದ್ದರು. ಇದನ್ನೇ ಸನಾತನ ಧರ್ಮ ಎಂದು ಬಡಾಯಿ ಕೊಚ್ಚಿಕೊಳ್ಳುವವರಿಗೆ ನಾಚಿಕೆಯಾಗಬೇಕಲ್ಲವೇ?

ಬಾಲ್ಯ ವಿವಾಹ

ಈ ಅನಿಷ್ಟ ಪದ್ಧತಿಗೆ ಕಡಿವಾಣ ಹಾಕಲು ಅಂದಿನ ಬ್ರಿಟಿಷ್ ಸರಕಾರ ಸತಿ ಸಹಗಮನ ನಿಷೇಧ ಕಾಯಿದೆ (1829) ಜಾರಿಗೆ ತಂದಿತು. ಅಲ್ಲದೆ ಒಪ್ಪಿಗೆಯ ವಯಸ್ಸಿನ ವಿವಾಹ ಕಾಯಿದೆಯನ್ನು (1891) ತಂದರು. ಇವುಗಳಿಂದಾಗಿ ಸತಿಯ ಒಪ್ಪಿಗೆಯ ನಡುವೆಯೂ ಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡುವ ಪದ್ಧತಿ ಮುಂದುವರೆಯಿತು. ಆದ್ದರಿಂದ, ಸತಿ ಸಹಗಮನ ಪದ್ಧತಿ ನಿಷೇಧದ ನೂರು ವರ್ಷಗಳ ನಂತರ, ಅವರು ಬಾಲ್ಯ ವಿವಾಹ ಕಾಯ್ದೆಯನ್ನು (1929) ಜಾರಿಗೊಳಿಸಬೇಕಾಯಿತು. ಅದರ ಫಲವಾಗಿ ಸಮಾಜದಲ್ಲಿ ಸಾಕಷ್ಟು ಬದಲಾವಣೆಗಳಾದವು. ಪ್ರೌಢಾವಸ್ಥೆಯ ನಂತರವೇ ಮದುವೆಗಳು ನಡೆಯಲಾರಂಭಿಸಿದವು.

ಮೊದಲ ಮಗುವನ್ನು ಗಂಗೆಗೆ ಅರ್ಪಿಸುವ ಪದ್ಧತಿ

ಪ್ರಾಚೀನ ಸಮಾಜದಲ್ಲಿ ಮೊದಲ ಮಗುವನ್ನು ಗಂಗೆಗೆ ಅರ್ಪಿಸುವ ಪದ್ಧತಿ ಇತ್ತು. ಗಂಗೆಯಲ್ಲಿ(ನೀರಿನಲ್ಲಿ) ಶಿಶುಗಳನ್ನು ಕೊಲ್ಲುವುದು ಅನ್ಯಾಯವಲ್ಲದೆ ಅದು ಹೇಗೆ ಧರ್ಮವಾಗುತ್ತದೆ? ನೀರಿನಲ್ಲಿ (ಗಂಗೆ) ತೇಲುವ ಶಿಶುಗಳನ್ನು ತಂದು ಬೆಳೆಸುವುದನ್ನು ಹಿಂದೂ ಪುರಾಣಗಳಲ್ಲಿ ನಾವು ನೋಡುತ್ತೇವೆ. ಮಹಾಭಾರತದಲ್ಲಿ ಕುಂತಿಪುತ್ರ ಕರ್ಣನನ್ನು ಗಂಗೆಯಲ್ಲಿ ತೇಲಿ ಬಿಡಲಿಲ್ಲವೇ? ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಲು ಬ್ರಿಟಿಷ್ ಸರ್ಕಾರವು ಶಿಶುಹತ್ಯೆ ನಿಷೇಧ ಕಾಯಿದೆಯನ್ನು (1804) ತಂದಿತು. ಹೆಣ್ಣು ಮಗುವನ್ನು ಗಂಗಾನದಿಯಲ್ಲಿ ಎಸೆಯುವ ಪದ್ಧತಿಯನ್ನು ನಿಷೇಧಿಸುವ ಕಾನೂನು ಇದಾಗಿದೆ ಎಂದೂ ಅವರು ಹೇಳಿದರು. ಸತ್ಯವನ್ನು ಸ್ಥಾಪಿಸಿದ್ದಕ್ಕಾಗಿ ಕ್ರಿಶ್ಚಿಯನ್ ಧಾರ್ಮಿಕ ನ್ಯಾಯಾಲಯಗಳಿಂದ ಶಿಕ್ಷೆಗೆ ಒಳಗಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದ ವಿಜ್ಞಾನಿಗಳು ಯುರೋಪ್ ದೇಶಗಳಲ್ಲಿ ಕೆಲವು ಮಂದಿ ಇದ್ದಾರೆ. ಅವರು ಬೆರಳೆಣಿಕೆಯಷ್ಟಿದ್ದಾರೆ. ಆದರೂ ಅವರ ತ್ಯಾಗವು ಏನನ್ನಾದರೂ ಅರ್ಥೈಸುತ್ತದೆ. ಇಲ್ಲಿಯೂ ಸಹಸ್ರಾರು ಮತ್ತು ಕೋಟಿಗಟ್ಟಲೆ ಸ್ತ್ರೀಯರು ಈ ಬ್ರಾಹ್ಮಣ ಪ್ರಾಬಲ್ಯದ ವಿಕೃತಿಗೆ ಬೆಂಕಿಯಲ್ಲಿ ಸಜೀವ ದಹನವಾದರು. ಆ ಸ್ತ್ರೀಯರ ಬಲಿದಾನಕ್ಕೆ ಬೆಲೆಯಿಲ್ಲ.

ಶೂದ್ರ ವಧುವು ಮೊದಲ ಮೂರು ರಾತ್ರಿಗಳನ್ನು ಬ್ರಾಹ್ಮಣನೊಂದಿಗೆ

ಮದುವೆಯಾದ ಪ್ರತಿ ಶೂದ್ರ ವಧುವು ಮೊದಲ ಮೂರು ರಾತ್ರಿಗಳನ್ನು ಬ್ರಾಹ್ಮಣನೊಂದಿಗೆ ಕಳೆಯಬೇಕೆಂಬುದು ಆ ಕಾಲದ ಬ್ರಾಹ್ಮಣ ಧರ್ಮದಿಂದ ಆಚರಿಸಲ್ಪಟ್ಟ ಕೆಟ್ಟ ಪದ್ಧತಿಯಾಗಿತ್ತು. ಎಲ್ಲದರಲ್ಲೂ ಬ್ರಾಹ್ಮಣರ ಅಹಂಕಾರ, ಪ್ರಾಬಲ್ಯ ಈ ಪ್ರತಿ ವಿಷಯದಲ್ಲಿಯೂ ಎದ್ದು ಕಾಣುತ್ತದೆ. ಇದನ್ನು ತಡೆಯಲು ಅಂದಿನ ಬ್ರಿಟಿಷ್ ಸರ್ಕಾರ ಒಂದು ಕಾನೂನು ಜಾರಿಗೆ ತಂದಿತು. ಶೂದ್ರ ವಧು ಬ್ರಾಹ್ಮಣನೊಂದಿಗೆ ಮೊದಲ ಮೂರು ರಾತ್ರಿಗಳನ್ನು ಕಳೆಯುವ ನಿಷೇಧ ಕಾಯಿದೆ (1819) ನೊಂದಿಗೆ ಪರಿಸ್ಥಿತಿಗಳು ಬದಲಾದವು. ಇದರಿಂದ ಶೂದ್ರ ಮಹಿಳೆಯರು ತಮ್ಮ ಸ್ವಾಭಿಮಾನವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು. ಲೈಂಗಿಕ ಸಂಬಂಧಗಳಲ್ಲಿ ನೈತಿಕತೆಯು ಬಲಗೊಂಡಿತು.

ಕಟ್ಟಡಗಳ ಬುನಾದಿಗೆ ನರ–ಬಲಿ

ದೊಡ್ಡ ದೊಡ್ಡ ಕಟ್ಟಡಗಳ ಬುನಾದಿಯಲ್ಲಿ 'ಚರಕ ಪೂಜೆ'ಯ ಹೆಸರಿನಲ್ಲಿ ಅಲ್ಲಿ ಒಬ್ಬ ಶೂದ್ರನನ್ನು ಸಜೀವವಾಗಿ ಬಲಿ ಕೊಡಲಾಗುತ್ತಿತ್ತು. ಹೀಗೆ ಒಂದೊಂದಾಗಿ 1837–1852ರ ಅವಧಿಯಲ್ಲಿ ನಡೆಯುತ್ತಿದ್ದ ನರ ಬಲಿಗಳನ್ನು ಬ್ರಿಟಿಷ್ ಸರ್ಕಾರ ಕಾನೂನು ರಚಿಸಿ ತಡೆಯಿತು. ನರಬಲಿ ಕಡಿಮೆಯಾದರೂ ಪ್ರಾಣಿಬಲಿ ಮುಂದುವರೆಯುತ್ತಲೇ ಬಂತು. ಇಂದಿಗೂ ಕೆಲವು ಪ್ರದೇಶಗಳಲ್ಲಿ ಮತ್ತು ಕೆಲವು ಸಂದರ್ಭಗಳಲ್ಲಿ ಇವು ಮುಂದುವರೆಯುತ್ತಲೇ ಇವೆ. ಯಜ್ಞ, ಯಾಗಗಳ ಹೆಸರಿನಲ್ಲಿ ಪ್ರಾಣಿಗಳನ್ನು ಬಲಿಕೊಡುವ ಆಚರಣೆಯನ್ನು ಮೊದಲು ಸನಾತನ ಹಿಂದೂ ಧರ್ಮದರ್ಶಿಗಳು ಆರಂಭಿಸಿದರು. ಅದಕ್ಕೆ 'ಬಲಿ' ಎಂಬ ಒಂದು ದೊಡ್ಡ ಹೆಸರು ಇಟ್ಟುಕೊಂಡರಾದರೂ, ಪ್ರಾಣಿಗಳನ್ನು ಕೊಂದು ತಿನ್ನುತ್ತಿದ್ದುದೇ ಅಲ್ಲಿ ನಡೆಯುತ್ತಿತ್ತು. ಇಂದ್ರ, ವರುಣ ಎಂಬ ಇಲ್ಲದ ದೇವರುಗಳ ಹೆಸರು ಹೇಳಿ, ಮಾಂಸ ತಿಂದು, ಮದ್ಯ ಕುಡಿದು ಆನಂದಿಸುವುದೇ ಯಜ್ಞವಾಗಿತ್ತು– ಮೇಲಾಗಿ ಆ ಯಜ್ಞಗಳಿಂದ ರಾಜ್ಯದಲ್ಲಿ ಶಾಂತಿ ನೆಲೆಸುತ್ತದೆ, ಪರಿಸರ ಸ್ವಚ್ಛವಾಗುತ್ತದೆ, ಇಷ್ಟಾರ್ಥ ಸಿದ್ಧಿಸುತ್ತದೆ, ಸಮಾಜ ಉನ್ನತಿಯಾಗುತ್ತದೆ ಎಂದು ಸನಾತನವಾದಿಗಳು ಸುಳ್ಳು ಪ್ರಚಾರ ಮಾಡಿದರು.

ಶೂದ್ರರಿಗೆ ವಿದ್ಯೆ ಕಲಿಯುವ ಹಕ್ಕು, ಸಂಪತ್ತಿನ ಹಕ್ಕು ಇರಲಿಲ್ಲ

ಶೂದ್ರರಿಗೆ ವಿದ್ಯೆ ಕಲಿಯುವ ಹಕ್ಕು, ಸಂಪತ್ತಿನ ಹಕ್ಕು ಈ ಯಾವುವೂ ಬ್ರಾಹ್ಮಣ ಪ್ರಾಬಲ್ಯದ ಸಮಾಜದಲ್ಲಿ ಇರಲಿಲ್ಲ. ನಿರ್ಲಕ್ಷಿಸಲ್ಪಟ್ಟ ಯಾವುದೇ ಶೂದ್ರನು ವೇದಾಧ್ಯಯನ ಮಾಡಲು ಪ್ರಯತ್ನಿಸಿದರೆ ಆತನ ನಾಲಿಗೆಯನ್ನು ಕತ್ತರಿಸುತ್ತಿದ್ದರು. ಶೂದ್ರನು ಕಿವಿಯಲ್ಲಿ ಕೇಳಿಸಿಕೊಂಡರೆ ಅವನ ಕಿವಿಯಲ್ಲಿ ಸೀಸವನ್ನು ಸುರಿಯುತ್ತಿದ್ದರು. ಕಷ್ಟಪಟ್ಟು ಶೂದ್ರರು ಹಣ ಸಂಪಾದಿಸಿದರೂ ಅದರ ಮೇಲಿನ ಹಕ್ಕು ಬ್ರಾಹ್ಮಣನಿಗೆ ಇತ್ತು. ಈ ಪದ್ಧತಿಯನ್ನು ಬದಲಾಯಿಸಲು, ಅಂದಿನ ಬ್ರಿಟಿಷ್ ಸರ್ಕಾರವು ಗುಲಾಮ ಪದ್ದತಿ ನಿಷೇಧ ಕಾಯ್ದೆ (1813) ಅನ್ನು ತಂದಿತು. ಶೂದ್ರರಿಗೆ ಅವರ ಸಂಪತ್ತಿನ ಮೇಲೆ ಹಕ್ಕುಗಳನ್ನು ನೀಡುವ ಆಸ್ತಿ ಹಕ್ಕು ಕಾಯಿದೆ (1875) ಅನ್ನು ತರಲಾಯಿತು. ಮನುಧರ್ಮ ಶಾಸ್ತ್ರದ ಪ್ರಕಾರ – ಎಸ್‌ಸಿ, ಎಸ್‌ಟಿ, ಒಬಿಸಿ, ರೆಡ್ಡಿ, ಕಮ್ಮ, ಕಾಪು ಹೀಗೆ ಎಲ್ಲಾ ಜಾತಿಯವರೂ ಬ್ರಾಹ್ಮಣರಿಗೆ ಗುಲಾಮರೇ!

ಮಹಿಳೆಯರನ್ನೂ ಕೀಳಾಗಿ ಕಾಣಲಾಗುತ್ತಿತ್ತು

ಇನ್ನೂ ಹೇಳಬೇಕೆಂದರೆ, ಮಹಿಳೆಯರೂ ಕೀಳು! ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮಹಿಳೆಯರಿಗೆ ವಿನಾಯಿತಿಯೇನೂ ಇರಲಿಲ್ಲ. ಅವರೂ ಸಹಾ ಶೂದ್ರರೇ. ಶೂದ್ರರಿಗೆ ವಿದ್ಯೆಯ ಹಕ್ಕು, ಆಸ್ತಿಯ ಹಕ್ಕು ಇಲ್ಲದಿರುವಂತೆ ಮಹಿಳೆಯರಿಗೂ ವಿದ್ಯೆಯ ಹಕ್ಕು ಮತ್ತು ಆಸ್ತಿಯ ಹಕ್ಕು ಇರಲಿಲ್ಲ. ಬ್ರಿಟಿಷರು ಕಾನೂನು ಜಾರಿಗೆ ತಂದ ನಂತರವೇ, ಎಲ್ಲಾ ಸಮುದಾಯಗಳ ಮಹಿಳೆಯರಿಗೆ, ಶೂದ್ರರಿಗೆ, ದಲಿತರಿಗೆ, ಆದಿವಾಸಿಗಳಿಗೆ ಈ ವಿಷಯಗಳಲ್ಲಿ ಸ್ವಲ್ಪ ಸ್ವಾತಂತ್ರ್ಯ ಲಭಿಸಿತು. ಸಮಾಜದಲ್ಲಿ ಅತ್ಯಂತ ಕಡಿಮೆ ಶೇಕಡಾವಾರು ಇರುವ ಪುರುಷ ಬ್ರಾಹ್ಮಣರು ಮಾತ್ರವೇ ವಿದ್ಯೆ ಕಲಿಯಲು ಅರ್ಹತೆ ಹೊಂದಿದ್ದರು. ಕ್ಷತ್ರಿಯರು, ವೈಶ್ಯ ಸಮುದಾಯಗಳು ಬ್ರಾಹ್ಮಣರ ಬಳಿಯೇ ವಿದ್ಯೆಯನ್ನು ಕಲಿಯಬೇಕಾಗಿತ್ತು. ಹೀಗೆ ತಮ್ಮ ಪ್ರಾಬಲ್ಯವನ್ನು ಮುಂದುವರೆಸಿದರು. ಬ್ರಿಟಿಷ್ ಸರ್ಕಾರವು ಹಿಂದೂ ಮಹಿಳೆಯರ ಆಸ್ತಿ ಹಕ್ಕು ಕಾಯಿದೆ (1837) ಅನ್ನು ತಂದಿತು. ಅದರೊಂದಿಗೆ, ಮಹಿಳೆ– ಪುರುಷನ ಆಸ್ತಿಯ ಭಾಗವಲ್ಲ, ಆತ್ಮಗೌರವದೊಂದಿಗೆ ಅವರೂ ಸಮಾಜದ ಭಾಗವಾಗಿದ್ದಾರೆ ಎಂದು ಹೇಳಲಾಗುತ್ತದೆ. ಇಂಗ್ಲಿಷ್ ಶಿಕ್ಷಣ ಕಾಯಿದೆ, 1835 (English Education Act (1835), ಸರ್ಕಾರಿ ಉದ್ಯೋಗ ಕಾಯಿದೆ (1833) (Government Employment Act (1833) ಗಳ ಪರಿಚಯದೊಂದಿಗೆ ಸಮಾಜದ ಸ್ವರೂಪವು ವೇಗವಾಗಿ ಬದಲಾಗುತ್ತ ಬಂದಿದೆ.



ಶೂದ್ರರು ಮಾಡಿದರೆ ಕಠಿಣ ಶಿಕ್ಷೆ, ಬ್ರಾಹ್ಮಣರು ಮಾಡಿದರೆ...

ಇನ್ನು ಅಪರಾಧಗಳ ವಿಷಯಕ್ಕೆ ಬಂದರೆ, ಮಾಡಿದ ಅಪರಾಧಗಳು ಒಂದೇ ಆಗಿದ್ದರೂ, ಮನುಷ್ಯರ ಜಾತಿ, ವರ್ಗ ಅವಲಂಬಿಸಿ ಶಿಕ್ಷೆಗಳಿದ್ದವು. ಮನುಸ್ಮೃತಿಯನ್ನು ಬ್ರಾಹ್ಮಣರೇ ಬರೆದಿರುವುದರಿಂದ ಅವರಿಗೆ ಕಠಿಣ ಶಿಕ್ಷೆಯನ್ನು ಬರೆದುಕೊಳ್ಳಲಿಲ್ಲ ಅಲ್ಲವೇ? ಆದ್ದರಿಂದ ಬ್ರಾಹ್ಮಣರಿಗೆ ಯಾವುದೇ ಶಿಕ್ಷೆಗಳು ಇರಲಿಲ್ಲ. ಇದ್ದರೂ ಅತಿ ಹಗುರವಾದ ಶಿಕ್ಷೆಗಳು ಮಾತ್ರವೇ ಇದ್ದವು. ಶೂದ್ರರಿಗೆ, ದಲಿತರಿಗೆ, ಆದಿವಾಸಿಗಳಿಗೆ ಕಠಿಣವಾದ ಶಿಕ್ಷೆಗಳಿದ್ದವು. ಈ ಪರಿಸ್ಥಿತಿಯನ್ನು ಬದಲಾಯಿಸಲು, ಬ್ರಿಟಿಷ್ ಸರ್ಕಾರವು ಸಮಾನ ಶಿಕ್ಷೆ ಕಾಯಿದೆಯನ್ನು (1817) ಜಾರಿಗೆ ತಂದಿತು. ಅಂದಿನಿಂದ, ಅಪರಾಧಿಗಳ ವಿರುದ್ಧ ತಾರತಮ್ಯವಿಲ್ಲದೆ ಒಂದೇ ರೀತಿಯ ಅಪರಾಧಕ್ಕೆ – ಒಂದೇ ರೀತಿಯ ಶಿಕ್ಷೆ ವಿಧಿಸುವುದು ನಡೆಯುತ್ತ ಬಂದಿದೆ. ಅದಕ್ಕೂ ಮೊದಲು ಬ್ರಾಹ್ಮಣನು ಯಾವ ತಪ್ಪು ಮಾಡಿದರೂ ಶಿಕ್ಷೆ ಇರಲಿಲ್ಲ. ಸಮಾನ ಶಿಕ್ಷೆ ಕಾಯಿದೆ – ಮಾನವರೆಲ್ಲಾ ಸಮಾನರು ಎಂದು ಹೇಳಿದಂತಾಗಿದೆ. ಕೆಳಜಾತಿಗಳು ಸೇರಿದಂತೆ ಎಲ್ಲರಿಗೂ 'ಶಿಕ್ಷಣ ಹಕ್ಕು ಕಾಯಿದೆ (1813)' ಬಂದ ನಂತರ ದೇಶದಲ್ಲಿ ಕ್ರಾಂತಿಕಾರಿ ಬದಲಾವಣೆಗಳು ಬಂದಿವೆ.

ಇನ್ನೊಂದು ದುರಾಚಾರವೆಂದರೆ ಅಸ್ಪೃಶ್ಯತೆ

ಬ್ರಾಹ್ಮಣರು ಪ್ರಚಾರ ಮಾಡುವ ಮತ್ತು ಆಚರಿಸುವ ಇನ್ನೊಂದು ದುರಾಚಾರವೆಂದರೆ ಅಸ್ಪೃಶ್ಯತೆ! ಇದರೊಂದಿಗೆ ಅವರು ಜನರನ್ನು ಚೆನ್ನಾಗಿ ವಿಭಜಿಸಲು ಸಾಧ್ಯವಾಯಿತು. ಮಾನವ ಆಕಾರಗಳು ಒಂದೇ, ಭೌತಿಕವಾಗಿ, ಮನುಷ್ಯರ ಗುಣಲಕ್ಷಣಗಳು ಒಂದೇ ಆಗಿರುತ್ತವೆ. ಹುಟ್ಟು ಮತ್ತು ಸಾವು ಬ್ರಾಹ್ಮಣರಿಗೆ, ಬಹುಜನರಿಗೂ ನಡುವೆ ವ್ಯತ್ಯಾಸಗಳಿವೆ ಎಂದು ಯಾವುದೇ ವಿಜ್ಞಾನ ಹೇಳುವುದಿಲ್ಲ. ಎಲ್ಲರದೂ ಒಂದೇ ಜನಾಂಗ– ಹ್ಯಾಮೋ ಸೇಪಿಯನ್ಸ್ ಎಂದು ವಿಜ್ಞಾನ ಹೇಳುತ್ತದೆ... ಈ ಜನಾಂಗೀಯ ವಿಭಜನೆಯನ್ನು ಅಳಿಸಲು, ಬ್ರಿಟಿಷ್ ಸರ್ಕಾರವು ಗುಲಾಮಗಿರಿ ನಿಷೇಧ ಕಾಯಿದೆಯನ್ನು (1813) –Slavery Prohibition Act (1813)– ತಂದಿತು. ಸಮಾನ ಶಿಕ್ಷೆ ಕಾಯಿದೆ (1817)– The Equal Punishment Act (1817)– ತಂದಿತು. ಪರಮಾಧಿಕಾರಕ್ಕಾಗಿ ಬ್ರಾಹ್ಮಣವಾದವು ಮಾಡಿದ ಗಿಮಿಕ್ ಅನ್ನು ತಿರಸ್ಕರಿಸಿತು.

ಯಾರ ಮನೆಯಲ್ಲಿ ಯಾವುದೇ ಕಾರ್ಯಕ್ರಮ ನಡೆದರೂ ಬ್ರಾಹ್ಮಣ ಪುರೋಹಿತರನ್ನು ಆಹ್ವಾನಿಸಿ, ಆತನ ಶಕ್ತಿ ಮೀರಿದ ದಕ್ಷಿಣೆಯನ್ನು ಕೊಡಲು ಇಷ್ಟವಿದೆಯೋ ಇಲ್ಲವೋ, ಪೂಜೆಯ ಭಾಗವಾಗಿ ಪುರೋಹಿತರ ಪಾದಗಳಿಗೆ ನಮಸ್ಕರಿಸಿ ಆಶೀರ್ವಾದ ಪಡೆಯುವುದು – ಇತ್ಯಾದಿಗಳು ಇಂದಿಗೂ ನಡೆಯುತ್ತಿವೆ. ಎಲ್ಲಾ ಮೂಢನಂಬಿಕೆಗಳಂತೆ ಇದೂ ಒಂದು ಮೂಢನಂಬಿಕೆಯೇ ಆಗಿರುತ್ತದೆ. ಈ ರೀತಿ ಮಾಡಬೇಕೆಂದು ಯಾರು ಪ್ರಚಾರ ಮಾಡಿದರು?

ತಮ್ಮ ಸ್ವಲಾಭಕ್ಕಾಗಿ, ತಮ್ಮ ಆಧಿಪತ್ಯಕ್ಕಾಗಿ ಬ್ರಾಹ್ಮಣರೇ ವಿಧಿವಿಧಾನಗಳನ್ನು ರೂಪಿಸಿ, ಬಲವಂತವಾಗಿ ಬಹುಜನರಿಂದ ಮಾಡಿಸುತ್ತಿದ್ದಾರೆ. ದೇವರು ಒಂದು ಸುಳ್ಳಾಗಿದ್ದರೆ... ಆ ಸುಳ್ಳನ್ನು ತೋರಿಸುತ್ತಾ ಜನರಲ್ಲಿ ಭಯ–ಭಕ್ತಿ ಹುಟ್ಟಿಸುತ್ತ

ಪುಟ 7 ಕ್ಕೆ

ಬೀದಿಗಳಲ್ಲಿ 'ಕೆಳಜಾತಿ' ಜನರು ನಡೆದಾಡುವ ಹಕ್ಕಿಗಾಗಿ ನಡೆದ "ವೈಕಂ ಹೋರಾಟ"

ತಮಿಳುನಾಡು ಸರ್ಕಾರ ನೀಡುವ 2024ನೇ ಸಾಲಿನ 'ವೈಕಂ ಪ್ರಶಸ್ತಿ'ಯನ್ನು ಹಿರಿಯ ಸಾಹಿತಿ ದೇವನೂರ ಮಹಾದೇವ ಅವರಿಗೆ ನೀಡಿದೆ. 2024ರ ಡಿಸೆಂಬರ್ 12ರಂದು ಕೇರಳದ ವೈಕಂನಲ್ಲಿ ನಡೆದ ಕಾರ್ಯಕ್ರಮದಲ್ಲಿ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಹಾಗೂ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಈ ಪ್ರಶಸ್ತಿಯನ್ನು ಪ್ರದಾನ ಮಾಡಿದರು. ಏನಿದು ವೈಕಂ ಹೋರಾಟ? ಕೇರಳದ ವೈಕಂ ಎಂಬ ಸಣ್ಣ ಪಟ್ಟಣದಲ್ಲಿ ಮಹದೇವ ದೇವಸ್ಥಾನವಿದೆ. ಈ ದೇವಸ್ಥಾನದ ಬೀದಿಗಳ ಮೂಲಕ ದಲಿತರು, ಈಜವರು ಸೇರಿದಂತೆ ಹಿಂದುಳಿದ ಸಮುದಾಯಗಳ ಜನರು ನಡೆದಾಡುವುದನ್ನು ಬ್ರಾಹ್ಮಣರು ನಿಷೇಧಿಸಿದ್ದರು. ಇದಕ್ಕಾಗಿ ಅಂದಿನ ರಾಜರ ಆಡಳಿತದಲ್ಲಿ ಕಾನೂನುಗಳನ್ನು ಮಾಡಲಾಗಿತ್ತು. ಆ ಕಾನೂನುಗಳನ್ನು ಉಲ್ಲಂಘಿಸಿದವರಿಗೆ ಕಠಿಣ ಶಿಕ್ಷೆಗಳನ್ನು ವಿಧಿಸಲಾಗುತ್ತಿತ್ತು. ಈ ಬೀದಿಗಳಲ್ಲಿ ನಡೆಯುವ ಹಕ್ಕಿಗಾಗಿ 1924-25 ರಲ್ಲಿ ನಡೆದ ಐತಿಹಾಸಿಕ ಹೋರಾಟವೇ "ವೈಕಂ ಹೋರಾಟ".

19ನೇ ಶತಮಾನದಲ್ಲಿ ಕೆಳ ಸಮುದಾಯದವರ ಮೇಲಿನ ದಬ್ಬಾಳಿಕೆ, ಅವಮಾನಗಳು ಅಷ್ಟಿಷ್ಟಲ್ಲ. ಜನರನ್ನು ಮೇಲು, ಕೀಳು ಎಂದು ವರ್ಗೀಕರಿಸಿ ಕೆಳಜಾತಿಯವರನ್ನು ಊರಿನಿಂದ ಹೊರಗೆ ಇರಿಸಲಾಗುತಿತ್ತು. ಬೀದಿಗಳಲ್ಲಿ ನಡೆದಾಡಲೂ ಅವರಿಗೆ ನಿರ್ಬಂಧ ಹೇರಲಾಗಿತ್ತು. ಅವರು ಹಿಂದೂ ಸಮಾಜಕ್ಕೆ ಅನಿಷ್ಟ ಎಂಬಂತೆ ನೋಡುತ್ತಿದ್ದರು. ಯಾವ ಯಾವ ಜಾತಿಯವರು ದೇವಸ್ಥಾನಗಳಿಂದ ಎಷ್ಟೆಷ್ಟು ದೂರ ಇರಬೇಕು, ಹಳ್ಳಿಗಳಲ್ಲಿ ಯಾರ್ಯಾರು ಯಾವ ಯಾವ ಜಾಗದಲ್ಲಿ ಇರಬೇಕು ಎಂಬುದನ್ನು ಕೂಡಾ ಬ್ರಾಹ್ಮಣರು ನಿರ್ಧರಿಸುತ್ತಿದ್ದರು. ಅದೇ ನಮ್ಮ ಹಿಂದೂ ಸಂಪ್ರದಾಯ ಎಂದು ಹೇಳಿ ರಾಜರುಗಳಿಂದ ಶಾಸನಗಳನ್ನು ಮಾಡಿಸಿ ಜಾರಿಗೊಳಿಸುತ್ತಿದ್ದರು. ಇನ್ನೂ ಹೇಳಬೇಕೆಂದರೆ, ಕೇರಳದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಎದೆಯನ್ನು ಮುಚ್ಚಿಕೊಳ್ಳಲು ಕೆಳಜಾತಿಗಳಿಗೆ ಸೇರಿದ ಮಹಿಳೆಯರಿಗೆ ಅವಕಾಶ ಕೊಡುತ್ತಿರಲಿಲ್ಲ. ದುರ್ಮಾರ್ಗವಾದ ಜಾತಿ ಆಚರಣೆಗಳು, ಪುರುಷಾಧಿಪತ್ಯ, ಬ್ರಾಹ್ಮಣ ಮನುವಾದಿ ವ್ಯವಸ್ಥೆಯ ವಿರುದ್ಧ ತಮಿಳುನಾಡಿನಲ್ಲಿ ಪೆರಿಯಾರ್ ಎವಿ ರಾಮಸ್ವಾಮಿ ಅವರು ಆರೇಳು ದಶಕಗಳ ಕಾಲ ಅವಿರತ ಹೋರಾಟ ನಡೆಸಿದರು. ಅದರ ನಂತರ, ಕೇರಳದಲ್ಲಿ ವೈಕಂ ಎಂಬ ಸಣ್ಣ ಪಟ್ಟಣದಲ್ಲಿ 1924ರಲ್ಲಿ ಪ್ರಾರಂಭವಾದ ಹೋರಾಟವು ಹೊಸದೊಂದು ಇತಿಹಾಸ ಬರೆಯಿತು.

ದೇವಾಲಯದ ಸುತ್ತಲಿನ ಹಾದಿಗಳಲ್ಲಿ ಶೂದ್ರರಿಗೆ ನಿಷೇಧ

ರಾಜರ ಆಳ್ವಿಕೆಯಲ್ಲಿದ್ದ ತಿರುವತಾಂಕೂರ್ ಸಂಸ್ಥಾನಂ (ಪ್ರಸ್ತುತ ಈ ಪ್ರದೇಶ ಕೇರಳ ರಾಜ್ಯದಲ್ಲಿದೆ) ನಲ್ಲಿರುವ ವೈಕಂ ಪಟ್ಟಣದಲ್ಲಿ ಮಹಾದೇವ ಎಂಬ ದೇವಾಲಯವಿದೆ. ದೇವಾಲಯದ ಸುತ್ತಲಿನ ಸಾರ್ವಜನಿಕ ಬೀದಿಗಳಲ್ಲಿ ಈಜವರು, ಪುಲಯರು ಮೊದಲಾದ ಹಿಂದುಳಿದ ಸಮುದಾಯಗಳ ಜನರು (ಶೂದ್ರರು) ನಡೆಯುವಂತಿಲ್ಲ ಎಂದು ಕಾನೂನುಗಳನ್ನು ಮಾಡಿ ಫಲಕಗಳನ್ನು ಹಾಕಲಾಗಿತ್ತು. ಅದನ್ನು ಯಾರಾದರೂ ಉಲ್ಲಂಘಿಸಿದರೆ ಅವರಿಗೆ ಕಠಿಣ ಶಿಕ್ಷೆ ವಿಧಿಸಲಾಗುತ್ತಿತ್ತು.

1865 ಮತ್ತು 1884ರಲ್ಲಿ ತಿರುವಾಂಕೂರಿನ ಸಾರ್ವಜನಿಕ ರಸ್ತೆಗಳಲ್ಲಿ ಅವರ್ಣರಿಗೆ ಸಂಚಾರ ಸ್ವಾತಂತ್ರ್ಯವನ್ನು ಅನುಮತಿಸುವ ಆದೇಶಗಳನ್ನು ಹೊರಡಿಸಲಾಯಿತು. ಆದರೆ ಅವು ಯಾವುದೇ ಪರಿಣಾಮವನ್ನು ಬೀರಲಿಲ್ಲ. ದಿವಾನ್ ರಾಘವಯ್ಯ ಮತ್ತು ಆಡಳಿತವು ಕುಮಾರನಾಶನ ಮತ್ತು ಇತರರು 'ಧಾರ್ಮಿಕ ಸಮಸ್ಯೆ' ಎಂಬ ಕಾರಣಕ್ಕಾಗಿ ಅವರ್ಣರ ಮಾರ್ಗದ ಹಕ್ಕಿನ ಸಮಸ್ಯೆಯನ್ನು ಎತ್ತುವ ಪ್ರಯತ್ನವನ್ನು ಹಾಳುಮಾಡಿದರು. ನಾರಾಯಣಗುರುಗಳಿಂದ ಅಯ್ಯಂಕಾಳಿಯವರೆಗಿನ ಜನರು ವೈಕಂನ ನಡಿಗೆ ದಾರಿಗಳಲ್ಲಿ ಪ್ರಯಾಣ ನಿಷೇಧವನ್ನು ಎದುರಿಸಿದ್ದಾರೆ.

ಟಿ.ಕೆ.ಮಾದವನ್ ಎಂಬ (ಈಜವ) ಹಿಂದುಳಿದ ಜಾತಿಯ ವಕೀಲರು ತಿರುವಂಕೂರ್ ಮಹಾರಾಜರ ಕೋಟೆಯಲ್ಲಿದ್ದ ನ್ಯಾಯಾಲಯಕ್ಕೆ ಪ್ರತಿನಿತ್ಯ ಹೋಗಬೇಕಿತ್ತು. ಆದರೆ ಆ ದಿನ ತಡವಾಗಿತ್ತು. ದೇವಸ್ಥಾನದ ಸುತ್ತ ಒಂದೂವರೆ ಕಿಮೀ ಸುತ್ತಿಕೊಂಡು ಹೋದರೆ ತಡವಾಗುತ್ತದೆ ಎಂದುಕೊಂಡು, ಸಕಾಲಕ್ಕೆ ನ್ಯಾಯಾಲಯ ತಲುಪುವ ತರಾತುರಿಯಲ್ಲಿ ದೇವಸ್ಥಾನದ ಬೀದಿಗಳಲ್ಲಿ ಹೋಗಲು ಪ್ರಯತ್ನ ಮಾಡಿದರು. ಅವರ ಪ್ರಯತ್ನಕ್ಕೆ ಅಡ್ಡಿಪಡಿಸಿದ ಬ್ರಾಹ್ಮಣರು ಅವರ ಜಾತಿಯ ಹೆಸರಿನಲ್ಲಿ ನಿಂದಿಸಿ ಹಲ್ಲೆ ನಡೆಸಿದರು.

ಈ ದೇಶ ತೊರೆಯಬೇಕಾ?... ಯಾವುದೇ ಸಮಸ್ಯೆ ಇಲ್ಲ!

ಇದರಿಂದ ಅವಮಾನಿತರಾದ ವಕೀಲ ಟಿ.ಕೆ. ಮಾಧವನ್ ಅವರು, ಸ್ಥಳೀಯ ಕಾಂಗ್ರೆಸ್ ಮುಖಂಡರಿಗೆ ತಮ್ಮ ಅಳಲನ್ನು ತೋಡಿಕೊಂಡರು. ಟಿ.ಕೆ.ಮಾಧವನ್ ಅವರು ತಿರುವಾಂಕೂರು ಮತ್ತು ಪ್ರಜಾಸಭಾದಲ್ಲಿ ಜಾತಿ ತಾರತಮ್ಯದ ವಿರುದ್ಧ ಹೋರಾಟಗಳನ್ನು ಎತ್ತುವ ಪ್ರಯತ್ನ ಮಾಡಿದರು. ದಿವಾನ್ ಮತ್ತು ಅಧಿಕಾರಿಗಳು 'ಅದೊಂದು ಧಾರ್ಮಿಕ ಸಮಸ್ಯೆ' ಎಂಬ ಹಣೆಪಟ್ಟಿ ಹಚ್ಚಿ ಪ್ರಜಾಸಭೆಯಲ್ಲಿ ವೈಕಂ ಹಕ್ಕು ವಿಚಾರವನ್ನು ಎತ್ತುವ ಪ್ರಯತ್ನವನ್ನು ತಡೆದರು. ಅವರ ಸಮಸ್ಯೆಗಳು ಬಗೆಹರಿಯದಿದ್ದರೆ ಈ ದೇಶ ತೊರೆಯಬೇಕಾ ಎಂದು ಟಿ.ಕೆ. ಮಾಧವನ್ ಅವರ ಪ್ರಶ್ನೆಗೆ ಉತ್ತರಿಸಿದ ದಿವಾನ್ ರಾಘವಯ್ಯ 'ಯಾವುದೇ ಸಮಸ್ಯೆ ಇಲ್ಲ' ಎಂದರು!

"ಅವರು ಸಂಪ್ರದಾಯವಾದಿಗಳ ಧರ್ಮವನ್ನು ಪಾಲಿಸುತ್ತಾರೆ" ಎಂದ ಗಾಂಧೀಜಿ

ನಂತರ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರಾಗಿದ್ದ ಗಾಂಧೀಜಿಯವರಿಗೆ ಟಿ.ಕೆ. ಮಾಧವನ್ ಪತ್ರ ಬರೆದು ವೈಯಕ್ತಿಕವಾಗಿ ತಮಗೆ ಆಗಿರುವ ಅವಮಾನವನ್ನು ವಿವರಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಗಾಂಧೀಜಿ "ಅವರು ಸಂಪ್ರದಾಯವಾದಿಗಳ ಧರ್ಮವನ್ನು ಪಾಲಿಸುತ್ತಾರೆ, ಅದನ್ನೇ ಅನುಸರಿಸುತ್ತಾರೆ. ಅದಕ್ಕೆ ನಾವೇನು ಮಾಡಲಾದೀತು" ಎನ್ನುತ್ತಾ ಅದನ್ನು ದೊಡ್ಡ ಸಮಸ್ಯೆಯಾಗಿ ತೆಗೆದುಕೊಳ್ಳಲಿಲ್ಲ.

ಹೋರಾಟ ಆರಂಭಿಸಿದರು

ರಾಜಿ ಪ್ರಸ್ತಾಪಗಳು ವಿಫಲವಾದ ಕಾರಣ, ಮಾಧವನ್ ಸ್ಥಳೀಯ ಕಾಂಗ್ರೆಸ್ ಮುಖಂಡರನ್ನು ಒಪ್ಪಿಸಿ ಪ್ರತಿಭಟನಾ ಚಟುವಟಿಕೆಗಳನ್ನು ಆರಂಭಿಸಿದರು. ಮಾರ್ಚ್ 30, 1924 ರಂದು ಮುಷ್ಕರವನ್ನು ಪ್ರಾರಂಭಿಸಲು





ನಿರ್ಧರಿಸಲಾಯಿತು. ವೈಕಂ ಮತ್ತು ಸುತ್ತಮುತ್ತ ಕರ್ಫ್ಯೂ ಘೋಷಿಸಲಾಯಿತು. ಅದರೊಂದಿಗೆ ಧರಣಿ ನಿರತರು ಫುಡ್ ಬೋರ್ಡ್ ಗಳನ್ನು ದಾಟಿ ಬೀದಿಯಲ್ಲಿ ನಡೆಯುವ ಪ್ರಯತ್ನದ ಭಾಗವಾಗಿ ಮೂರು ಬ್ಯಾಚ್ ಗಳಲ್ಲಿ ಹೋರಾಡುವ ವಿಧಾನವನ್ನು ಅಳವಡಿಸಿಕೊಂಡರು. ಮೊದಲ ದಿನ ಕುಂಜಪ್ಪಿ, ಬಾಹುಲೇಯನ ಮತ್ತು ಗೋವಿಂದಪಣಿಕರರು ಅದಕ್ಕೆ ಸಿದ್ಧತೆ ಮಾಡಿದರು.

ಇದಕ್ಕೆ ತೀವ್ರವಾಗಿ ಪ್ರತಿಕ್ರಿಯಿಸಿದ ತಿರುವಾಂಕೂರು ರಾಜ, ದೇವಾಲಯದ ಬೀದಿಗಳಲ್ಲಿ ನಡೆಯಕೂಡದು ಎಂಬ ಕಾನೂನುಗಳನ್ನು ಉಲ್ಲಂಘಿಸಿದ್ದೂ ಅಲ್ಲದೆ, ಪ್ರತಿಭಟನಾ ಕಾರ್ಯಕ್ರಮಗಳನ್ನು ಕೈಗೆತ್ತಿಕೊಂಡಿದ್ದನ್ನು ಗಂಭೀರವಾಗಿ ಪರಿಗಣಿಸಿ, ಎಲ್ಲ ಪ್ರತಿಭಟನಾಕಾರರನ್ನು ಬಂಧಿಸಿ ಜೈಲಿಗೆ ಹಾಕುವಂತೆ ಆದೇಶಿಸಿದರು. ಏಪ್ರಿಲ್ ಮೊದಲ ವಾರದಲ್ಲಿ, ಗಾಂಧಿಯವರ ಸೂಚನೆಯ ಮೇರೆಗೆ ಕೆಲವು ದಿನಗಳವರೆಗೆ ಮುಷ್ಕರ ನಡೆಯಲಿಲ್ಲ. ಇದೇ ವೇಳೆ ಕೆ.ಪಿ. ಕೇಶವಮೆನನ್, ಕೆ. ಕೇಳಪ್ಪನ್, ಟಿ.ಕೆ. ಮಾಧವನ್ ಹಾಗೂ ಇತರರಿಗೆ ಪೊಲೀಸರು ನೋಟಿಸ್ ಜಾರಿ ಮಾಡಿ, ವೈಕಂ ಅಲ್ಲದವರು ಸ್ಥಳದಿಂದ ತೆರಳುವಂತೆ ಆದೇಶ ಹೊರಡಿಸಿದರು. ಏಪ್ರಿಲ್ 9ರಂದು ಕೇಳಪ್ಪನ್, ಕೇಶವಮೆನನ್, ಕೆ. ವೇಲಾಯುಧಮ್ ಮೆನನ್ ಮತ್ತು ಇತರರನ್ನು ಬಂಧಿಸಲಾಯಿತು. ಕೇಶವ ಮೆನನ್, ಟಿ.ಕೆ. ಮಾಧವನ್, ಎ.ಕೆ. ಪಿಳ್ಳೈ, ಕೆ. ಕೇಳಪ್ಪನ್, ಕೆ. ವೇಲಾಯುಧಮ್ ಮೆನನ್ ಮತ್ತು ಇತರರು ಜೈಲು ಪಾಲಾದರು.

ಹೋರಾಟಕ್ಕೆ ನಾಯಕತ್ವ ನೀಡಿದ ಪೆರಿಯಾರ್

ವೈಕಂ ಹೋರಾಟವನ್ನೇನೋ ಆರಂಭಿಸಿದರು. ಆದರೆ, ಹೋರಾಟವನ್ನು ಮುನ್ನಡೆಸುವುದೇಗೆ ಎಂಬ ಚಿಂತೆ ಎಲ್ಲರಲ್ಲೂ ಇತ್ತು. ಆ ಸಮಯದಲ್ಲಿ ತಮಿಳುನಾಡಿನ ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದ ಪೆರಿಯಾರ್ ಇ.ವಿ. ರಾಮಸ್ವಾಮಿಯವರನ್ನು ಹೋರಾಟಕ್ಕೆ ನಾಯಕತ್ವ ನೀಡಿ ಮುನ್ನಡೆಸಬೇಕೆಂದು ಕೇಳಿಕೊಂಡರು. ವೈಕಂ ಹೋರಾಟದ ಬಗ್ಗೆ ವಿವರವಾದ ಪತ್ರ ಬರೆದು ಟೆಲಿಗ್ರಾಂ ಕೂಡಾ ಕಳುಹಿಸಿದರು. ಅದು ಸಿಗುವ ಹೊತ್ತಿಗೆ ಪೆರಿಯಾರ್ ಮಧುರೈ ಜಿಲ್ಲೆಯ ಪ್ರವಾಸದಲ್ಲಿದ್ದರು. ಆ ತನ್ನ ಜವಾಬ್ದಾರಿಗಳನ್ನು ಕಾಂಗ್ರೆಸ್ ಪಕ್ಷದ ಹಿರಿಯ ನಾಯಕ ರಾಜಗೋಪಾಲಾಚಾರಿ ಅವರಿಗೆ ಒಪ್ಪಿಸಿದ ಪೆರಿಯಾರ್ ಅವರು ವೈಕಂ ಹೋರಾಟದಲ್ಲಿ ಭಾಗವಹಿಸಲು ತಕ್ಷಣವೇ ಹೊರಟರು. ವೈಕಂ ಗೆ ಪೆರಿಯಾರ್ ಬರುವ ಸುದ್ದಿ ತಿಳಿದ ತಿರುವಾಂಕೂರು (ತಿರುವಿತಂಕೂರ್) ರಾಜ ತನ್ನ ಸಿಬ್ಬಂದಿಯ ಮೂಲಕ ಪೆರಿಯಾರ್ ಗೆ ಆಮಂತ್ರಣ ಕಳುಹಿಸಿದನು. ಈ ಮೊದಲೇ ಅವರಿಗೂ ತಿರುವಾಂಕೂರು ರಾಜನಿಗೂ ಪರಿಚಯವಿತ್ತು. ಪೆರಿಯಾರ್ ಅವರು ಈರೋಡ್ ಪಟ್ಟಣಕ್ಕೆ ಮುನಿಸಿಪಲ್ ಅಧ್ಯಕ್ಷರಾಗಿದ್ದಾಗ ರಾಜ ದೆಹಲಿಗೆ ಪ್ರಯಾಣ ಮಾಡುವ ಪ್ರತಿಬಾರಿಯೂ ಈರೋಡ್ ನಲ್ಲಿಯೇ ಪೆರಿಯಾರ್ ಅವರ ಅತಿಥಿ ಗೃಹದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಅದ್ದರಿಂದಲೇ ರಾಜನು ಪೆರಿಯಾರ್ ಅವರನ್ನು ಆಹ್ವಾನಿಸಿದನು. ಆದರೆ ಆ ಆಹ್ವಾನವನ್ನು, ಗೌರವವನ್ನು ಪೆರಿಯಾರ್ ತಿರಸ್ಕರಿಸಿ ವೈಕಂ ಹೋರಾಟಕ್ಕೆ ನಾಯಕತ್ವ ನೀಡಿ, ಪ್ರತಿಭಟನಾ ಚಟುವಟಿಕೆಗಳನ್ನು ತೀವ್ರಗೊಳಿಸಿದರು.

ಪೆರಿಯಾರ್ ಅವರು ಅಲ್ಲಿನ ಜನರನ್ನು ತಮ್ಮ ತಾರ್ಕಿಕವಾದ, ತರ್ಕಬದ್ಧವಾದ ಭಾಷಣಗಳ ಮೂಲಕ ವೈಕಂ ಹೋರಾಟ ನ್ಯಾಯಯುತವಾಗಿದೆ ಎಂದು ಪ್ರಚಾರ ಮಾಡಿದರು. 'ಮನುಷ್ಯನನ್ನು ಮನುಷ್ಯರಂತೆ ಗೌರವಿಸಲು ಮತ್ತು ಪ್ರೀತಿಸಲು ಸಾಧ್ಯವಾಗದ ಜಾತಿ ವ್ಯವಸ್ಥೆ ಅಸ್ಪೃಶ್ಯ ಪದ್ಧತಿಯಾಗಿದ್ದು, ಅದನ್ನು ಅನುಸರಿಸುವ ಸಮಾಜ ಎಂದಿಗೂ ಸಾಮಾಜಿಕ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಿಲ್ಲ' ಎಂದು ಜನರಲ್ಲಿ ಅರಿವು ಮೂಡಿಸಿದರು. 'ದಲಿತರು, ಹಿಂದುಳಿದ ಜಾತಿಯವರು ದೇವಸ್ಥಾನದ ಬೀದಿಗಳಲ್ಲಿ ನಡೆದರೆ ದೇವರಿಗೆ ಮೈಲಿಗೆ ಆಗುತ್ತದೆ ಎಂದುಕೊಂಡರೆ, ಅಂತಹ ದೇವರು ನಮಗೆ ಅವಶ್ಯಕತೆ ಇಲ್ಲ. ಆ ದೇವರ ಶಿಲ್ಪ ಬಟ್ಟೆ ಒಗೆಯಲು ಬಳಸುವ ಬಂಡೆಗೆ ಸಮಾನ" ಎಂದರು.

ನಿಷೇಧವನ್ನು ಉಲ್ಲಂಘಿಸಿದರು

ವೈಕಂ ಹೋರಾಟವು ತೀವ್ರವಾಗುತ್ತಿರುವುದನ್ನು ಗಮನಿಸಿದ ತಿರುವಾಂಕೂರು ರಾಜ, ಪಟ್ಟಣದಲ್ಲಿ ಎಲ್ಲಾ ಪ್ರತಿಭಟನಾ ಕಾರ್ಯಕ್ರಮಗಳನ್ನು ನಿಷೇಧಿಸಿದ. ಆ ನಿಷೇಧಗಳನ್ನು ಪೆರಿಯಾರ್ ಉದ್ದೇಶಪೂರ್ವಕವಾಗಿಯೇ ಉಲ್ಲಂಘಿಸಿದರು. ಹೋರಾಟ ಮತ್ತಷ್ಟು ಬಲಗೊಂಡಿತು. ಪೆರಿಯಾರ್ ಅವರನ್ನು ತಿರುವಾಂಕೂರಿನ ರಾಜ ತಿಂಗಳುಗಟ್ಟಲೆ ಜೈಲಿನಲ್ಲಿಟ್ಟ. ಜೈಲಿನಿಂದ ಹೊರಬಂದ ನಂತರ ಪೆರಿಯಾರ್ ತಮಿಳುನಾಡಿಗೆ ಹೋಗುತ್ತಾರೆ ಎಂದು ರಾಜ ಭಾವಿಸಿದ್ದ. ಆದರೆ ಜೈಲಿನಿಂದ ಬಿಡುಗಡೆಯಾದ ನಂತರ ಅವರು ಮತ್ತೆ ಅಷ್ಟೇ ತೀವ್ರತೆಯಿಂದ ಚಳವಳಿಯಲ್ಲಿ ಪಾಲ್ಗೊಂಡರು.

ಹೋರಾಟವನ್ನು ನಿಲ್ಲಿಸುವಂತೆ ರಾಜಾಜಿ ಒತ್ತಡ

ಈ ವಿಷಯ ತಿಳಿದ ತಮಿಳುನಾಡು ರಾಜ್ಯದ ಹಿರಿಯ ಕಾಂಗ್ರೆಸ್ ನಾಯಕ ರಾಜಗೋಪಾಲಾಚಾರಿ (ರಾಜಾಜಿ) ಅವರು 'ಅದು ತಮಿಳುನಾಡಿಗೆ ಸೇರಿದ ಹೋರಾಟವಲ್ಲ. ಇಲ್ಲಿಗೆ ಬಂದು ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿ ನಿಮ್ಮ ಜವಾಬ್ದಾರಿಯನ್ನು ನಿಭಾಯಿಸಿ' ಎಂದು ಪತ್ರ ಬರೆದು, ವೈಕಂ ಹೋರಾಟವನ್ನು ನಿಲ್ಲಿಸುವಂತೆ ಪೆರಿಯಾರ್ ಮೇಲೆ ಒತ್ತಡ ಹೇರಿದರು. ರಾಜಾಜಿಯವರು ಮತ್ತೊಬ್ಬ ಕಾಂಗ್ರೆಸ್ ನಾಯಕರಾದ ಎಸ್. ಶ್ರೀನಿವಾಸ ಅಯ್ಯಂಗಾರ್ ಎನ್ನುವವರನ್ನು ವೈಕಂ ಗೆ ಕಳುಹಿಸಿ ಪೆರಿಯಾರ್ ಅವರನ್ನು ಕರೆತರುವಂತೆ ಹೇಳಿದರು. ಆದರೆ ಪೆರಿಯಾರ್ ತಮ್ಮ ಹೋರಾಟವನ್ನು ನಿಲ್ಲಿಸಲಿಲ್ಲ. ಈ ವಿಷಯ ಬೇರೆ ರಾಜ್ಯಗಳಿಗೂ ವ್ಯಾಪಿಸಿತು. ಪಂಜಾಬ್ ನಂತಹ ವಿವಿಧ ಪ್ರದೇಶಗಳಿಂದ ನೂರಾರು ಕಾರ್ಯಕರ್ತರು ಸ್ವಯಂಪ್ರೇರಿತರಾಗಿ ವೈಕಂ ಹೋರಾಟದಲ್ಲಿ ಭಾಗವಹಿಸಲು ವೈಕಂ ಗೆ ಬಂದರು.

ಹೋರಾಟದಲ್ಲಿ ಅನ್ಯ ಧರ್ಮದವರಿಗೆ ಅವಕಾಶ ಬೇಡ ಎಂದ ಗಾಂಧೀಜಿ

ವಿಷಯ ತಿಳಿದ ಗಾಂಧೀಜಿ ವೈಕಂ ಹೋರಾಟ ಹಿಂದೂಗಳಿಗೆ ಸಂಬಂಧಿಸಿದೆ. ಇದರಲ್ಲಿ ಅನ್ಯ ಧರ್ಮದವರಿಗೆ ಅವಕಾಶ ನೀಡಬಾರದು ಎಂದು ಪ್ರಕಟಣೆ ನೀಡಿದರು. ಗಾಂಧಿಯವರು ಸತ್ಯಾಗ್ರಹವನ್ನು ಹಿಂದೂ ಧರ್ಮದ ಒಳಗಿನ ಸುಧಾರಣೆಯ ಪ್ರಯತ್ನವಾಗಿ ನೋಡಿದರು. ಬ್ಯಾರಿಸ್ಟರ್ ಜಾರ್ಜ್ ಜೋಸೆಫ್ ಮತ್ತು

ಪುಟ 6 ಕ್ಕೆ

ಆದಿವಾಸಿಗಳ ನಾಯಕ ಕಾಮ್ರೇಡ್ ವೈ.ಕೆ.ಗಣೇಶ್ ಇನ್ನಿಲ್ಲ

ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಂಚಾಲಕ ಹಾಗೂ ಆದಿವಾಸಿ ಅಧಿಕಾರ್ ರಾಷ್ಟ್ರೀಯ ಮಂಚ್ ನ ಕೇಂದ್ರ ಸಮನ್ವಯ ಸಮಿತಿಯ ಸದಸ್ಯರೂ ಆಗಿದ್ದ ಕಾಮ್ರೇಡ್ ವೈ.ಕೆ. ಗಣೇಶ್ ಅವರು ತೀವ್ರ ಅನಾರೋಗ್ಯದಿಂದ ಇದೇ 2024 ಡಿಸೆಂಬರ್ 21ರಂದು ಬೆಳಗಿನ ಜಾವ 5.30 ಕ್ಕೆ ಮಂಗಳೂರಿನ ಯಾನೆಪೋಯ ಆಸ್ಪತ್ರೆಯಲ್ಲಿ ನಿಧನ ಹೊಂದಿದರು. ಅವರಿಗೆ 36 ವರ್ಷ ವಯಸ್ಸಾಗಿತ್ತು.

ಸಿ.ಪಿ.ಐ(ಎಂ) ನ ಕೊಡಗು ಜಿಲ್ಲಾ ಸಂಘಟನಾ ಸಮಿತಿಯ ಸದಸ್ಯರಾಗಿದ್ದ ಅವರು ರಾಜ್ಯ ಸಮಿತಿಯ ಅಡಿಯಲ್ಲಿ ಪೂರ್ಣಾವಧಿ ಕಾರ್ಯಕರ್ತರಾಗಿದ್ದರು.

ಕಾಮ್ರೇಡ್ ವೈ.ಕೆ. ಗಣೇಶ್ ಕಟ್ಟಡ ಕೆಲಸಗಾರರಾಗಿದ್ದ ಅವರು ಡಿವೈಎಫ್ಐ ನಡೆಸಿದ ಭೂಮಿ, ನಿವೇಶನಕ್ಕಾಗಿ ನಡೆದ ಚಳುವಳಿಯಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದರು. 2010 ರಲ್ಲಿ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಸಂಘಟನೆಯಲ್ಲಿ ತಮ್ಮನ್ನು ಕೊಡಗಿನಲ್ಲಿ ತೊಡಗಿಸಿಕೊಂಡು ನಂತರ ಹಂತ ಹಂತವಾಗಿ ಕೆಲಸ ಮಾಡುತ್ತಾ ಜಿಲ್ಲಾ ಸಂಚಾಲಕರಾಗಿ ರಾಜ್ಯ ಸಂಚಾಲಕರಾದರು. ಈಗ ಕೊಡಗು ಅದ್ಯಕ್ಷರಾಗಿದ್ದರು. ಕೊಡಗಿನಲ್ಲಿ ಐತಿಹಾಸಿಕವಾಗಿ ಅತ್ಯಂತ ತೀವ್ರತರ ಶೋಷಣೆ ಗಮನಕ್ಕೆ ಒಳಗಾಗಿರುವ ಮೂಲ ಆದಿವಾಸಿ ಜನಾಂಗಕ್ಕೆ ಸೇರಿದ್ದ ವೈ.ಕೆ.ಗಣೇಶ್ ಅವರು ಇಡೀ ಆದಿವಾಸಿ ಸಮುದಾಯಗಳ ವಿಮೋಚನೆಗೆ, ಹೋರಾಟಗಳಿಗೆ ತಮ್ಮನ್ನು ಪೂರ್ಣವಾಗಿ ಮೀಸಲಿಟ್ಟರು. ಕೊಡಗಿನಲ್ಲಿ ಊಳಿಗಮಾನ್ಯ ಶಕ್ತಿಗಳು ಪ್ರಬಲವಾಗಿರುವ ಮತ್ತು ಅತ್ಯಂತ ದೌರ್ಜನ್ಯದ ವಾತಾವರಣದಲ್ಲಿಯೂ ಬುಡಕಟ್ಟು ಸಮುದಾಯಗಳನ್ನು ಸಂಘಟನೆ



ಸಿಪಿಐಎಂ ಪಕ್ಷದ ಜಿಲ್ಲಾ ಸಂಘಟನಾ ಸಮಿತಿಯ ವತಿಯಿಂದ ಭಾವಪೂರ್ಣ ಶ್ರದ್ಧಾಂಜಲಿ

ಮಾಡಲು ಶ್ರಮಿಸಿದರು. ಹಲವಾರು ಜೀವ ಬೆದರಿಕೆಗಳಿಗೆ ಒಳಗಾದರೂ ಕುಗ್ಗಲಿಲ್ಲ. ತೀವ್ರತರ ಬಡತನ ಇದ್ದಾಗಲೂ ಅವೆಲ್ಲವನ್ನು ಮೀರಿ ಆದಿವಾಸಿ ಸಮುದಾಯಗಳನ್ನು ಸಂಘಟಿಸಲು ತಮ್ಮನ್ನು ತಾವು ಸಮರ್ಪಿಸಿಕೊಂಡರು. ಪ್ಲಾಂಟೇಶನ್ ಮಾಲೀಕರ ತೀವ್ರ ಹಿಡಿತದಲ್ಲಿ ತಲೆತಲಾಂತರದಿಂದ ಗುಲಾಮರಾಗಿ, ಈಗ ಜೀತದಾಳುಗಳಾಗಿ ದುಡಿಯುತ್ತಿದ್ದ ಆದಿವಾಸಿ ಕೆಲಸಗಾರರನ್ನು ಅಲ್ಲಿಂದ ಬಿಡುಗಡೆಗೊಳಿಸಿ ಹೊಸ ಬದುಕು ಕಟ್ಟಿಕೊಳ್ಳಲು ಅವಕಾಶ ಕಲ್ಪಿಸಿದ ನೂರಾರು ಪ್ರಕರಣಗಳೂ ಅವರ ಮುತುವರ್ಜಿ ಮದ್ಯಪ್ರವೇಶದಿಂದ ನಡೆದಿವೆ. ಸಿಪಿಐ(ಎಂ) ಪಕ್ಷದೊಂದಿಗೆ, ಜನ ಚಳುವಳಿಯೊಂದಿಗೆ ಆದಿವಾಸಿ ಸಮುದಾಯಗಳನ್ನು ಬೆಸೆಯುವಲ್ಲಿ ಅವರ ಪಾತ್ರ ಗಮನಾರ್ಹವಾಗಿದೆ. ಕೊಡಗಿನಲ್ಲಿ ಕೃಷಿಕೂಲಿಕಾರ ಸಂಘವನ್ನು ಕಟ್ಟುವಲ್ಲಿ ಕ್ರಮ ವಹಿಸಿದ್ದರು. ಜಿಲ್ಲೆಯಲ್ಲಿ ಎದ್ದು ಬಂದ ಹಲವಾರು ಪ್ರಶ್ನೆಗಳಿಗೆ ಐಕ್ಯ ಹೋರಾಟವನ್ನು ರೂಪಿಸುವಲ್ಲಿ ವಿವಿಧ ಸಮುದಾಯಗಳೊಂದಿಗೆ ಜಂಟಿ ಹೋರಾಟಗಳನ್ನು ಕಟ್ಟುವಲ್ಲಿ ಗಣೇಶ್ ಅವರ ಕೊಡುಗೆ ಮುಖ್ಯವಿದೆ.

ಕೊಡಗಿನ ಭಾರಿ ಪ್ಲಾಂಟೇಶನ್ ಗಳ ಮಾಲೀಕತ್ವ ಹೊಂದಿರುವ ಮತ್ತು ಆರ್ಥಿಕ, ಸಾಮಾಜಿಕ, ರಾಜಕೀಯವಾಗಿ ಪ್ರಬಲವಾಗಿರುವ ಕೊಡವ ಸಮುದಾಯವನ್ನು ಎಸ್.ಟಿ. ಪಟ್ಟಿಗೆ ಸೇರಿಸಿ ಭೌಗೋಳಿಕ ರಾಜಕೀಯ ಸ್ಥಾನಮಾನ ಕೊಡಬೇಕೆಂದು ನಡೆಸಿದ ಪ್ರಯತ್ನ ಮತ್ತು ಆ ಬಗ್ಗೆ ಹೂಡಲಾದ ಮೊಖದ್ದಮೆಯಲ್ಲಿ ಅದನ್ನು ವಿರೋಧಿಸಿ ಆದಿವಾಸಿಗಳ ಪರವಾಗಿ ಹೈ ಕೋರ್ಟ್ ನಲ್ಲಿ ಇಂಪ್ಲೀಡ್ ಆದ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯನ್ನು ಅವರು ಪ್ರತಿನಿಧಿಸಿ ಮಂಚೂಣಿಯಲ್ಲಿದ್ದರು.

ವೈ.ಕೆ. ಗಣೇಶ್ ಅವರ ಅಗಲಿಕೆ ಕೊಡಗು ಜಿಲ್ಲೆಯಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಆದಿವಾಸಿಗಳ ಚಳುವಳಿಗೆ ಮತ್ತು ಪ್ರಜಾಸತ್ತಾತ್ಮಕ ಜನ ಚಳುವಳಿಗೆ ಅಪಾರವಾದ ನಷ್ಟವಾಗಿದೆ. ಅಕಾಲಿಕ ನಿಧನರಾದ ವೈ.ಕೆ. ಗಣೇಶ್ ರವರಿಗೆ ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿ ಮತ್ತು ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕೊಡಗು ಜಿಲ್ಲಾ ಸಂಘಟನಾ ಸಮಿತಿಗಳು ಭಾವಪೂರ್ಣ ಶ್ರದ್ಧಾಂಜಲಿಯನ್ನು ಸಲ್ಲಿಸಿವೆ. ಗಣೇಶ ಅವರಿಗೆ ಒಬ್ಬ ಮಗ ಮತ್ತು ಮಗಳು, ಪತ್ನಿ ಇದ್ದು ಅಪಾರವಾದ ಬಂಧು ಬಳಗವನ್ನು, ಹಿತೈಷಿಗಳನ್ನು ಅಗಲಿದ್ದಾರೆ. ಆ ಕುಟುಂಬಕ್ಕೆ ಸಾಂತನವನ್ನು ಪಕ್ಷ ತಿಳಿಸಿದೆ.

ಡಿಸೆಂಬರ್ 22 ರಂದು ಸೋಮವಾರಪೇಟೆ ತಾಲೂಕಿನ ಕಾಞಂಗಾಡು ಗ್ರಾಮದಲ್ಲಿ ಅಂತ್ಯಕ್ರಿಯೆ ಜರುಗಿತು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ, ಕರ್ನಾಟಕ ಆದಿವಾಸಿ ಹಕ್ಕುಗಳ ಸಮನ್ವಯ ಸಮಿತಿಯ ರಾಜ್ಯ ಸಹ ಸಂಚಾಲಕ, ಎ.ಎ.ಆರ್. ಎಂ. ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯ ಕಾಂ. ಎಸ್.ವೈ.ಗುರುಶಾಂತ್, ಹಿರಿಯ ನಾಯಕರಾದ ಕಾಂ.ಐ.ಆರ್.ದುರ್ಗಾಪ್ರಸಾದ್, ಜಿಲ್ಲಾ ಕಾರ್ಯದರ್ಶಿ ಕಾಂ.ಹೆಚ್.ಬಿ.ರಮೇಶ್ ಮತ್ತು ಜಿಲ್ಲಾ ಸಂ.ಸ.ಸದಸ್ಯರು, ವಿವಿಧ ಸಂಘಟನೆಗಳ, ಸಮುದಾಯಗಳ ನಾಯಕರು, ಕಾರ್ಯಕರ್ತರು, ಅಪಾರ ಜನತೆ, ಬಂಧುಗಳು ಪಾಲ್ಗೊಂಡಿದ್ದರು.

ಪಕ್ಷದ ಪೊಲಿಟ್ ಬ್ಯೂರೋ ಸದಸ್ಯೆ, ಎ.ಎ.ಅರ್.ಎಂ.ನ ಉಪಾದ್ಯಕ್ಷೆ ಕಾಂ.ಬೃಂದಾ ಕಾರತ್, ರಾಷ್ಟ್ರೀಯ ಅದ್ಯಕ್ಷ ಕಾಂ.ಜಿತೇಂದ್ರ ಚೌಧುರಿ, ರಾಷ್ಟ್ರೀಯ ಸಂಚಾಲಕರಾದ ಕಾಂ. ಪುಲೆನ್ ಬಿಹಾರಿ ಭಾಸ್ಕಿ ಅಲ್ಲದೇ ವಿವಿಧ ರಾಜ್ಯಗಳ, ಜಿಲ್ಲೆಗಳ ಪ್ರಮುಖರು ಕಂಬನಿ ಮಿಡಿದು ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

ಬೀದಿಗಳಲ್ಲಿ ‘ಕೆಳಜಾತಿ’ ಜನರು ನಡೆದಾಡುವ... ಪುಟ 5 ರಿಂದ

ಇತರರು ಮುಷ್ಕರದಲ್ಲಿ ಭಾಗವಹಿಸುವುದನ್ನು ಗಾಂಧಿ ವಿರೋಧಿಸಿದರು. ಅದೇ ರೀತಿ ಕೇರಳದ ಸಮಸ್ಯೆಯೊಂದರಲ್ಲಿ ಅಕಾಲಿಗಳು ಮತ್ತು ಇತರರು ಭಾಗವಹಿಸುವುದನ್ನು ಗಾಂಧಿ ಒಪ್ಪಲಿಲ್ಲ. ಎರಡು ವಾರಗಳ ನಂತರ, ಅಕಾಲಿಗಳು ಪಂಜಾಬ್ ಗೆ ಹಿಂತಿರುಗಬೇಕೆಂಬ ಗಾಂಧಿಯವರ ಬೇಡಿಕೆಯನ್ನು ಅನುಸರಿಸಿದರು. ಹಾಗಾಗಿ, ವೈಕಂ ಸತ್ಯಾಗ್ರಹವು ಗಾಂಧಿಯವರ ಜನಪರ ಹೋರಾಟಗಳನ್ನು ರಾಜಕೀಯವಾಗಿ ಅಭಿವೃದ್ಧಿಪಡಿಸಲು ಅವಕಾಶ ನೀಡದೆ, ಅವುಗಳನ್ನು ಕಿರಿದಾದ ಗಡಿಗಳಲ್ಲಿ ಇರಿಸುವ ವಿಧಾನದ ಅಭಿವ್ಯಕ್ತಿಯಾಯಿತು.

ಆದಾಗ್ಯೂ, ಚಳುವಳಿಯ ವೇಗ ನಿಲ್ಲಲಿಲ್ಲ. ಪೆರಿಯಾರ್ ಅವರು ತಮ್ಮ ಭಾಷಣಗಳಿಂದ ಜನರನ್ನು ಹುರಿದುಂಬಿಸುತ್ತಾ ಬ್ರಾಹ್ಮಣತ್ವ ಮತ್ತು ಮನುವಾದ ವ್ಯವಸ್ಥೆಗಳ ಮೇಲೆ ಬೆಂಕಿ ಕಾರಿದರು. ಇದರಿಂದ ರಾಜ ಕೋಪಗೊಂಡ. ಪೆರಿಯಾರ್ ಅವರನ್ನು ಮತ್ತೆ ಬಂಧಿಸಿ, ಈ ಬಾರಿ ಆರು ತಿಂಗಳ ಜೈಲು ಶಿಕ್ಷೆ ವಿಧಿಸಿದನು. ಈ ವಿಷಯನ್ನು ತಿಳಿದ ಪೆರಿಯಾರ್ ಅವರ ಪತ್ನಿ, ತಂಗಿಯರಾದ ನಾಗಮ್ಮಾಳ್ ಮತ್ತು ಕನ್ನಮ್ಮಾಳ್ ತಮಿಳುನಾಡಿನಿಂದ ಬಂದು ವೈಕಂ ಹೋರಾಟದ ಪ್ರಚಾರದಲ್ಲಿ ತೊಡಗಿಕೊಂಡರು.

ವೈಕಂ ಸತ್ಯಾಗ್ರಹದ ಸಮಯದಲ್ಲಿ ರೂಪುಗೊಂಡ ಜಾತ್ಯತೀತ ಮತ್ತು ಜನಪ್ರಿಯ ಐಕ್ಯತೆಯನ್ನು ಗಾಂಧಿಯವರ ನಿಷೇಧದಿಂದ ತಡೆಯಲು ಸಾಧ್ಯವಾಗಲಿಲ್ಲ. ಈ ಎಲ್ಲಾ ಮಿತಿಗಳ ಹೊರತಾಗಿಯೂ, ಬ್ಯಾರಿಸ್ಟರ್ ಜಾರ್ಜ್ ಜೋಸೆಫ್, ಭಜೆಭಾರತಂ ಮಾತ್ತುನ್ನಿ, ಹಸನ್ಕೋಯಪೂಮುಲ್ಲಾ, ಫಾದರ್ ವೆಟ್ಟಿಕ್ಕಪಿಲ್ಲಿ, ಕುರುವಿಲ ಮ್ಯಾಥ್ಯೂ ಮತ್ತು ಅಬ್ದುರ್ ರಹಮಾನ್ ಕುಟ್ಟಿ ಸೇರಿದಂತೆ ವಿವಿಧ ಧಾರ್ಮಿಕ ಸಂಪ್ರದಾಯಗಳ ಜನರು ವೈಕಂ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು.

ಪೆರಿಯಾರ್ ಅವರನ್ನು ಕೊಲ್ಲಲು ‘ಶತ್ರು ಸಂಹಾರ ಯಾಗ’

ವೈಕಂ ನಲ್ಲಿ ನಡೆಯುತ್ತಿದ್ದ ಹೋರಾಟದಿಂದ ಭಯಭೀತರಾದ ಬ್ರಾಹ್ಮಣರು ರಾಜನೊಂದಿಗೆ ಮಾತನಾಡಿ ಪೆರಿಯಾರ್ ಅವರನ್ನು ಕೊಲ್ಲಲು ಶತ್ರು ಸಂಹಾರ ಯಾಗ ಮಾಡಿದರು. ಆದರೆ ಅನಿರೀಕ್ಷಿತವಾಗಿ ರಾಜನೇ ಆಕಸ್ಮಿಕ ಮರಣ ಹೊಂದಿದ. ಅವರ ಸ್ಥಾನದಲ್ಲಿ ರಾಜನ ಪತ್ನಿ ರಾಣಿ ರಾಜ್ಯದ ಜವಾಬ್ದಾರಿಯನ್ನು ವಹಿಸಿಕೊಂಡರು. ವೈಕಂ ಹೋರಾಟಕ್ಕೆ ಹೆದರಿದ ಆಕೆ ಹೋರಾಟಗಾರರೊಂದಿಗೆ ರಾಜಿ ಮಾಡಿಕೊಳ್ಳಲು ಬಯಸಿದ್ದರು. ಆದರೆ, ಈ ವಿಷಯ ತಿಳಿದ ತಮಿಳುನಾಡಿನ ಕಾಂಗ್ರೆಸ್ ಪಕ್ಷದ ಉನ್ನತ ನಾಯಕ ರಾಜಗೋಪಾಲಾಚಾರಿ, ಈ ಗೌರವ ಪೆರಿಯಾರ್ ಅವರಿಗೆ ಸಲ್ಲಬಾರದೆಂದು ಗಾಂಧಿ ಅವರಿಗೆ ವಿಷಯ ತಿಳಿಸಿದರು.

ಮೂರು ದಿಕ್ಕಿನಲ್ಲಿರುವ ಬೀದಿಗಳಲ್ಲಿ ನಿಷೇಧ ಹಿಂಪಡೆದ ರಾಣಿ

1925 ರಲ್ಲಿ ಹೋರಾಟವನ್ನು ಅಂತ್ಯಗೊಳಿಸುವ ವಿಷಯಕ್ಕೆ ಸಂಬಂಧಿಸಿ ಗಾಂಧೀಜಿ ವೈಕಂ ಪಟ್ಟಣಕ್ಕೆ ಬಂದು ರಾಣಿಯೊಡನೆ ಮಾತನಾಡಿದರು. ಅದರಂತೆ ದೇವಸ್ಥಾನದ ದಕ್ಷಿಣ, ಉತ್ತರ ಮತ್ತು ಪಶ್ಚಿಮದ ಬೀದಿಗಳಲ್ಲಿ ಶೂದ್ರರು ಪ್ರಯಾಣಿಸಲು ಅವಕಾಶ ನೀಡಲಾಯಿತು. ಪೂರ್ವ ಭಾಗದ ರಸ್ತೆ ಇನ್ನೂ ಗಣ್ಯರಿಗೆ ಮೀಸಲಾಗಿತ್ತು. ದೇವಾಲಯಕ್ಕೆ ಅಗತ್ಯವಿರುವ ಜಾಗವನ್ನು ಗೋಡೆಯಿಂದ ಬೇರ್ಪಡಿಸಿ ಅಲ್ಲಿ ದ್ವಾರಗಳನ್ನು ನಿರ್ಮಿಸಲು ನಿರ್ಧರಿಸಲಾಯಿತು.

ಗಾಂಧೀಜಿ ತಮ್ಮ ಅಭಿಪ್ರಾಯವನ್ನು ಪೆರಿಯಾರ್ ಅವರಿಗೆ ವಿವರಿಸಿದರು. ದೇವಾಲಯದ ಬೀದಿಗಳಲ್ಲಿ ನಡೆಯಲು ರಾಣಿ ಒಪ್ಪಿಕೊಂಡಳು. ಆದರೆ ‘ನೀವು ದೇವಾಲಯ ಪ್ರವೇಶ ಕೇಳುತ್ತೀರಿ ಎಂಬ ಭಯವನ್ನು ಅವರು ವ್ಯಕ್ತಪಡಿಸುತ್ತಿದ್ದಾರೆ’ಎಂದು ಗಾಂಧೀಜಿ ಪೆರಿಯಾರ್ ಅವರಿಗೆ ಹೇಳಿದರು. ಆಗ ಪೆರಿಯಾರ್ ‘ಮೊದಲು ದೇವಾಲಯ ಬೀದಿಗಳಲ್ಲಿ ನಡೆಯೋಣ, ನಂತರ ದೇವಸ್ಥಾನದ ಒಳಗೆ ಹೋಗಲು ಪ್ರಯತ್ನ ಮಾಡುತ್ತೇವೆ’ ಎಂದು ಗಾಂಧಿಜಿಯವರಿಗೆ ಹೇಳಿದರು. ಇದರ ನಂತರ 603 ದಿನಗಳ ವೈಕಂ ಸತ್ಯಾಗ್ರಹವು 23 ನವೆಂಬರ್ 1925 ರಂದು ಕೊನೆಗೊಂಡಿತು.

ವೈಕಂ ಹೋರಾಟ ಯಶಸ್ವಿಯಾಗಿದೆ. ಆದರೆ,

ವೈಕಂ ಹೋರಾಟ ಯಶಸ್ವಿಯಾಗಿದೆ. ಈ ಸಂದರ್ಭದಲ್ಲಿ ಪೆರಿಯಾರ್ ಹೇಳಿದ ಮಾತು ಪ್ರತಿಯೊಬ್ಬರ ರಕ್ತ ಕೊತ ಕೊತ ಕುದಿಯುವಂತೆ ಮಾಡಿದೆ. ”ಮಲ ತಿನ್ನುವ ನಾಯಿಗಳು, ಹಂದಿಗಳು ಸ್ವಚ್ಛಂದವಾಗಿ ನಡೆದಾಡುವ ಬೀದಿಗಳಲ್ಲಿ ದಲಿತರಿಗೆ ಪ್ರವೇಶವಿಲ್ಲ ಎಂಬ ಆ ಹಕ್ಕಿಗಾಗಿ ಮಾತ್ರವೇ ನಾವು ಹೋರಾಡಲಿಲ್ಲ. ಮನುಷ್ಯ ಮನುಷ್ಯನ ನಡುವೆ ಅಂತರವನ್ನು ತೊಲಗಿಸಿ ಮಾನವೀಯತೆಯನ್ನು ಸಾಧಿಸುವುದೇ ನಮ್ಮ ಉದ್ದೇಶ. ಅದಕ್ಕಾಗಿಯೇ ದೇವಸ್ಥಾನದ ಬೀದಿಗಳಲ್ಲಿ ನಡೆದಾಡುವುದಕ್ಕಾಗಿ ನಾವು ಹೋರಾಟ ನಡೆಸಬೇಕಾಗಿ ಬಂದಿದೆ’ ಎಂದರು.

ಅಂತೆಯೇ, ವೈಕಂ ಸತ್ಯಾಗ್ರಹವು ನಂತರದ ಅನೇಕ ಹೋರಾಟಗಳಿಗೆ ಕಾರಣವಾಯಿತು. ಗುರುವಾಯೂರ್ ಸತ್ಯಾಗ್ರಹ (1931), ಶುಚಿಂದ್ರಂ ಸತ್ಯಾಗ್ರಹ (1926), ಕಲ್ಪತಿ ಸಂಗಮ್ (1926), ಪಾಳಿಯಂ ಸಂಗಮ್ (1948) ಮತ್ತು ದೇವಾಲಯ ಪ್ರವೇಶ ಆಚರಣೆಗಳಂತಹ ಘೋಷಣೆಗಳಿಗೆ ದಾರಿ ಮಾಡಿಕೊಟ್ಟದ್ದು ವೈಕಂ ಸತ್ಯಾಗ್ರಹದ ಶಕ್ತಿ.

ಆತ್ಮ ವಿಶ್ವಾಸವನ್ನು ತೋರಿದ ವೈಕಂ ಹೋರಾಟ

ವೈಕಂ ಹೋರಾಟ ನಡೆದು ನೂರು ವರ್ಷಗಳಾಗುತ್ತಿರುವ ಸಂದರ್ಭದಲ್ಲಿ ಕೇರಳದ ಎಡಪಂಥೀಯ ಸರಕಾರ ಮತ್ತು ತಮಿಳುನಾಡಿನ ಡಿಎಂಕೆ ಸರಕಾರ ವೈಕಂ ಹೋರಾಟದ ಶತಮಾನೋತ್ಸವದ ವಿಜಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಿದವು. ವೈಕಂನಲ್ಲಿ ಪೆರಿಯಾರ್ ಭವನ, ಪೆರಿಯಾರ್ ಗ್ರಂಥಾಲಯದ ಜೊತೆಗೆ ಒಂದು ವಸ್ತುಸಂಗ್ರಹಾಲಯವನ್ನು ಸಹ ಸ್ಥಾಪಿಸಲಾಗಿದೆ. ಜಾತಿ ತಾರತಮ್ಯ ವಿರೋಧಿ ಹೋರಾಟದಲ್ಲಿ ಕೋಮುವಾದವನ್ನು ಮೀರಿ ವಿವಿಧ ಧಾರ್ಮಿಕ ಮತ್ತು ಜಾತಿ ಸಮುದಾಯಗಳಿಗೆ ಸೇರಿದ ಜನರು ಒಗ್ಗೂಡಿದ್ದು ವೈಕಂ ಹೋರಾಟದ ವಿಶೇಷತೆಯಲ್ಲಿ ಒಂದು. ದಿಟ್ಟವಾದ ಹೋರಾಟದಿಂದ ಏನನ್ನು ಬೇಕಾದರೂ ಸಾಧಿಸಬಹುದು ಎಂಬ ಆತ್ಮ ವಿಶ್ವಾಸವನ್ನು ವೈಕಂ ಹೋರಾಟ ತೋರಿಸುತ್ತದೆ. ಆದ್ದರಿಂದಲೇ ಇದು ಕೇರಳದ ಜನತೆಗೆ ಮಾತ್ರವಲ್ಲ, ಭಾರತದ ಸಮಸ್ತ ಜನತೆಗೆ ಸಂದ ಜಯ. ಭವಿಷ್ಯದ ಪೀಳಿಗೆಗೆ ಸ್ಫೂರ್ತಿಯಾಗಿದೆ. ಬ್ರಾಹ್ಮಣವಾದದ ವಿಭಜಕ ತರ್ಕದ ವಿರುದ್ಧ ಪಂಥೀಯ ರೇಖೆಗಳಾದ್ಯಂತ ಒಟ್ಟಾಗಿ ನಿಲ್ಲುವ ಅಗತ್ಯವನ್ನು ಅದು ನಮಗೆ ಹೇಳುತ್ತದೆ.

–ಸಿಚಿ

ಬ್ರಿಟಿಷರ ವಾಸಕ್ಕೆ, ಅವರ ಕೈಗಾರಿಕೆಗಳಿಗೆ........ ಪುಟ 2 ರಿಂದ

ಮಾಡುವುದಕ್ಕೇ ಮೀಸಲಾದವು. ಈ ಉತ್ಪಾದನೆ ಮತ್ತು ರಫ್ತು ಅದರಲ್ಲಿ ತೊಡಗಿದವರಿಗೆ ಅಪಾರ ಲಾಭ ತಂದುಕೊಟ್ಟಿತು. ಕಬ್ಬನ್ನು ಬೆಳೆಯಲು, ಸಕ್ಕರೆ ತಯಾರಿಸಲು ಅಗತ್ಯವಾದ ದೊಡ್ಡ ಪ್ರಮಾಣದ ಮಾನವ ಶ್ರಮವನ್ನು ಪೂರೈಸಲು ಆಫ್ರಿಕಾದಿಂದ ಕಪ್ಪು ಜನರನ್ನು ಗುಲಾಮರನ್ನಾಗಿ ಆಮದು ಮಾಡಿಕೊಳ್ಳಲಾಯಿತು. ಇದೊಂದು ಬೇರೆಯೇ ಕತೆ. ಮುಂದಿನ ಲೇಖನಗಳಲ್ಲಿ ವಿವರಿಸಲಾಗುತ್ತದೆ. ಹೀಗೆ ಹಿಡಿದು ತರಲಾದ ಗುಲಾಮರಲ್ಲಿ ಶೇ.70 ಭಾಗ ಕಬ್ಬು, ಸಕ್ಕರೆಗಾಗಿಯೇ ಉಪಯೋಗಿಸಲಾಯಿತೆಂದರೆ ಈ ವ್ಯವಹಾರ ಎಷ್ಟೊಂದು ಲಾಭ ತರುವಂತದ್ದಾಗಿತ್ತೆಂದು ಊಹಿಸಬಹುದು. ಹೀಗೆ ಬಹಳ ಸಿಹಿಯಾದ ತಿನಿಸುಗಳ ಹಿಂದೆ ಬಹಳ ಕಹಿಯಾದ ಗುಲಾಮರ ರಕ್ತ ಬೆರೆತ ಬೆವರು ಅಡಗಿತ್ತು.

ಬ್ರಿಟನ್‌ನಲ್ಲಿ ಹೊಸ ಹೊಸ ನೂಲು, ನೇಯ್ಗೆ ಯಂತ್ರಗಳ ಕಂಡು ಹಿಡಿಯುವಿಕೆ, ಕೈಗಾರಿಕೆಗಳ ಸ್ಥಾಪನೆ ಉತ್ತಮ ಮತ್ತು ಉದ್ದ ಎಳೆಯ ಹತ್ತಿಯನ್ನು ಅಪೇಕ್ಷಿಸಿತು. ಹತ್ತಿ ಹೀಗೆ ಬೆಳೆದ ಎರಡನೆಯ ಪ್ರಾಮುಖ್ಯದ ಬೆಳೆ. ಮುಖ್ಯವಾಗಿ ಸಂಯುಕ್ತ ಸಂಸ್ಥಾನಗಳ ದಕ್ಷಿಣದ ರಾಜ್ಯಗಳಲ್ಲಿ. ಅದರಲ್ಲೂ ಗುಲಾಮರು ಬೆವರು ಬಸಿದರು.


ಹೊಗೆಸೊಪ್ಪು ಮತ್ತೊಂದು ಮುಖ್ಯವಾದ ಬೆಳೆ. ಅಮೆರಿಕದ ವರ್ಜಿನಿಯಾ ಪ್ರಾಂತ್ಯದ ಹೊಗೆಸೊಪ್ಪಿನ ವಿಶೇಷ ಗುಣಮಟ್ಟ ವಿಶ್ವ ಪ್ರಖ್ಯಾತವಾಯಿತು. ಇಲ್ಲಿ ಜಗದ್ವಿಖ್ಯಾತ ➚

ಏಕಕಾಲದ ಚುನಾವಣೆಗಳಿಂದ ಸಂವಿಧಾನ ಬುಡಮೇಲು

ಪ್ರಕಾಶ್ ಕಾರತ್

ಸಂವಿಧಾನ ರಚನೆಯ 75ನೇ ವರ್ಷಾಚರಣೆಯ ಭಾಗವಾಗಿ ಲೋಕಸಭೆಯಲ್ಲಿ ನಡೆದ ಚರ್ಚೆಯ ವೇಳೆ ಸಂವಿಧಾನವನ್ನು ರಕ್ಷಿಸುವ ಕುರಿತು ಬಿಜೆಪಿ ನಾಯಕರು ಉದ್ದುದ್ದ ಭಾಷಣ ಮಾಡಿದ ಕೇವಲ ಎರಡು ದಿನಗಳ ನಂತರ, ಮೋದಿ ಸರಕಾರವು ಸಂಸತ್ತಿನಲ್ಲಿ ಸಂವಿಧಾನ ತಿದ್ದುಪಡಿ ಮಸೂದೆಯೊಂದನ್ನು ಮಂಡಿಸಿದೆ. ಸಂವಿಧಾನ ಮತ್ತು ಅದರೊಳಗಿನ ಒಕ್ಕೂಟ ಸ್ವರೂಪಕ್ಕೆ ಹಾನಿ ಮಾಡುವುದು ಈ ಮಸೂದೆಯ ಉದ್ದೇಶವಾಗಿದೆ.

ಎರಡು ಮಸೂದೆಗಳನ್ನು ಮಂಡಿಸಲಾಗಿದೆ: ಸಂವಿಧಾನ (129ನೇ ತಿದ್ದುಪಡಿ) ಮಸೂದೆ ಮತ್ತು ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳ ತಿದ್ದುಪಡಿ ಮಸೂದೆ ಇವೇ ಆ ಮಸೂದೆಗಳಾಗಿದ್ದು ಲೋಕಸಭೆ ಮತ್ತು ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ (ಯುಟಿ) ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದು ಅವುಗಳ ಉದ್ದೇಶವಾಗಿದೆ.



ಸಂವಿಧಾನ ತಿದ್ದುಪಡಿ ಮಸೂದೆಯು ಸಂವಿಧಾನದ ಮೂರು ನಿಯಮಗಳನ್ನು ತಿದ್ದುಪಡಿ ಮಾಡುತ್ತದೆ ಹಾಗೂ ಒಂದು ಹೊಸ ನಿಯಮವನ್ನು ಸಂವಿಧಾನಕ್ಕೆ ಸೇರಿಸುತ್ತದೆ. ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆಗಳನ್ನು ನಡೆಸಲು ಅನುಕೂಲ ಮಾಡುವುದು ಈ ತಿದ್ದುಪಡಿಗಳ ಉದ್ದೇಶವಾಗಿದೆ. ಅದಕ್ಕಾಗಿ, ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಸಂವಿಧಾನದಲ್ಲಿ ಒದಗಿಸಲಾಗಿರುವ ಐದು ವರ್ಷಗಳ ಅವಧಿಯನ್ನು ಕೈಬಿಡಲಾಗಿದೆ.

ಮೊದಲ ಪ್ರಹಾರ

ಮೊತ್ತ ಮೊದಲನೆಯದಾಗಿ, ಲೋಕಸಭೆ ಮತ್ತು ಎಲ್ಲ ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಒಟ್ಟಿಗೆ ತರಲು, ಲೋಕಸಭೆಗೆ ಭಾರತದ ರಾಷ್ಟ್ರಪತಿ ಘೋಷಿಸಿದ ನಿಗದಿತ ಐದು ವರ್ಷಗಳ ಅವಧಿ ಮುಗಿದ ನಂತರ, ಲೋಕಸಭೆಯ ಪೂರ್ಣ ಅವಧಿ ಮುಗಿದ ನಂತರ ಎಲ್ಲ ರಾಜ್ಯ ವಿಧಾನಸಭೆಗಳ ಅವಧಿಯು ಅಂತ್ಯವಾಗುತ್ತದೆ. ಏಕಕಾಲದ ಚುನಾವಣೆಗೆ ಹಾದಿ ಮಾಡಿಕೊಡಲು ಕೆಲವು ವಿಧಾನಸಭೆಗಳ ಐದು ವರ್ಷಗಳ ಅವಧಿಯನ್ನು ಮೊಟಕುಗೊಳಿಸಲಾಗುತ್ತದೆ. ಇದು ಐದು ವರ್ಷದ ಅವಧಿ ಹೊಂದುವ ರಾಜ್ಯ ಶಾಸಕಾಂಗದ ಹಕ್ಕಿನ ಮೇಲಿನ ಮೊದಲ ಪ್ರಹಾರವಾಗಿದೆ. ಇಷ್ಟು ಮಾತ್ರವಲ್ಲದೆ, ಭವಿಷ್ಯದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಐದು ವರ್ಷದ ಅವಧಿಯನ್ನು ಖಾತರಿಪಡಿಸಲಾಗಿಲ್ಲ. ಒಂದು ವೇಳೆ ಲೋಕಸಭೆಯು ಪೂರ್ಣ ಅವಧಿಯನ್ನು ಮುಗಿಸುವ ಮುನ್ನವೇ ವಿಸರ್ಜನೆಗೊಂಡರೆ, ಅದರ ಉಳಿದ ಅವಧಿಗಷ್ಟೇ ಮುಂದಿನ ಲೋಕಸಭೆ ಚುನಾವಣೆ ನಡೆಯಬೇಕು ಎಂಬುದಾಗಿ ಒಂದು ತಿದ್ದುಪಡಿ ಹೇಳುತ್ತದೆ. ಒಂದು ವೇಳೆ ಲೋಕಸಭೆ ಮೂರು ವರ್ಷದ ನಂತರ ವಿಸರ್ಜನೆಗೊಂಡರೆ, ಮುಂದಿನ ಚುನಾವಣೆಯು ಎರಡು ವರ್ಷಕ್ಕೆ ಕಾರ್ಯನಿರ್ವಹಿಸುವ ಲೋಕಸಭೆಗಾಗಿಯಷ್ಟೇ ನಡೆಯುತ್ತದೆ ಎನ್ನುವುದು ಇದರ ಅರ್ಥವಾಗಿದೆ. ರಾಜ್ಯ ವಿಧಾನಸಭೆಗಳ ಅವಧಿಗೆ ಸಂಬಂಧಿಸಿಯೂ ಇದೇ ರೀತಿಯ ತಿದ್ದುಪಡಿಯನ್ನು ಪ್ರಸ್ತಾಪಿಸಲಾಗಿದೆ. ಯಾವುದಾದರೂ ವಿಧಾನಸಭೆಯು ಮಧ್ಯದಲ್ಲಿಯೇ ವಿಸರ್ಜನೆಗೊಂಡರೆ ಉಳಿದ ಅವಧಿಗೆ ಮಾತ್ರವೇ ವಿಧಾನಸಭೆ ಚುನಾವಣೆ ನಡೆಯಲಿದೆ. ಆದ್ದರಿಂದ, ಮಧ್ಯಂತರ ಚುನಾವಣೆಯಲ್ಲಿ ಆಯ್ಕೆಯಾಗುವ ಯಾವುದೇ ಸಂಸತ್ ಸದಸ್ಯ ಅಥವಾ ಶಾಸಕರು ಪೂರ್ಣ ಐದು ವರ್ಷದ ಅವಧಿಯನ್ನು ಹೊಂದಿರುವುದಿಲ್ಲ. ಇದು ಸಂವಿಧಾನದಲ್ಲಿ ನಿರೂಪಿಸಲಾಗಿರುವ ಮೂಲಭೂತ ಸಂಸದೀಯ ಪ್ರಜಾಪ್ರಭುತ್ವದ ಯೋಜನೆಗೇ ವಿರುದ್ಧವಾಗಿದೆ.

ಒಕ್ಕೂಟ ತತ್ವಕ್ಕೆ ಗಂಭೀರ ಪರಿಣಾಮ

ಯಾವುದೇ ರಾಜ್ಯ ವಿಧಾನಸಭೆಯ ಅಧಿಕಾರಾವಧಿ ಮೊಟಕುಗೊಳ್ಳುವುದರಿಂದ ಒಕ್ಕೂಟ ತತ್ವ ಮತ್ತು ಚುನಾಯಿತ ರಾಜ್ಯ ಶಾಸಕಾಂಗಗಳ ಹಕ್ಕುಗಳ ವಿಚಾರದಲ್ಲಿ ಗಂಭೀರ ಪರಿಣಾಮ ಉಂಟಾಗುತ್ತದೆ.

ರಾಜ್ಯಗಳ ಒಕ್ಕೂಟದಲ್ಲಿ ಪ್ರಕಟಗೊಂಡಿರುವ ಒಕ್ಕೂಟ ಸ್ವರೂಪವು ದುರ್ಬಲವಾಗುತ್ತದೆ ಹಾಗೂ ವಿಧಾನಸಭೆಗಳಿಗೆ ನಿಗದಿಯಾಗಿರುವ ಐದು ವರ್ಷಗಳ ಅವಧಿ ಮೊಟಕುಗೊಳ್ಳುತ್ತದೆ. ಇದು, ಕೇಂದ್ರ ಸರಕಾರ ಮತ್ತು ಕೇಂದ್ರದಲ್ಲಿನ ಆಳುವ ಪಕ್ಷವು ಮೋಸ ಮಾಡಲೂ ಹಾದಿಯನ್ನು ತೆರೆಯಲಿದೆ. ಉದಾಹರಣೆಗೆ, ಯಾವುದಾದರೂ ರಾಜ್ಯ ವಿಧಾನಸಭೆಯು ಸರಕಾರದ ಪತನದಿಂದಾಗಿ ತನ್ನ ಅವಧಿಯ ನಾಲ್ಕು ವರ್ಷಗಳಲ್ಲಿ ವಿಸರ್ಜನೆಯಾದರೆ, ಉಳಿದ ಕೇವಲ ಒಂದು ವರ್ಷದ ಅವಧಿಗೆ ಮಧ್ಯಾವಧಿ ಚುನಾವಣೆ ನಡೆಸುವುದರಲ್ಲಿ ಯಾವುದೇ ಅರ್ಥವಿರುವುದಿಲ್ಲ. ಸರಕಾರ ಪತನವಾಗುವುದನ್ನು ತಡೆಯಲು ಕುದುರೆ ವ್ಯಾಪಾರಕ್ಕೆ ಇಂಥ ಸನ್ನಿವೇಶ ಬಾಗಿಲು ತೆರೆಯಬಹುದು ಅಥವಾ ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಹೇರಿಕೆಗೆ ಅದು ಆಹ್ವಾನವಾಗಲೂ ಬಹುದು.

ಒಕ್ಕೂಟ ತತ್ವವು ವೈವಿಧ್ಯತೆ ಮತ್ತು ನಾನಾ ಭಾಷಾ ಸಾಮಾಜಿಕ ಸಾಂಸ್ಕೃತಿಕ ಪರಿಸ್ಥಿತಿಗಳನ್ನು ಮತ್ತು ರಾಜಕೀಯ ಬಹುತ್ವವನ್ನು ಗೌರವಿಸುತ್ತದೆ. ಲೋಕಸಭೆ ಚುನಾವಣೆ ಜತೆಯಲ್ಲೇ ಎಲ್ಲ ರಾಜ್ಯ ವಿಧಾನಸಭೆಗಳ ಚುನಾವಣೆಗಳನ್ನು ನಡೆಸುವುದು ಅದು ಕೇಂದ್ರೀಕೃತ ವ್ಯವಸ್ಥೆಯಲ್ಲಿ ಏಕರೂಪದ ರಾಜಕೀಯ ಪಕ್ಷದತ್ತ ಅವುಗಳನ್ನು ತಳ್ಳುವ ಹುನ್ನಾರವಾಗಲಿದೆ.

ವೆಚ್ಚ ಕಡಿತದ ವಾದ

ಏಕಕಾಲದ ಚುನಾವಣೆಯಿಂದಾಗಿ, ಬೇರೆ ಬೇರೆ ಸಮಯದಲ್ಲಿ ನಾನಾ ಚುನಾವಣೆಗಳಿಗೆ ತಗಲುವ ಅಪಾರ ವ್ಯರ್ಥ ವೆಚ್ಚವನ್ನು ತಡೆಯಬಹುದು ಎನ್ನುವುದು 'ಒಂದು ದೇಶ ಒಂದು ಚುನಾವಣೆ' ವ್ಯವಸ್ಥೆಯನ್ನು ಪ್ರತಿಪಾದಿಸುವವರ ಪ್ರಮುಖ ವಾದವಾಗಿದೆ. ಆದರೆ, ಸಂಸತ್ತು ಮತ್ತು ಅಸೆಂಬ್ಲಿ ಚುನಾವಣೆಗಳಲ್ಲಿ ಜೋಡಣೆಯನ್ನು (ಅಲೈನ್‌ಮೆಂಟ್) ಉಳಿಸಿಕೊಳ್ಳಲು ಮಾಡಲಾಗಿರುವ ಪ್ರಸ್ತಾಪಿತ ಬದಲಾವಣೆಗಳು ಅತಿ ಕಡಿಮೆ ಅವಧಿಯಲ್ಲಿ ಅನಗತ್ಯ ಚುನಾವಣೆಗಳಿಗೆ ಹಾದಿ ಮಾಡುತ್ತದೆ.

ಸಂವಿಧಾನ ತಿದ್ದುಪಡಿ ಪ್ರಸ್ತಾಪನೆಗಳ ಮೂಲಕ, ಐದು ವರ್ಷ ಅವಧಿಯ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಸಬಹುದಾಗಿದೆ. ಆದರೆ, ಸರಕಾರ ಪತನಗೊಂಡರೆ ಉಳಿದ ಅವಧಿಗಷ್ಟೇ ಚುನಾವಣೆ ನಡೆಯುತ್ತದೆ. ನಂತರ, ಐದು ವರ್ಷ ಅವಧಿಯ ಕೊನೆಯಲ್ಲಿ ಇನ್ನೊಂದು ಚುನಾವಣೆ ನಡೆಯಬೇಕಾಗುತ್ತದೆ. ಅಂದರೆ, ಐದು ವರ್ಷದ ಅವಧಿಯಲ್ಲಿ ಮೂರು ಚುನಾವಣೆ ನಡೆಯುತ್ತದೆ ಎಂದಾಯಿತು. ಲೋಕಸಭೆ ಮಟ್ಟದಲ್ಲಿ ಈ ರೀತಿಯ ಸನ್ನಿವೇಶ ಉದ್ಭವಿಸಿದರೆ, ಐದು ವರ್ಷದ ಕಾಲಾವಧಿಯಲ್ಲಿ ಮೂರು ರಾಷ್ಟ್ರೀಯ ಚುನಾವಣೆಗಳು ನಡೆಯಬೇಕಾಗುತ್ತದೆ.



ಇಂಥ ಅಸಂಗತ ಪರಿಸ್ಥಿತಿಯಿಂದಾಗಿ ಚುನಾವಣಾ ಖರ್ಚುವೆಚ್ಚಗಳು ಹಲವು ಪಟ್ಟು ಜಾಸ್ತಿಯಾಗುತ್ತದೆ ಅಷ್ಟೇ. ಪರಿಸ್ಥಿತಿ ಪೂರಕವಲ್ಲವೆಂದು ತಾನು ಭಾವಿಸಿದರೆ, ಯಾವುದೇ ರಾಜ್ಯದಲ್ಲಿ ಚುನಾವಣೆಯನ್ನು ವಿಳಂಬಗೊಳಿಸುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡುವ ನಿಯಮವೊಂದನ್ನು ಕೂಡ ಪರಿಚಯಿಸಲಾಗಿದೆ. ಚುನಾವಣಾ ಆಯೋಗದ ಶಿಫಾರಸಿನ ಮೇರೆಗೆ ರಾಷ್ಟ್ರಪತಿ ಕ್ರಮ ಕೈಗೊಳ್ಳುತ್ತಾರೆ. ಒಕ್ಕೂಟ ಸ್ವರೂಪದಲ್ಲಿ ರಾಜ್ಯವೊಂದರ ಮೂಲಭೂತ ಹಕ್ಕನ್ನು ಬುಡಮೇಲು ಮಾಡಲು ಬಳಸಬಹುದಾದ್ದರಿಂದ ಇದೊಂದು ಅಪಾಯಕಾರಿ ನಿಯಮವಾಗಿದೆ.

ಹಿಂದೂತ್ವ ಸಿದ್ಧಾಂತ

ಬಿಜೆಪಿ ಆಡಳಿತಗಾರರ ಅತಿ–ರಾಷ್ಟ್ರೀಯವಾದಿ ಹಿಂದೂತ್ವ ಸಿದ್ಧಾಂತವೇ 'ಒಂದು ದೇಶ ಒಂದು ಚುನಾವಣೆ'ಯ ಪ್ರೇರಕ ಶಕ್ತಿಯಾಗಿದೆ. ಈ ಸಿದ್ಧಾಂತವು ಸರ್ವಾಧಿಕಾರಿ ಕೇಂದ್ರೀಕೃತ ಪ್ರಭುತ್ವಕ್ಕೆ ಹಾತೊರೆಯುತ್ತದೆ. ಇದು ಒಕ್ಕೂಟ ತತ್ವ, ವೈವಿಧ್ಯತೆ ಮತ್ತು ಬಹುತ್ವಕ್ಕೆ ತೀರಾ ವಿರುದ್ಧವಾಗಿದೆ.

ಅತಿ–ಕೇಂದ್ರೀಕೃತ ಪ್ರಭುತ್ವಕ್ಕಾಗಿ ಮೋದಿ ಸರಕಾರ ಈ ಮಸೂದೆಗಳನ್ನು ತಂದಿದೆ. 18ನೇ ಲೋಕಸಭೆ ಚುನಾವಣೆ ನಂತರ, ಬಿಜೆಪಿ ಮತ್ತು ಎನ್‌ಡಿಎ ಮೈತ್ರಿಕೂಟ ಲೋಕಸಭೆಯಲ್ಲಿ ಮೂರನೇ ಎರಡು ಬಹುಮತವನ್ನು ಹೊಂದಿಲ್ಲ. ರಾಜ್ಯಸಭೆಯಲ್ಲಿ ಕೂಡ ಅದಕ್ಕೆ ಈ ಬಹುಮತವಿಲ್ಲ. ಸಂವಿಧಾನ ತಿದ್ದುಪಡಿಗಳು ಅಂಗೀಕಾರವಾಗಲು ಸದನಗಳಲ್ಲಿ ಹಾಜರಿರುವ ಸದಸ್ಯರಲ್ಲಿ ಮೂರನೇ ಎರಡರಷ್ಟು ಬಹುಮತ ಮತ್ತು ಎರಡೂ ಸದನಗಳಲ್ಲಿ ವೋಟಿಂಗ್ ಅಗತ್ಯ. ಅಷ್ಟು ಮಾತ್ರವಲ್ಲದೆ, ಎರಡೂ ಸದನಗಳ ಅರ್ಧದಷ್ಟು ಸದಸ್ಯರು ತಿದ್ದುಪಡಿಯ ಪರವಾಗಿ ಮತ ನೀಡಬೇಕಾಗುತ್ತದೆ. ಈ ರೀತಿಯ ಬಹುಮತವಿಲ್ಲದೆ ಈ ಮಸೂದೆಗಳನ್ನು ಮಂಡಿಸಲಾಗಿದೆ. ಹಾಗೂ ಅವುಗಳನ್ನು ಜಂಟಿ ಸಂಸದೀಯ ಸಮಿತಿಯೊಂದರ ಪರಿಶೀಲನೆಗೆ ಒಪ್ಪಿಸಲಾಗಿದೆ. ಈ ವಿಷಯವನ್ನು ಸಂಸತ್ತಿನಲ್ಲಿ ಜೀವಂತವಾಗಿಡುವುದು ಹಾಗೂ ಅದನ್ನು ರಾಜಕೀಯ ಪ್ರಚಾರಕ್ಕೆ ಬಳಸಿಕೊಂಡು ಭವಿಷ್ಯದಲ್ಲಿ ಯಾವತ್ತಾದರೂ ಬೇಕಾದಾಗ ಮತ್ತೆ ಕೆದಕುವುದು ಉದ್ದೇಶವಿದ್ದಂತೆ ಕಾಣುತ್ತದೆ.

ಈ ತಿದ್ದುಪಡಿಗಳ ಪ್ರಜಾಪ್ರಭುತ್ವ–ವಿರೋಧಿ, ಒಕ್ಕೂಟ ತತ್ವ–ವಿರೋಧಿ ಸ್ವರೂಪದ ವಿರುದ್ಧ ಪ್ರಚಾರ ನಡೆಸುವುದು ಹಾಗೂ ಜನರ ನಡುವೆ ಅವುಗಳ ನೈಜ ಬಣ್ಣವನ್ನು ಬಯಲು ಮಾಡುವುದು ಅತ್ಯಗತ್ಯ.

ಅನು: ವಿಶ್ವ

ಸಿಗರೇಟ್ ಕಾರ್ಖಾನೆಗಳು ಅಸ್ತಿತ್ವಕ್ಕೆ ಬಂದವು. ಕ್ಯೂಬಾ ಮತ್ತು ನೆರೆಯ ದ್ವೀಪಗಳು ಸಿಗಾರ್‌ಗೆ ಸೂಕ್ತವಾದ ಹೊಗೆಸೊಪ್ಪಿಗೆ ಪ್ರಸಿದ್ಧವಾಯಿತು.

ಹೀಗೆ ಅಮೆರಿಕ ಖಂಡಗಳ ಇಡೀ ಪ್ರದೇಶದ ಹತ್ತಾರು ಲಕ್ಷ ಎಕರೆ ಫಲವತ್ತಾದ ಭೂಮಿ ಕೇವಲ ಯುರೋಪಿನ ಅಗತ್ಯಗಳನ್ನು ಪೂರೈಸುವುದಕ್ಕಾಗಿಯೇ ಸೃಷ್ಟಿಯಾಗಿರುವುದೆಂಬಂತೆ ಬಳಸಿಕೊಳ್ಳಲಾಯಿತು.

ಇದು ಈ ವಿಶಾಲ ಭೂ ಪ್ರದೇಶ, ಸಂಪತ್ತು, ವ್ಯಾಪಾರ, ಉದ್ಯಮಗಳು ಅವುಗಳ ಮೇಲೆ ಹಿಡಿತ ಸ್ಥಾಪಿಸಿದ ಮೂರ್ನಾಲ್ಕು ದೇಶಗಳ ಯುರೋಪಿಯನ್ನರಿಗೆ ಮುಖ್ಯವಾಗಿ ಬ್ರಿಟಿಷರಿಗೆ ಲಾಭ ಮತ್ತು ಬಂಡವಾಳ ಶೇಖರಣೆಗೆ ಸಾಧನವಾಯಿತು.

ಬ್ರಾಹ್ಮಣತ್ವವನ್ನು ತಗ್ಗಿಸಿದ ಬ್ರಿಟಿಷ್ ಕಾನೂನುಗಳು... ಪುಟ 4 ರಿಂದ

ಯಾರು ದಿನ ಕಳೆಯುತ್ತಿದ್ದಾರೆಂದು ಯೋಚಿಸಿದರೆ ಸತ್ಯ ಗೊತ್ತಾಗುತ್ತದೆ. ಬ್ರಾಹ್ಮಣ್ಯದ ಕಬ್ಬಿಣದ ಮುಷ್ಟಿಯಿಂದ ಹೊರಗುಳಿದವರು ಮಾತ್ರ ಜೀವನದಲ್ಲಿ ಶಾಂತಿಯನ್ನು ಕಂಡುಕೊಳ್ಳುತ್ತಾರೆ. ಇಂದಿನ ಯುವಕರು ಅದನ್ನೇ ಮಾಡುತ್ತಿದ್ದಾರೆ.

ಕೆರೆಯ ನೀರು ಕುಡಿದಿದ್ದಕ್ಕಾಗಿ ಶಿಕ್ಷೆ


ನಾವೆಲ್ಲ ಬ್ರಾಹ್ಮಣವಾದಕ್ಕೆ ಸಂಬಂಧಿಸಿ ಮಾತನಾಡುತ್ತಿರುವುದರಿಂದ –ಕೆರೆಯ ನೀರು ಕುಡಿದಿದ್ದಕ್ಕಾಗಿ ಗರ್ಭಿಣಿಯರನ್ನು, ಬಾಣಂತಿಯರನ್ನು, ಮುದುಕಿಯರನ್ನು, ಮಕ್ಕಳನ್ನು ನಿರ್ದಾಕ್ಷಿಣ್ಯವಾಗಿ ಹೊಡೆದು ಕೊಲ್ಲುವುದು ಬ್ರಾಹ್ಮಣವಾದದ ಅನಿಷ್ಟಗಳಲ್ಲಿ ಒಂದು ಎಂಬುದನ್ನು ನೆನಪಿನಲ್ಲಿಡಬೇಕು. ಅಸ್ಪೃಶ್ಯರನ್ನು ಊರ ಹೊರಗೆ ಓಡಿಸಿ, ಸೊಂಟಕ್ಕೆ ಪೊರಕೆ ಕಟ್ಟಿಸಿ, ಚಪ್ಪಲಿಯನ್ನು ಕೈಯಲ್ಲಿ ಹಿಡಿದು ಬರಿಗಾಲಿನಿಂದ ನಡೆಸಿದ ಶ್ರೇಯಸ್ಸು ಬ್ರಾಹ್ಮಣವಾದದ್ದೇ – ಈ ಬ್ರಾಹ್ಮಣವಾದ ನೀತಿಗಳನ್ನು ಯಾರೋ ಕುಳಿತು ಬರೆದದ್ದಲ್ಲ. ತಮ್ಮ ಪ್ರಾಬಲ್ಯವನ್ನು ಉಳಿಸಿಕೊಳ್ಳಲು ಸಾವಿರಾರು ವರ್ಷಗಳಿಂದ ಕೆಲವರು ಕಾಲಕ್ರಮದಲ್ಲಿ ಸೇರಿಸುತ್ತಾ ಬಂದಿದ್ದಾರೆ. ಇವನ್ನೆಲ್ಲವನ್ನು ಸೇರಿಸಿ 'ಮನು' ಎಂಬ ವ್ಯಕ್ತಿ ಬರೆದಿದ್ದಾನೆ ಎಂದು ಅದನ್ನೇ 'ಮನುಧರ್ಮ ಶಾಸ್ತ್ರ' ವೆಂದು, 'ಮನುಸ್ಮತಿ' ಎಂದು ಪ್ರಚಾರ ಮಾಡಿದರು.

ಮನುಸ್ಮೃತಿಯನ್ನು ತಂದು ನಿಲ್ಲಿಸುವ ಪ್ರಯತ್ನ ನಡೆಯುತ್ತಿದೆ

ಪ್ರಸ್ತುತ ಅಧಿಕಾರದಲ್ಲಿರುವ ಆರೆಸ್ಸೆಸ್–ಬಿಜೆಪಿ ಸರಕಾರ ಈಗಿರುವ ಸಂವಿಧಾನವನ್ನು ಬದಿಗೊತ್ತಿ, ಅದರ ಸ್ಥಾನದಲ್ಲಿ ಈ ಮನುಸ್ಮೃತಿಯನ್ನು ತಂದು ನಿಲ್ಲಿಸಲು ಪ್ರಯತ್ನಿಸುತ್ತಿದೆ. ಈ ಹತ್ತು ವರ್ಷಗಳಲ್ಲಿ ದೇಶವನ್ನು ಸಾವಿರಾರು ವರ್ಷಗಳ ಹಿಂದಕ್ಕೆ ತಳ್ಳಿ, ಸಮಾಜವನ್ನು ಹಿಂದಕ್ಕೆ ಕೊಂಡೊಯ್ಯುವ ಈ ಸರ್ಕಾರದ ಷಡ್ಯಂತ್ರವನ್ನು ಈ ದೇಶದ ಜನರು ಮುರಿಯಬೇಕು. ಜಾತಿಗಳು, ಧರ್ಮಗಳು, ಪ್ರದೇಶಗಳ ಹೆಸರಲ್ಲಿ ನೀಚ ರಾಜಕಾರಣ ಮಾಡುವವರನ್ನು ತಿರಸ್ಕರಿಸುವವರೆಗೂ ಸಮಾಜದ ಸ್ವಾಸ್ಥ್ಯ ಸುಧಾರಿಸುವುದಿಲ್ಲ!

ಕೃಪೆ: ನವತೆಲಂಗಾಣ (ಕನ್ನಡಕ್ಕೆ: ಸಿಚಿ)





ತುಮಕೂರು: ಸಿಪಿಐ(ಎಂ) ರಾಜ್ಯ ಸಮ್ಮೇಳನಕ್ಕೆ ಭರದ ಸಿದ್ದತೆ

ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಮಾರ್ಕ್ಸ್‌ವಾದಿ) ಪಕ್ಷದ 24 ನೇ ಅಖಿಲ ಭಾರತ ಸಮ್ಮೇಳನವು 2025 ರ ಏಪ್ರಿಲ್ 2 ರಿಂದ 6 ರವರೆಗೆ ತಮಿಳುನಾಡಿನ ಮಧುರೈನಲ್ಲಿ ನಡೆಯಲಿದೆ. ಇದರ ಪೂರ್ವಭಾವಿಯಾಗಿ ಪಕ್ಷದ ಕರ್ನಾಟಕ ರಾಜ್ಯ ಸಮ್ಮೇಳನವು ತುಮಕೂರು ನಗರದಲ್ಲಿ ಡಿಸೆಂಬರ್ 29, 30, 31 ಈ ಮೂರು ದಿನಗಳು ನಡೆಯಲಿದೆ. ತುಮಕೂರು ನಗರದಲ್ಲಿ ಇದಕ್ಕಾಗಿ ವ್ಯಾಪಕ ಸಿದ್ದತೆಗಳು ನಡೆಯುತ್ತಿವೆ. ಪಕ್ಷದ ಕಾರ್ಯಕರ್ತರು ಮತ್ತು ಹಿತೈಷಿಗಳು ಸಮ್ಮೇಳನದ ಯಶಸ್ಸಿಗೆ ದುಡಿಯುತ್ತಿದ್ದಾರೆ. ಅವರು ಸಮ್ಮೇಳನದ ಸಂದೇಶಗಳನ್ನು ಜನರಿಗೆ ತಲುಪಿಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ನಗರದ ಹಲವು ಭಾಗಗಳಲ್ಲಿ ಪಕ್ಷದ ಘೋಷಣೆಗಳುಳ್ಳ ಬಣ್ಣ ಬಣ್ಣದ ಗೋಡೆ ಬರಹಗಳು ಜನರನ್ನು ಆಕರ್ಷಿಸುತ್ತಿವೆ. ಪ್ರಮುಖ ವೃತ್ತಗಳಲ್ಲಿ, ಪ್ರಮುಖ ಬೀದಿಗಳೂ ಸೇರಿದಂತೆ ನಗರದೆಲ್ಲಡೆ ಬ್ಯಾನರ್, ಬಂಟಿಂಗ್ಸ್, ಫ್ಲೆಕ್ಸ್ ಮತ್ತು ಕೆಂಬಾವುಟಗಳು ನಗರವನ್ನು ಕೆಂಪಾಗಿಸಿವೆ.



ಸ್ವಾತಂತ್ರ್ಯ ಚೌಕದಿಂದ ಬೃಹತ್ ಮೆರವಣಿಗೆ

"ದೇಶ ಮತ್ತು ರಾಜ್ಯದಲ್ಲಿ ಪ್ರಜಾಪ್ರಭುತ್ವ ಉಳಿಸಿ, ಸೌಹಾರ್ದತೆಯನ್ನು ಬಲಪಡಿಸಿ, ಜನರ ಬದುಕಿನ ಮೇಲೆ ನಡೆಯುತ್ತಿರುವ ದಾಳಿಗಳನ್ನು ಪ್ರತಿರೋಧಿಸಿ" ಎಂಬ ಘೋಷಣೆಗಳೊಂದಿಗೆ ಈ ಸಮ್ಮೇಳನ ನಡೆಯುತ್ತಿದೆ. ಜೊತೆಗೆ, ಸಮಗ್ರ-ಸಮೃದ್ಧ-ಸೌಹಾರ್ದ ಕರ್ನಾಟಕ್ಕಾಗಿ, ಬೆಲೆ ಏರಿಕೆ ನಿಯಂತ್ರಣಕ್ಕಾಗಿ, ದುಡಿಯುವ ಜನರ ಪರವಾದ ನೀತಿಗಳಿಗಾಗಿ, ಉದ್ಯೋಗ ಸೃಷ್ಟಿಗಾಗಿ, ವಸತಿ ಹೀನರ ಹಾಗೂ ಬಗರ್ ಹುಕ್ಕುಂ ಸಾಗುವಳಿದಾರರ ಬೇಡಿಕೆಗಳ ಇತ್ಯರ್ಥಕ್ಕಾಗಿ ಎಂಬ ಘೋಷಣೆಗಳನ್ನೂ ಸಮ್ಮೇಳನವು ಹೊಂದಿದೆ.

ಸಮ್ಮೇಳನದ ಮೊದಲ ದಿನ ಡಿಸೆಂಬರ್ 29 ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸ್ವಾತಂತ್ರ್ಯ ಚೌಕದಿಂದ ಬೃಹತ್ ಮೆರವಣಿಗೆ ಹೊರಡಲಿದೆ. ಇದು ಸ್ವಾಂತಂತ್ರ್ಯ ಹೋರಾಟದಲ್ಲಿ ಮೂವರು ಹುತಾತ್ಮರಾದ ಐತಿಹಾಸಿಕ ಸ್ಥಳವಾಗಿದೆ. ಈ ರ್‍ಯಾಲಿಗೆ ಪಕ್ಷದ ಪೋಲಿಟ್ ಬ್ಯೂರೋ ಸದಸ್ಯರಾದ ಬಿ.ವಿ.ರಾಘವಲು, ಕೇಂದ್ರ ಸಮಿತಿ ಸದಸ್ಯರಾದ ಕೆ.ಎನ್. ಉಮೇಶ್ ಅವರು ಚಾಲನೆ ನೀಡಲಿದ್ದಾರೆ. ರ್‍ಯಾಲಿಯಲ್ಲಿ, ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಬರುವ ಪಕ್ಷದ ಸಹಸ್ರಾರು ಕಾರ್ಯಕರ್ತರು, ರೈತರು, ಕೃಷಿ ಕೂಲಿಕಾರರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿ ಯುವಜನರು ಸೇರಿದಂತೆ 10,000 ಜನರು ಸೇರುವ ನಿರೀಕ್ಷೆ ಇದೆ.

ಟೌನ್ ಹಾಲ್ ಎದುರು ಬಹಿರಂಗ ಸಭೆ

29ರ ಮದ್ಯಾಹ್ನ 12 ಗಂಟೆಗೆ ನಗರದ ಟೌನ್ ಹಾಲ್ ನಲ್ಲಿ ಬಹಿರಂಗ ಸಭೆ ನಡೆಯಲಿದೆ. ರಾಜ್ಯ ಕಾರ್ಯದರ್ಶಿ ಯು. ಬಸವರಾಜು ಅವರ ಅಧ್ಯಕ್ಷತೆಯಲ್ಲಿ ನಡೆಯುವ ಈ ಬಹಿರಂಗ ಸಭೆಯಲ್ಲಿ, ಪಕ್ಷದ ಪೋಲಿಟ್ ಬ್ಯೂರೋ ಸದಸ್ಯರಾದ ಎಂ.ಎ. ಬೇಬಿ (ಕೇರಳದ ಮಾಜಿ ಶಿಕ್ಷಣ ಸಚಿವರು, ಮಾಜಿ ಸಂಸತ್ ಸದಸ್ಯರು), ಎ.ವಿಜಯ ರಾಘುವನ್ ಭಾಷಣ ಮಾಡಲಿದ್ದಾರೆ.

300ಕ್ಕೂ ಹೆಚ್ಚು ಪ್ರತಿನಿಧಿಗಳು

ಮದ್ಯಾಹ್ನದ ನಂತರ, ಸಮ್ಮೇಳನ ನಡೆಯುವ ಸ್ಥಳವಾದ ನಗರದ ಸ್ಟಾರ್ ಕನ್ವೆನ್ಷನ್ ಹಾಲ್ ನಲ್ಲಿ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮ ನಡೆಯಲಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಯ್ಕೆಯಾಗಿರುವ 300ಕ್ಕೂ ಹೆಚ್ಚು ಪ್ರತಿನಿಧಿಗಳು ಮೂರು ದಿನ ನಡೆಯುವ ಸಮ್ಮೇಳನದಲ್ಲಿ ಭಾಗವಹಿಸುತ್ತಾರೆ. ಇವರ ಊಟ ಮತ್ತು ವಸತಿ ವ್ಯವಸ್ಥೆಗಾಗಿ ಸಿದ್ದತೆಗಳು ಬರದಿಂದ ನಡೆಯುತ್ತಿವೆ.

ಮನೆ ಮನೆಗೆ ಪ್ರಚಾರ


ಕಾರ್ಯಕರ್ತರು, ಸ್ಥಳೀಯ ಮುಖಂಡರು ಕರಪತ್ರಗಳನ್ನು ಮನೆ ಮನೆಗೆ ಹಂಚುವ ಮೂಲಕ ಸಮ್ಮೇಳನದ ಸಂದೇಶವನ್ನು ತಲುಪಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಜೊತೆಗೆ ಹುಂಡಿ ಹಿಡಿದ ಕಾರ್ಯಕರ್ತರು ನಗರದ ಮನೆ ಮನೆಗಳಿಂದ, ಬೀದಿ ಬದಿಗಳಲ್ಲಿ ಮತ್ತು ಅಂಗಡಿಗಳಿಂದ ಸಮ್ಮೇಳನದ ವೆಚ್ಚಕ್ಕಾಗಿ ಹಣ ಸಂಗ್ರಹಣೆ ಮಾಡುತ್ತಿದ್ದಾರೆ. ಬತ್ತ ಬೆಳೆಯುವ ರೈತರಿಂದ ಅಕ್ಕಿ, ತೆಂಗು ಬೆಳೆಯುವ ರೈತರಿಂದ ತೆಂಗಿನಕಾಯಿ, ಒಣಮೆಣಸಿನಕಾಯಿ, ಬೆಲ್ಲ, ಮೀನು, ಕಾಫಿ ಪುಡಿ, ಟೀ ಪುಡಿ ಹೀಗೆ... ಅಡುಗೆಗೆ ಬೇಕಾದ ಧವಸ ಧಾನ್ಯಗಳ ಸಂಗ್ರಹಣೆ ಮಾಡುತ್ತಿದ್ದಾರೆ.

ಸಮ್ಮೇಳನದ ಭಾಗವಾಗಿ ಸಾಂಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಅದಕ್ಕಾಗಿ ಕಲಾವಿಧರು, ಹಾಡುಗಾರರ ತಂಡಗಳು ತಯ್ಯಾರಿ ನಡೆಸುತ್ತಿವೆ. ಸಮ್ಮೇಳನದ ಅಂಗವಾಗಿ ಕಳೆದ ಎರಡು ತಿಂಗಳುಗಳಿಂದ ದುಡಿಯುವ ಜನರು, ಮಹಿಳೆಯರು, ರೈತರು, ಕೃಷಿಕೂಲಿಕಾರರು, ಸ್ವತಂತ್ರ ಮಾಧ್ಯಮಗಳು ಎದುರಿಸುತ್ತಿರುವ ಸವಾಲುಗಳು ಸೇರಿದಂತೆ ಹಲವು ವಿಷಯಗಳ ಮೇಲೆ ರಾಜ್ಯದಾದ್ಯಂತ ವಿಚಾರ ಸಂಕಿರಣಗಳು, ಸಾಂಸ್ಕೃತಿಕ ಪ್ರದರ್ಶನಗಳು ನಡೆದಿವೆ ಮತ್ತು ನಡೆಯುತ್ತಿವೆ.

ದುಡಿಯುವ ಜನರ ಒಗ್ಗಟ್ಟು ಗಟ್ಟಿಗೊಳಿಸಲು ಜಾತಿ-ಧರ್ಮದ ಮತಾಂಧ ಶಕ್ತಿಗಳನ್ನು ಒಡೆದು ಮುನ್ನಡೆಯುತ್ತೇವೆ ಎಂಬ ಘೋಷಣೆಯೊಂದಿಗೆ ಸಮ್ಮೇಳನದ ಕಾರ್ಯಕ್ಕೆ ವೇಗ ಸಿಕ್ಕಿದೆ. ತುಮಕೂರು ಜಿಲ್ಲೆಯ ಅಭಿವೃದ್ಧಿಯಲ್ಲಿ ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷದ ಕೊಡುಗೆ ಅನನ್ಯ. ಜಾತಿ ತಾರತಮ್ಯದ ವಿರುದ್ದ ಹೋರಾಟ, ವಸತಿ ಹೀನರ ಹಾಗೂ ಬಗರ್ ಹುಕ್ಕುಂ ಸಾಗುವಳಿದಾರರ ಬೇಡಿಕೆಗಳ ಇತ್ಯರ್ಥಕ್ಕಾಗಿ, ಬೀಡಿ ಕಾರ್ಮಿಕರೂ ಸೇರಿದಂತೆ ಅಸಂಘಟಿತ ಮತ್ತು ಸಂಘಟಿತ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟಗಳು, ಸಾಮಾಜಿಕ ನ್ಯಾಯ ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಪಕ್ಷವು ಗುರುತಿಸಿಕೊಂಡಿದೆ. ಸಾಮಾಜಿಕ ಸಾಮರಸ್ಯ ಮತ್ತು ಆರ್ಥಿಕ ಪ್ರಗತಿಯನ್ನು ಒಟ್ಟಿಗೆ ತರುವ ಪಕ್ಷದ ಪಯಣ ಮುಂದುವರಿದಿದೆ. ಜಿಲ್ಲೆಯ ಸಾಮಾಜಿಕ, ಆರ್ಥಿಕ, ರಾಜಕೀಯ ಅಭಿವೃದ್ಧಿಗೆ ವಿಶಿಷ್ಟ ಕೊಡುಗೆ ನೀಡುತ್ತಿರುವ ಮಾರ್ಕ್ಸ್ ವಾದಿ ಕಮ್ಯುನಿಸ್ಟ್ ಪಕ್ಷದ 24ನೇ ರಾಜ್ಯ ಸಮ್ಮೇಳನ ತುಮಕೂರಿನಲ್ಲಿ ನಡೆಯುತ್ತಿರುವುದು ಗಮನಾರ್ಹ.













‘ಒಂದು ರಾಷ್ಟ್ರ, ಒಂದು ಚುನಾವಣೆ’ –ಪರ–ವಿರೋಧ ಚರ್ಚೆಗಳ ಸುತ್ತ

ಸಿ.ಸಿದ್ದಯ್ಯ

ಬಹಳಷ್ಟು ವಿರೋಧದ ನಡುವೆಯೂ, ದೇಶದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಏಕಕಾಲದಲ್ಲಿ ಚುನಾವಣೆ ನಡೆಸುವುದಕ್ಕಾಗಿ ಬಿಜೆಪಿ ನೇತೃತ್ವದ ಒಕ್ಕೂಟ ಸರ್ಕಾರವು ಭಾರತದ ಸಂವಿಧಾನಕ್ಕೆ ತಿದ್ದುಪಡಿ ತರುವ, ‘ಸಂವಿಧಾನ (129ನೇ ತಿದ್ದುಪಡಿ) ಮಸೂದೆ–2024’ ಅನ್ನು ಲೊಕಸಭೆಯಲ್ಲಿ ಮಂಡಿಸಿದೆ. ಈ ಮಸೂದೆಯ ಮೂಲಕ ಕೇಂದ್ರ ಸರ್ಕಾರವು ಸಂವಿಧಾನಕ್ಕೆ ತಿದ್ದುಪಡಿ ಮಾಡಲು ಮುಂದಡಿ ಇಟ್ಟಿದೆ. ‘ಒಂದು ರಾಷ್ಟ್ರ, ಒಂದು ಚುನಾವಣೆ’ ಪರ ಮತ್ತು ವಿರೋಧ ಚರ್ಚೆಗಳು ಎಲ್ಲೆಡೆ ನಡೆಯುತ್ತಿವೆ. ಈ ಚರ್ಚೆಯಲ್ಲಿನ ಕೆಲವೊಂದು ವಾದಗಳ ಸತ್ಯ ಅಸತ್ಯಗಳ ಕುರಿತು ವಿಮರ್ಶಿಸುವ ಸಣ್ಣದೊಂದು ಪ್ರಯತ್ನ ಇಲ್ಲಿದೆ.

ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಲೋಕಸಭೆ ಮತ್ತು ವಿಧಾನಸಭೆ ಚುನಾವಣೆಗಳನ್ನು ಏಕಕಾಲದಲ್ಲಿ ನಡೆಸಲು 129ನೇ ಸಾಂವಿಧಾನಿಕ ತಿದ್ದುಪಡಿ ಮಸೂದೆಯನ್ನು ಡಿಸೆಂಬರ್ 17ರಂದು ಲೋಕಸಭೆಯಲ್ಲಿ ಮಂಡಿಸಿದರು. ಈ ವಿಷಯದ ಬಗ್ಗೆ ಮತ ಕೇಳಿದಾಗ 269 ಸದಸ್ಯರು ಸಂವಿಧಾನ ತಿದ್ದುಪಡಿ ಮಸೂದೆ ಮಂಡನೆಯನ್ನು ಬೆಂಬಲಿಸಿದರೆ, 198 ಸದಸ್ಯರು ವಿರೋಧಿಸಿದರು. ಮಸೂದೆ ಅಂಗೀಕಾರವಾಗಲು ಮೂರನೇ ಎರಡರಷ್ಟು ಬಹುಮತದ ಅಗತ್ಯವಿದೆ. ಮಂಡನೆಯ ಹಂತದಲ್ಲಿಯೇ ತೀವ್ರ ವಿರೋಧ ವ್ಯಕ್ತವಾದ ಕಾರಣ, ಮಸೂದೆಗಳನ್ನು ಜಂಟಿ ಸಂಸದೀಯ ಸಮಿತಿಗೆ ಕಳುಹಿಸಬೇಕಾಯಿತು.

ವಿಭಿನ್ನ ಸಂಸ್ಕೃತಿಗಳು ಮತ್ತು ಬಹುತ್ವವನ್ನು ಹೊಂದಿರುವ ಈ ದೇಶದಲ್ಲಿ ಒಂದೇ ಧರ್ಮ, ಒಂದೇ ರೀತಿಯ ತೆರಿಗೆ, ಒಂದೇ ರೀತಿಯ ಆಹಾರ ಮತ್ತು ಒಂದೇ ಭಾಷೆ (ಹಿಂದಿ) ಇರಬೇಕೆನ್ನುವ ಮೂಲಕ ಬಿಜೆಪಿಯು ಜನರ ಸಂಸ್ಕೃತಿಯ ಮೇಲೆ ದಾಳಿ ಮಾಡುತ್ತಿದೆ. ಈಗ ಪ್ರಾಯೋಗಿಕವಲ್ಲದ, ಅಗತ್ಯವಿಲ್ಲದ ಒಂದು ರಾಷ್ಟ್ರ, ಒಂದು ಚುನಾವಣೆ ವ್ಯವಸ್ಥೆ ತರಲು ಒಕ್ಕೂಟ ಸರ್ಕಾರ ಮುಂದಾಗಿದೆ.

ವಿರೋಧಿಸುವವರ ವಾದಗಳೇನು?

‘ಒಂದು ದೇಶ, ಒಂದು ಚುನಾವಣೆ’ ಪರಿಕಲ್ಪನೆಯು ಫೆಡರಲಿಸಂ ಸೇರಿದಂತೆ ಸಂವಿಧಾನದ ಮೂಲ ರಚನೆಗೆ ವಿರುದ್ಧವಾಗಿದೆ. ಇದು ’ಒಂದು ನಾಯಕ, ಒಂದು ದೇಶ, ಒಂದು ಸಿದ್ಧಾಂತ’ದ ವಿಸ್ತರಣೆಯಾಗಿದೆ. ಮಸೂದೆಯ ನಿಬಂಧನೆಗಳು ಶಾಸಕಾಂಗದ ಅಧಿಕಾರ ವ್ಯಾಪ್ತಿಯನ್ನು ಉಲ್ಲಂಘಿಸುತ್ತಿವೆ. ಲೋಕಸಭೆಯ ಅಧಿಕಾರಾವಧಿಯಿಂದ ಶಾಸನ ಸಭೆಗಳ ಅವಧಿಯನ್ನು ನಿರ್ಧರಿಸಲಾಗುವುದಿಲ್ಲ, ಶಾಸಕಾಂಗಗಳು ಪ್ರತ್ಯೇಕವಾಗಿರುತ್ತವೆ. ಈ ಮಸೂದೆಯೊಂದಿಗೆ ಹೆಚ್ಚಿನ ಕೇಂದ್ರೀಕರಣವನ್ನು ಜಾರಿಗೆ ತರಲಾಗುತ್ತದೆ. ಚುನಾವಣೆಗಳನ್ನು ನಡೆಸುವ ಅಧಿಕಾರ ಮತ್ತು ವಿಧಾನಸಭೆಗಳ ಅವಧಿಯನ್ನು ಚುನಾವಣಾ ಆಯೋಗಕ್ಕೆ ಬಿಡಲಾಗಿದೆ. ಭಾರತ ಒಂದು ಗಣರಾಜ್ಯ. ರಾಜ್ಯ, ಗ್ರಾಮ ಪಂಚಾಯಿತಿ, ಮಂಡಲ ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ, ಪುರಸಭೆ ಇವೆಲ್ಲವೂ ರಾಜ್ಯ ಸರಕಾರಕ್ಕೆ ಸಂಬಂಧಿಸಿದ್ದು. ಆದರೆ ಈ ಮಸೂದೆಯಿಂದ ಎಲ್ಲವನ್ನು ಕೊಂದು ಹಾಕಲಾಗುತ್ತಿದೆ. ಇವು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಬರಲಿವೆ. ಪಂಚಾಯತ್ ಮತ್ತು ಸ್ಥಳೀಯ ಸಂಸ್ಥೆಗಳ ಮೂಲ ತತ್ವವಾದ ವಿಕೇಂದ್ರೀಕರಣದ ಮನೋಭಾವಕ್ಕೆ ಸಂಪೂರ್ಣ ವಿರುದ್ಧವಾಗಿದೆ. ನಿರ್ಣಾಯಕ ’ಸ್ಥಳೀಯತೆ’ ಕಣ್ಮರೆಯಾಗುತ್ತದೆ. ದೇಶದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ಭಾಷೆ ಮತ್ತು ಅಧಿಕಾರದ ವಿಕೇಂದ್ರೀಕರಣವನ್ನು ಹೊಂದಿದೆ. ಈ ಮಸೂದೆಯಿಂದ ಬಹು ಸಂಸ್ಕೃತಿ, ಬಹು ಭಾಷೆಗಳನ್ನು ಹೊಂದಿರುವ ವೈವಧ್ಯಮಯ ಭಾರತದ ಹಿತಕ್ಕೆ ದಕ್ಕೆಯಾಗುತ್ತದೆ. ರಾಜ್ಯಗಳ ಮೇಲಿನ ಹಕ್ಕುಗಳನ್ನು ಕೇಂದ್ರವು ಕಸಿದುಕೊಳ್ಳುತ್ತದೆ. ರಾಷ್ಟ್ರೀಯ ಪಕ್ಷಗಳ ಏಕಾಧಿಪತ್ಯಕ್ಕೆ ಕಾರಣವಾಗುತ್ತದೆ. ಇದು ಪ್ರಾದೇಶಿಕ ಪಕ್ಷಗಳ ನಾಶಕ್ಕೆ ಕಾರಣವಾಗುತ್ತದೆ.

ಮುಂದಿನ ಐದು ವರ್ಷಗಳ ಕಾಲ ಸರ್ಕಾರಗಳ ಮೈತ್ರಿ ಮುಂದುವರಿಯುತ್ತದೆ ಎಂಬ ಭರವಸೆ ಇರುವುದಿಲ್ಲ. ಮಧ್ಯಂತರದಲ್ಲಿ ವಿಧಾನಸಭೆ ವಿಸರ್ಜನೆಗೊಂಡರೆ, ಅಥವಾ ಮುಂದಿನ ಲೋಕಸಭಾ ಚುನಾವಣೆಗೂ ಮುಂಚಿತವಾಗಿ 2 ವರ್ಷಗಳಿಗೂ ಕಡಿಮೆ ಅವಧಿಯಲ್ಲಿ ವಿಧಾನಸಭೆಯ ಅವಧಿ ಮುಗಿದರೆ, ಮುಂದಿನ ಸಂಸತ್ತಿನ ಸಾರ್ವತ್ರಿಕ ಚುನಾವಣೆಯವರೆಗೆ ಆ ರಾಜ್ಯದಲ್ಲಿ ಚುನಾವಣೆ ನಡೆಯುವುದಿಲ್ಲ. ಅಲ್ಲಿ ಹೊಸ ಸರ್ಕಾರವನ್ನು ತರುವ ಸಾಧ್ಯತೆ ಕಡಿಮೆ. ಅವಧಿಗೂ ಮುನ್ನ ಸರ್ಕಾರ ಉರುಳಿದರೆ, ಆ ನೆಪದಲ್ಲಿ ಕೃತಕವಾಗಿ ಅಧಿಕಾರ ವಿಸ್ತರಿಸುವುದೆಂದರೆ ಜನರ ಒಪ್ಪಿಗೆಯಿಲ್ಲದ ಆಡಳಿತ ಹೇರುವುದು ಎಂದರ್ಥ.. . . ಈ ಮಸೂದೆಯನ್ನು ವಿರೋಧಿಸುವವರು ಇಂತಹ ಹಲವು ಕಾರಣಗಳನ್ನು ನೀಡುತ್ತಿದ್ದಾರೆ.

ಮಸೂದೆ ಪರ ವಾದಗಳೇನು?

1) 1952ರಿಂದ 1962ರ ವರೆಗೂ ಏಕಕಾಲದಲ್ಲಿ ಚುನಾವಣೆ ಇತ್ತು. ಈಗ ವಿರೋಧ ಏಕೆ?:

ನಿಜ. ಸ್ವಾತಂತ್ರ್ಯ ಬಂದ ಆರಂಭಿಕ ದಿನಗಳಲ್ಲಿ ಅಂದರೆ 1952, 1957, 1962 ಮತ್ತು 1967 ರಲ್ಲಿ ಏಕಕಾಲದಲ್ಲಿ ಲೋಕಸಭೆ ಮತ್ತು ವಿಧಾನಸಭೆಗಳಿಗೆ ಚುನಾವಣೆಗಳು ನಡೆದಿವೆ. ಅಂದು ಕೇಂದ್ರ ಮತ್ತು ರಾಜ್ಯಗಳಲ್ಲಿ ಕಾಂಗ್ರೆಸ್ ಪಕ್ಷದ ಪಾರಮ್ಯ ಮುಂದುವರಿದಿತ್ತು. 31 ಜುಲೈ 1959ರಲ್ಲಿ ಕೇರಳದಲ್ಲಿ ಮೊದಲ ಚುನಾಯಿತ ಕಮ್ಯುನಿಸ್ಟ್ ಸರ್ಕಾರವನ್ನು ಸಂವಿಧಾನದ 356ನೇ ವಿಧಿಯ ದುರುಪಯೋಗದ ಮೂಲಕ ಅಂದಿನ ನೆಹರೂ ನೇತೃತ್ವದ ಕಾಂಗ್ರೆಸ್ ಸರ್ಕಾರ ವಜಾಗೊಳಿಸಿತು. ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾ (ಸಿಪಿಐ) 60 ಕ್ಷೇತ್ರಗಳಲ್ಲಿ ಗೆದ್ದಿತ್ತು ಮತ್ತು ಐದು ಸ್ವತಂತ್ರ ಸದಸ್ಯರ ಬೆಂಬಲ ಸೇರಿದಂತೆ 114 ಶಾಸಕರ ಪೈಕಿ 65 ಶಾಸಕರು ಸರ್ಕಾರವನ್ನು ಬೆಂಬಲಿಸಿದ್ದರು. ಆದರೂ ಬಹುಮತದ ಸರ್ಕಾರವನ್ನು ವಜಾಗೊಳಿಸಿ, ಅಲ್ಲಿ ಮಧ್ಯಂತರ ಚುನಾವಣೆ ನಡೆಸಲಾಯಿತು. ನಂತರದಲ್ಲಿ ವಿರೋಧ ಪಕ್ಷಗಳ ಸರ್ಕಾರಗಳನ್ನು ಅನಿಯಂತ್ರಿತವಾಗಿ ವಿಸರ್ಜನೆ ಮಾಡಿದ್ದರಿಂದ ಎರಡರ ನಡುವೆ ಅಂತರ ಉಂಟಾಗಿತ್ತು.

1967ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಎಂಟು ರಾಜ್ಯಗಳ ವಿಧನಸಭಾ ಚುನಾವಣೆಯಲ್ಲಿ ಸೋಲನುಭವಿಸಿತ್ತು. ನಂತರ ಹಲವು ರಾಜ್ಯಗಳಲ್ಲಿ ಪ್ರಾದೇಶಿಕ ಪಕ್ಷಗಳು ಅಧಿಕಾರಕ್ಕೆ ಬಂದವು. 1989 ರಿಂದ 2014 ರವರೆಗೆ ಕೇಂದ್ರದಲ್ಲಿ ಮತ್ತು ರಾಜ್ಯಗಳಲ್ಲಿ ಇಂದಿಗೂ ಸಹಾ, ಪ್ರಾದೇಶಿಕ ಪಕ್ಷಗಳು ಮತ್ತು ಪ್ರಾದೇಶಿಕ ಪಕ್ಷಗಳನ್ನೊಳಗೊಂಡ ಸಮ್ಮಿಶ್ರ ಸರ್ಕಾರಗಳು ನಡೆಯುತ್ತಿವೆ. ದೇಶದ ಭಿನ್ನ ಸಂಸ್ಕೃತಿಗಳು ಮತ್ತು ಐತಿಹಾಸಿಕ ಸನ್ನಿವೇಶಗಳಿಂದಾಗಿ ಬಹು ಪಕ್ಷಗಳು ಉಳಿದುಕೊಂಡಿವೆ. ಹೀಗಿರುವಾಗ, ಏಕಕಾಲಕ್ಕೆ ಚುನಾವಣೆ ಮೂಲಕ ಪ್ರಾದೇಶಿಕ ಪಕ್ಷಗಳನ್ನು ನಾಶಮಾಡಿ, ದೊಡ್ಡ ರಾಷ್ಟ್ರೀಯ ಪಕ್ಷವೊಂದರ ಏಕಸ್ವಾಮ್ಯ ಆಡಳಿತ ತರುವ ಹುನ್ನಾರ ಇದರಲ್ಲಿ ಅಡಗಿದೆ ಎಂದಾಗುತ್ತದೆಯಲ್ಲವೇ?

2) ಪದೇ ಪದೇ ನಡೆಯುವ ಚುನಾವಣೆ ಅಭಿವೃದ್ದಿಗೆ ಅಡ್ಡಿ:

ಪದೇ ಪದೇ ಚುನಾವಣೆ ನಡೆಯುವುದರಿಂದ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯುಂಟಾಗುತ್ತಿದೆ ಎಂಬುದು ಇವರ ವಾದ. ಇದಕ್ಕೆ, ಚುನಾವಣೆಗಳ ಸಮಯದಲ್ಲಿ ನೀತಿಸಂಹಿತೆ ಜಾರಿಯನ್ನು ಉಲ್ಲೇಖಿಸುತ್ತಾರೆ. ಲೋಕಸಭಾ ಚುನಾವಣೆ ಸಂದರ್ಭದಲ್ಲಿ, ಹೆಚ್ಚೆಂದರೆ ಮೂರ್ನಾಲ್ಕು ತಿಂಗಳು ಇಡೀ ದೇಶಕ್ಕೆ ಚುನಾವಣಾ ನೀತಿ ಸಂಹಿತೆ ಅನ್ವಹಿಸುತ್ತದೆ. ಉಳಿದ ನಾಲ್ಕೂವರೆ ವರ್ಷಗಳ ಕಾಲ ಇಡೀ ದೇಶಕ್ಕೆ ಅನ್ವಹಿಸುವಂತೆ ನೀತಿಸಂಹಿತೆ ಇರುವುದಿಲ್ಲ. ಆ ಸಮಯದಲ್ಲಿ ಇಡೀ ದೇಶಕ್ಕೆ ಅನ್ವಹಿಸುವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬಹುದಲ್ಲವೇ?

ಅದೇ ರೀತಿ, ವಿಧಾನಸಭಾ ಚುನಾವಣೆಗಳು ನಡೆಯುವ ರಾಜ್ಯಗಳಿಗೆ ಸೀಮಿತವಾಗಿ ಒಂದೆರಡು ತಿಂಗಳು ಮಾತ್ರ ನೀತಿಸಂಹಿತೆ ಅನ್ವಹಿಸುತ್ತದೆ. ಇದು ಮತ್ತು ಲೋಕಸಭೆ ಚುನಾವಣೆ ಸೇರಿದಂತೆ ರಾಜ್ಯಗಳಿಗೆ ಐದು ವರ್ಷಗಳಲ್ಲಿ ಐದಾರು ತಿಂಗಳು ಮಾತ್ರ ನೀತಿ ಸಂಹಿತೆಯು ಅಭಿವೃದ್ಧಿ ಯೋಜನೆಗಳ ಘೋಷಣೆಗೆ ಅಡ್ಡಿಬರುತ್ತದೆಯಷ್ಟೆ. ನಿಜವಾಗಿಯೂ ಜನಪರವಾದ ಅಭಿವೃದ್ಧಿ ಯೋಜನೆಗಳನ್ನು, ಜನಪರ ನೀತಿಗಳನ್ನು ಜಾರಿಗೊಳಿಸುವ ಬದ್ಧತೆ ಸರ್ಕಾರಗಳಿಗೆ ಇದ್ದರೆ, ನೀತಿಸಂಹಿತೆ ಜಾರಿಯಲ್ಲಿಲ್ಲದ ಸಮಯದಲ್ಲಿ ಆ ಕೆಲಸ ಮಾಡಬಹುದಲ್ಲವೇ? ಚುನಾವಣಾ ಘೋಷಣೆ ಇನ್ನು ಕೆಲವೇ ದಿನಗಳು ಇವೆ ಎನ್ನುವಾಗಲೂ, ಮತದಾರರನ್ನು ಸೆಳೆಯಲು ಜನಪರ ನೀತಿಗಳ ಘೋಷಣೆ ಮಾಡಿದ ಸಾಕಷ್ಟು ಉದಾಹರಣೆಗಳಿವೆ. ಇಂತಹ ಘೋಷಣೆಗಳನ್ನು ಮಾಡಲೆಂದೇ, ಚುನಾವಣಾ ದಿನಾಂಕ ಪ್ರಕಟಿಸುವುದನ್ನು ತಡಮಾಡುವಂತೆ ಆಳುವ ಸರ್ಕಾರವು ಚುನಾವಣಾ ಆಯುಕ್ತರ ಮೇಲೆ ಪ್ರಭಾವ ಬೀರಿರುವ ಉದಾಹರಣೆಗಳೂ ಸಾಕಷ್ಟಿವೆ.

ಹಾಗಾದರೆ, ಯಾರ ಅಭಿವೃದ್ಧಿಗೆ ಅಡ್ಡಿ ಎಂಬ ಪ್ರಶ್ನೆ ಮೂಡುತ್ತದೆ. ಪದೇ ಪದೇ ನಡೆಯುವ ಚುನಾವಣೆಗಳು ಜನಪರ ಯೋಜನೆಗಳ ಘೋಷಣೆಗೋ, ಅಭಿವೃದ್ಧಿ ಯೋಜನೆಗಳ ಜಾರಿಗೋ, ದೇಶದ ಅಭಿವೃದ್ಧಿಗೋ ಅಡ್ಡಿಯಾಗಿಲ್ಲ. ಬದಲಿಗೆ, ಜನತೆಗೆ ಸಂಕಷ್ಟಗಳನ್ನು ತರುವ ಜನವಿರೋಧಿ, ದೇಶವಿರೋಧಿ, ರೈತ ಮತ್ತು ಕಾರ್ಮಿಕ ವಿರೋಧಿಯಾದ ನವ ಉದಾರವಾದಿ ನೀತಿಗಳನ್ನು, ಹಿಂದುತ್ವವಾದಿ ನೀತಿಗಳನ್ನು ಜಾರಿಗೆ ತರಲು ಇಂತಹ ಚುನಾವಣೆಗಳು ಆಳುವವರಿಗೆ ಅಡ್ಡಿಯಾಗುತ್ತಿವೆ. ಒಂದು ವೇಳೆ ಏಕಕಾಲಕ್ಕೆ ಚುನಾವಣೆ ಪದ್ಧತಿ ಬಂದರೆ, ಸರ್ಕಾರ ಎಷ್ಟೇ ಜನವಿರೋಧಿ ನೀತಿಗಳನ್ನು ಜಾರಿಗೆ ತಂದರೂ, ಪ್ರಜಾಪ್ರಭುತ್ವ ವಿರೋಧಿ, ಸಂವಿಧಾನ ವಿರೋಧಿ ನೀತಿಗಳನ್ನು ಜಾರಿಗೆ ತಂದರೂ, ಇದರಿಂದಾಗಿ ನೊಂದ ಜನರು ಆಳುವವರ ವಿರುದ್ಧ ತಿರುಗಿ ಬಿದ್ದರೂ, ಐದು ವರ್ಷಗಳವರೆಗೆ ಸರ್ಕಾರವನ್ನು ಅಲುಗಾಡಿಸಲಾಗದ ಪರಿಸ್ಥಿತಿ ಬರುತ್ತದೆ.

ಉದಾಹರಣೆಗೆ: ಒಕ್ಕೂಟ ಸರ್ಕಾರ ಮೂರು ಕೃಷಿ ಕಾಯ್ದೆಗಳನ್ನು ತಂದಿತ್ತು. ಇದನ್ನು ವಿರೋಧಿಸಿ, ದೆಹಲಿ ಸೇರಿದಂತೆ ದೇಶದಲ್ಲೆಡೆ ನಡೆದ ರೈತರ ಹೋರಾಟಗಳಿಗೆ ಮಣಿದು ಕೇಂದ್ರ ಸರ್ಕಾರ ಆ ಮಸೂದೆಗಳನ್ನು ಹಿಂಪಡೆಯಿತು (ಇವುಗಳನ್ನು ಹಿಂಬಾಗಿಲಿನಿಂದ ಜಾರಿಗೆ ತರುತ್ತಿದೆ ಎಂಬುದು ಬೇರೆ ವಿಷಯ). ಈ ರೀತಿ ಮಸೂದೆಗಳನ್ನು ಹಿಂಪಡೆಯಲು ಪ್ರಮುಖ ಕಾರಣ ಮುಂದೆ ಬರಲಿದ್ದ ಕೆಲವು ರಾಜ್ಯಗಳ ಚುನಾವಣೆಗಳು. ಈ ಚುನಾವಣೆಗಳೇ ಇರದಿದ್ದರೆ ಅಂದರೆ, ಐದು ವರ್ಷಗಳ ಕಾಲ ದೇಶದಲ್ಲಿ ಲೋಕಸಭೆ ಅಥವಾ ವಿಧಾನಸಭೆ ಚುನಾವಣೆಗಳೇ ಇಲ್ಲದಿದ್ದರೆ, ರೈತರ ಹೋರಾಟಕ್ಕೆ ಒಕ್ಕೂಟ ಸರ್ಕಾರ ಮಣಿಯದೆ, ರೈತ ವಿರೋಧಿಯಾದ ಆ ಮೂರು ಕೃಷಿ ಕಾಯ್ದೆಗಳನ್ನು ಖಂಡಿತವಾಗಿಯೂ

ಪುಟ 15 ಕ್ಕೆ



ಭಾರತದ ಸಂವಿಧಾನ: 75 ವರ್ಷಗಳು

ನಾವು ಸಂವಿಧಾನವನ್ನು ಸಂರಕ್ಷಿಸುತ್ತೇವೆಯೋ, ಕಳೆದುಕೊಳ್ಳುತ್ತೇವೆಯೊ?

-ಸಂಸತ್ತಿನಲ್ಲಿ ಸಿಪಿಐ(ಎಂ)ನ ಆರ್.ಸಚ್ಚಿದಾನಂದಂ ಭಾಷಣ

ಡಿಸೆಂಬರ್ 14, 2024: ಭಾರತ ಗಣರಾಜ್ಯದ 75ನೇ ವಾರ್ಷಿಕೋತ್ಸವ ಆಚರಣೆಯ ಪ್ರಯುಕ್ತ ಸಂಸತ್ತಿನಲ್ಲಿ ನಡೆದ ವಿಶೇಷ ಅಧಿವೇಶನದಲ್ಲಿ, ದಿಂಡಿಗಲ್‌ನ ಸಿಪಿಐ(ಎಂ) ಸಂಸದ ಆರ್.ಸಚ್ಚಿದಾನಂದಂ ಅವರು, ನಮ್ಮ ಸಂವಿಧಾನದ ಐತಿಹಾಸಿಕ ಮಹತ್ವ ಮತ್ತು ಅದು ಎದುರಿಸುತ್ತಿರುವ ಸವಾಲುಗಳನ್ನು ಪ್ರಸ್ತಾಪಿಸಿದರು. ಅವರ ಭಾಷಣ ಹೀಗಿದೆ:

"ಭಾರತ ಗಣರಾಜ್ಯದ 75ನೇ ವಾರ್ಷಿಕೋತ್ಸವವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿ, 26 ಜನವರಿ 1950ರಂದು ಜಾರಿಗೆ ಬಂದ ಸಂವಿಧಾನವೇ ಭಾರತವನ್ನು ಒಂದು ಗಣರಾಜ್ಯವನ್ನಾಗಿ ಮಾಡಿತು ಎಂಬುದನ್ನು ನೆನಪಿಸಿಕೊಳ್ಳುವುದು ಬಹಳ ಮುಖ್ಯ. ನಮ್ಮ ಈ ಸಂವಿಧಾನವು ಪ್ರಸ್ತುತ ತನ್ನ ಇತಿಹಾಸದಲ್ಲಿ ದೊಡ್ಡ ಬೆದರಿಕೆಯನ್ನು ಎದುರಿಸುತ್ತಿದೆ ಎಂಬುದು ಸತ್ಯ.

ಸಂವಿಧಾನದ ವಿಶಿಷ್ಟತೆ

ಭಾರತವು ಜಾತ್ಯತೀತ ಸಂಸದೀಯ ಪ್ರಜಾಪ್ರಭುತ್ವ ರಾಷ್ಟ್ರವಾಗಲು ಸಂವಿಧಾನವೇ ಮೂಲ ಕಾರಣ. ಜಾತಿ, ಧರ್ಮ, ಪಂಥ ಅಥವಾ ಲಿಂಗವನ್ನು ಲೆಕ್ಕಿಸದೆ ಎಲ್ಲಾ ನಾಗರಿಕರಿಗೆ ಸಮಾನ ಹಕ್ಕುಗಳನ್ನು ಮತ್ತು ನಾಗರಿಕರ ಮೂಲಭೂತ ಹಕ್ಕುಗಳನ್ನು ಖಾತರಿಪಡಿಸಿರುವುದು ಈ ನಮ್ಮ ಸಂವಿಧಾನವೇ. ಅಲ್ಪಸಂಖ್ಯಾತರು, ದಲಿತರು ಮತ್ತು ಬುಡಕಟ್ಟು ಜನರಂತಹ ಸಾಮಾಜಿಕವಾಗಿ ತುಳಿತಕ್ಕೊಳಗಾದ ಸಮೂಹಗಳ ಹಕ್ಕುಗಳನ್ನು ಇದು ಅಂಗೀಕರಿಸಿದೆ.



ಪ್ರಸ್ತುತ ಬೆದರಿಕೆಗಳು

ಸಂವಿಧಾನವನ್ನು ಉಳಿಸಿ, ಅದರ ಸಂಸ್ಥೆಗಳನ್ನು ನಡೆಸುವ ಜವಾಬ್ದಾರಿಯನ್ನು ಹೊಂದಿರುವ ಜನರಿಂದಲೇ ಸಂವಿಧಾನದ ಮೂಲಭೂತ ತತ್ವಗಳಿಗೆ ಬೆದರಿಕೆಗಳು ಬಂದಿದೆ. ಆಡಳಿತಾರೂಢ ಬಿಜೆಪಿ-ಆರ್‌ಎಸ್‌ಎಸ್ ಮೈತ್ರಿಯು, ಸಂವಿಧಾನದ ಮೂಲಭೂತ ಮೌಲ್ಯಗಳಿಗೆ ವಿರುದ್ಧವಾದ ಹಿಂದುತ್ವ ಸಿದ್ಧಾಂತಕ್ಕೆ ಬದ್ಧವಾಗಿದೆ. ಆರ್‌ಎಸ್‌ಎಸ್ ಮತ್ತು ಅದರ ಸಿದ್ಧಾಂತಿಗಳು ಸಂವಿಧಾನದ ಬಗ್ಗೆ ಇರುವ ತಮ್ಮ ದ್ವೇಷವನ್ನು ಎಂದಿಗೂ ಮರೆಮಾಡಲಿಲ್ಲ.

ಆರ್‌ಎಸ್‌ಎಸ್‌ನ ಸ್ಥಾನ

ಆರ್‌ಎಸ್‌ಎಸ್‌ನ ಎರಡನೇ ಸರಸಂಘಚಾಲಕ್ ಎಂ.ಎಸ್.ಗೋಳ್ವಾಲ್ಕರ್ ಅವರ ಪ್ರಕಾರ, ಸಂವಿಧಾನವು "ಪಾಶ್ಚಿಮಾತ್ಯ ದೇಶಗಳ ವಿವಿಧ ಸಂವಿಧಾನಗಳ ವಿವಿಧ ಲೇಖನಗಳ ಬಹುಮುಖಿ ಸಂಕಲನ" ವಾಗಿದೆ. ಆರ್‌ಎಸ್‌ಎಸ್ ಮುಖಂಡ ಹಾಗೂ ಜನಸಂಘದ ಮಾಜಿ ಅಧ್ಯಕ್ಷ ದೀನದಯಾಳ್ ಉಪಾಧ್ಯಾಯ ಕೂಡ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭಾರತದ ಸಂವಿಧಾನವು ಇತರ ದೇಶಗಳನ್ನು ಅನುಕರಿಸಿದೆ ಎಂದೂ, ಭಾರತದ ಜೀವನಶೈಲಿ ಮತ್ತು ಆದರ್ಶಗಳಿಂದ ದೂರವಿದೆ ಎಂದೂ ಅವರು ಹೇಳಿದರು. ಅದಕ್ಕೆ ಬದಲಾಗಿ, "ಮೊದಲ ಶಾಸನಕಾರ" ಮನುವಿನ ಮನುಸ್ಮೃತಿ ಸೇರಿದಂತೆ ಭಾರತದ ಪ್ರಾಚೀನ ಸಂಸ್ಕೃತಿ ಮತ್ತು ಗುಣಲಕ್ಷಣಗಳಿಗೆ ಸೂಕ್ತವಾದ ಸಂವಿಧಾನವನ್ನು ಅವರು ಬಯಸಿದ್ದರು.

ಸಂವಿಧಾನದ ಮೇಲಿನ ದಾಳಿಗಳು

ಮೋದಿ ಸರಕಾರ ಅಧಿಕಾರ ವಹಿಸಿಕೊಂಡ ನಂತರ ಸಚಿವರು, ವಿವಿಧ ಸರ್ಕಾರಿ ಸಂಸ್ಥೆಗಳಲ್ಲಿ ಪ್ರಮುಖ ಸ್ಥಾನದಲ್ಲಿರುವವರೂ ಸಂವಿಧಾನ ಬದಲಿಸುವ ಮಾತುಗಳನ್ನಾಡುತ್ತಿದ್ದಾರೆ. ಸಂವಿಧಾನದ ವಿವಿಧ ಅಂಶಗಳು ದಾಳಿಗೆ ಒಳಗಾಗಿವೆ. ಸಂವಿಧಾನವು ವೈಜ್ಞಾನಿಕ ಮನೋಭಾವವನ್ನು ಒತ್ತಿಹೇಳುತ್ತದೆ- ಇದು ಹಿಂದೂ ಭಕ್ತರಿಗೆ ಜುಗುಪ್ಸೆ ತಂದಿದೆ. ವೈಜ್ಞಾನಿಕ ವಿರೋಧಿ ದೃಷ್ಟಿಕೋನಗಳು, ತರ್ಕವಿರೋಧಿ ವಿಚಾರಗಳನ್ನು ಹರಡುವುದು ಕೂಡ ಈ ಆಡಳಿತದ ವಿಶಿಷ್ಟ ಲಕ್ಷಣವಾಗಿದೆ.

ಅಂಬೇಡ್ಕರ್ ಅವರ ಎಚ್ಚರಿಕೆ

ಈ ಸಂದರ್ಭದಲ್ಲಿ, ಡಾ. ಬಿ.ಆರ್.ಅಂಬೇಡ್ಕರ್ ಅವರು ನವೆಂಬರ್ 25, 1949ರಂದು ಸಂವಿಧಾನ ರಚನಾ ಸಭೆಯನ್ನುದ್ದೇಶಿಸಿ ಮಾಡಿದ ಕೊನೆಯ ಭಾಷಣದಲ್ಲಿ ನೀಡಿದ ಎಚ್ಚರಿಕೆಯನ್ನು ನೆನಪಿಸಿಕೊಳ್ಳುವುದು ಸೂಕ್ತವಾಗಿದೆ: "ನಾವು ಬರೆದ ಸಂವಿಧಾನ ಎಷ್ಟೇ ಒಳ್ಳೆಯದಾಗಿದ್ದರೂ, ಅದನ್ನು ಅನುಷ್ಠಾನಕ್ಕೆ ತರುವವರು ಕೆಟ್ಟವರಾಗಿದ್ದರೆ, ಸಂವಿಧಾನವೂ ಕೆಟ್ಟದಾಗಿ ಪರಿಣಮಿಸುತ್ತದೆ ಎಂದು ನಾನು ಭಾವಿಸುತ್ತೇನೆ".... ಈಗ ಸಂವಿಧಾನವನ್ನು ಅನುಷ್ಠಾನ ಮಾಡುವವರು ನಿಜವಾಗಿಯೂ ಕೆಟ್ಟ ಜನರು.

ಸಂವಿಧಾನವನ್ನು ಬದಲಾಯಿಸುವ ಪ್ರಯತ್ನ

ಈಗ ಸಂವಿಧಾನವನ್ನು ಅನುಷ್ಠಾನ ಮಾಡುವವರೇ ಒಳಗೊಳಗೇ ಹಾಳುಗೆಡವುತ್ತಿದ್ದಾರೆ. ಸಂವಿಧಾನದ ಅಡಿಯಲ್ಲಿರುವ ಪ್ರತಿಯೊಂದು ಸಂಸ್ಥೆಗಳು (ಅದು ನ್ಯಾಯಾಂಗ, ನಾಗರಿಕ ಸೇವೆಗಳು ಅಥವಾ ಸಶಸ್ತ್ರ ಪಡೆಗಳು) ಒಳಗಿನಿಂದ ನಾಶವಾಗುತ್ತಿವೆ ಮತ್ತು ಅವುಗಳ ಸಮಗ್ರತೆಯನ್ನು ರಾಜಿ ಮಾಡಿಕೊಳ್ಳಲಾಗುತ್ತಿದೆ. ರಾಜ್ಯಪಾಲರಂತಹ ಸಾಂವಿಧಾನಿಕ ಹುದ್ದೆಯಲ್ಲಿರುವವರು ಸಂವಿಧಾನ ವಿರೋಧಿ ವಿಚಾರಗಳನ್ನು ಹರಡುತ್ತಿದ್ದಾರೆ. ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಅಂತಿಮ ಗುರಿ ಸಂವಿಧಾನವನ್ನೇ ಬದಲಿಸುವುದಾಗಿದೆ ಎಂಬ ಕಳವಳವಿದೆ.

ಜನರ ಜವಾಬ್ದಾರಿ

ಸಂವಿಧಾನವನ್ನು ದುರ್ಬಲಗೊಳಿಸುವ ಮತ್ತು ಸವೆತಗೊಳಿಸುವ ಈ ಪ್ರಯತ್ನಗಳು ನಾಗರಿಕರ ಮೂಲಭೂತ ಹಕ್ಕುಗಳ ಮೇಲಿನ ದಾಳಿಯಾಗಿದೆ. ಇವು ಜಾತ್ಯತೀತ-ಪ್ರಜಾಸತ್ತಾತ್ಮಕ ಗಣರಾಜ್ಯಕ್ಕೆ ಗಂಭೀರ ಅಪಾಯವನ್ನು ಉಂಟುಮಾಡುತ್ತವೆ. ಈ ದಾಳಿಯನ್ನು ನಾವು ಎದುರಿಸಬೇಕಾಗಿದೆ. ಜನರು ಮಾತ್ರ ಇದನ್ನು ಮಾಡಬಹುದು, ಏಕೆಂದರೆ ಅವರು ಸಂವಿಧಾನದ ಅಂತಿಮ ರಕ್ಷಕರು.

ಆರ್.ಸಚ್ಚಿದಾನಂದಂ ಅವರು ಸಂಸತ್ತಿನಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು.

ಕರ್ನಾಟಕದ ಕೃಷಿ, ಆಹಾರ ಭದ್ರತೆಗಳ ಮೇಲೆ..... ಪುಟ 16 ರಿಂದ

ಕರ್ನಾಟಕದಲ್ಲಿ ಜನಸಂಖ್ಯೆಯ ದೊಡ್ಡ ಭಾಗಕ್ಕೆ ಕೃಷಿಯು ಪ್ರಾಥಮಿಕ ಜೀವನೋಪಾಯವಾಗಿದೆ ಮತ್ತು ಈ ವಲಯದ ದೌರ್ಬಲ್ಯವನ್ನು ನಿರ್ಣಯಿಸಲಾಗಿದೆ. ಬೆಳೆಯ ತೀವ್ರತೆ, ಒಟ್ಟು ನೀರಾವರಿ ಪ್ರದೇಶ ಮತ್ತು ವಾಣಿಜ್ಯ ಬೆಳೆ ಪ್ರದೇಶವು ಕರ್ನಾಟಕದ ಜಿಲ್ಲೆಗಳ ದುರ್ಬಲತೆಯನ್ನು ನಿರ್ಧರಿಸುವಲ್ಲಿ ಪ್ರಮುಖ ಚಾಲಕ ಅಂಶಗಳಾಗಿವೆ. ಬೀದರ್, ಗುಲ್ಬರ್ಗ, ಬಿಜಾಪುರ, ಕೊಪ್ಪಳ, ಗದಗ, ಬಾಗಲಕೋಟೆ ಮತ್ತು ಯಾದಗಿರಿಯಂತಹ ಜಿಲ್ಲೆಗಳು ಹವಾಮಾನ ಬದಲಾವಣೆಗೆ ಒಳಗಾಗುವ ಅಪಾಯ ಹೆಚ್ಚಿವೆ. ರಾಜ್ಯದ 16 ಜಿಲ್ಲೆಗಳು ಸರಾಸರಿ ಸಂಯೋಜಿತ ದುರ್ಬಲತೆ ಸೂಚ್ಯಂಕ ಮಟ್ಟಕ್ಕಿಂತ ಹೆಚ್ಚಿವೆ ಎಂದು ವರದಿಯಾಗಿದೆ. ಬೀದರ್, ಕೋಲಾರ ಮತ್ತು ಯಾದಗಿರಿ ಜಿಲ್ಲೆಗಳು ಹೆಚ್ಚು ದುರ್ಬಲವಾಗಿದ್ದು, ಶಿವಮೊಗ್ಗ, ದಾವಣಗೆರೆ ಮತ್ತು ಉಡುಪಿ ಜಿಲ್ಲೆಗಳು ಬದಲಾಗುತ್ತಿರುವ ಹವಾಮಾನಕ್ಕೆ ಕಡಿಮೆ ದುರ್ಬಲತೆಯನ್ನು ಪ್ರದರ್ಶಿಸುತ್ತವೆ. ರಾಜ್ಯದ ಶೇ. 50ಕ್ಕಿಂತ ಹೆಚ್ಚಿನ ಪ್ರದೇಶವು 100 ಮಿಮೀಗಿಂತ ಕಡಿಮೆ ಮಣ್ಣಿನ ನೀರಿನ ಲಭ್ಯತೆಯ ಸಾಮರ್ಥ್ಯವನ್ನು ಹೊಂದಿದೆ (NBSS & LUP1999), ಇದು ಹವಾಮಾನ ಬದಲಾವಣೆಗೆ ಅದರ ದೌರ್ಬಲ್ಯವನ್ನು ಹೆಚ್ಚಿಸುತ್ತದೆಂದೂ ಅವರು ತಿಳಿಸಿದರು.

ಉಪಶಮನ ಮತ್ತು ಹೊಂದಾಣಿಕೆಯ ಪ್ರಸ್ತಾವಿತ ಕಾರ್ಯವ್ಯೂಹದ ಅಂಶಗಳು

ಕೊನೆಯದಾಗಿ, ಕಾರ್ಯಯೋಜನೆಯಲ್ಲಿ ಉಪಶಮನ ಮತ್ತು ಹೊಂದಾಣಿಕೆಯ ಈ ಕೆಳಗಿನ ಪ್ರಸ್ತಾವಿತ ಕಾರ್ಯವ್ಯೂಹದ ಅಂಶಗಳನ್ನು ಅವರು ಮಂಡಿಸಿದರು.

ಹವಾಮಾನ ಆಧಾರಿತ ಬೆಳೆ ಪದ್ಧತಿ: ಲಭ್ಯವಿರುವ ಮಳೆನೀರಿನ ಪ್ರಮಾಣ, ಮಣ್ಣಿನ ಗುಣಲಕ್ಷಣಗಳು, ಆವಿಯಾಗುವಿಕೆ ಮತ್ತು ಬೆಳವಣಿಗೆಯ ಅವಧಿಯನ್ನು ಆಧರಿಸಿ, ಹವಾಮಾನ ಬದಲಾವಣೆಯ ನಿರೀಕ್ಷೆಗಳನ್ನು ಪರಿಗಣಿಸಿ ಪ್ರತಿ ಜಿಲ್ಲೆಗೆ ಸೂಕ್ತವಾದ ಬೆಳೆಗಳನ್ನು ಗುರುತಿಸಬೇಕು.

ಅಗ್ರೋಮೆಟ್ (ಕೃಷಿ-ಹವಾಮಾನ) ಸಲಹಾ ಸೇವೆಗಳನ್ನು ಬಲಪಡಿಸುವುದು:

ಆಗ್ರೋಮೆಟ್ ಸಲಹಾ ಸೇವೆಗಳು ಹಿಂದಿನ ಹವಾಮಾನ ಮಾದರಿಗಳು ಮತ್ತು ಭವಿಷ್ಯದ ಬೆಳೆ ಕೃಷಿ ಪ್ರಕ್ರಿಯೆಗಳಿಗೆ ಶಿಫಾರಸುಗಳ ಬಗ್ಗೆ ವಿವರವಾದ ಮಾಹಿತಿಯನ್ನು ಹೊಂದಿರುತ್ತವೆ. ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳಿಗೆ ರೈತರ ಹೊಂದಾಣಿಕೆಯನ್ನು ಹೆಚ್ಚಿಸಲು ಹವಾಮಾನ ಆಧಾರಿತ ಕೃಷಿ ಸಲಹಾ ಸೇವೆಗಳನ್ನು ಒದಗಿಸಬೇಕು.

ಸೌರ ಕೃಷಿ ಪಂಪುಗಳ ಅಳವಡಿಕೆ

ನೆರೆ ಹೊಂದಾಣಿಕೆಯ ತಂತ್ರಗಳು (ದೀರ್ಘ ಕಾಲೀನ): ಹೆಚ್ಚುವರಿ ನೆರೆ ನೀರನ್ನು ತಿರುಗಿಸಲು ಮತ್ತು ವ್ಯವಸ್ಥೆಯ ಮೇಲೆ ನೀರಿನ ಪ್ರಮಾಣ ಮತ್ತು ಬಲವನ್ನು ಕಡಿಮೆ ಮಾಡಲು ಪ್ರಯತ್ನಗಳು ಆಗಬೇಕಾಗಿದೆ. ನದಿಗಳ ಎರಡೂ ಬದಿಗಳಲ್ಲಿ ಹೆಚ್ಚಿನ ಸಂಖ್ಯೆಯ ಒಳಚರಂಡಿ/ನೀರಾವರಿ ಕಾಲುವೆಗಳನ್ನು ಮತ್ತು ಕಾಲುವೆಗಳ ಜೊತೆಗೆ ಸಮುದಾಯ ಟ್ಯಾಂಕ್‌ಗಳನ್ನು ಒದಗಿಸುವುದು ಪರಿಣಾಮವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಸಾವಯವ ಕೃಷಿ ಪದ್ಧತಿ: ಸಾಂಪ್ರದಾಯಿಕ ಉತ್ಪಾದನೆಯಲ್ಲಿ ಬಳಸಲಾಗುವ ಶೇಕಡಾ 46ರಷ್ಟು ಶಕ್ತಿಯನ್ನು ಉಳಿಸಲು ಬಾಹ್ಯ ಒಳಹರಿವಿನ ಕಡಿಮೆ ಬಳಕೆಯು ಮಣ್ಣಿನ ಫಲವತ್ತತೆಯನ್ನು ಸುಧಾರಿಸುತ್ತದೆ ಮತ್ತು ಆದ್ದರಿಂದ ಕೃಷಿ ವ್ಯವಸ್ಥೆಯ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುತ್ತದೆ.

ಮಣ್ಣಿನ ಆರೋಗ್ಯ: ಸುಧಾರಿತ ಮಣ್ಣಿನ ಆರೋಗ್ಯವು ಮಣ್ಣಿನ ಭೌತಿಕ, ರಾಸಾಯನಿಕ ಮತ್ತು ಜೈವಿಕ ಚಟುವಟಿಕೆಗಳನ್ನು ಸುಧಾರಿಸುತ್ತದೆ. ಮಣ್ಣಿನ ಆರೋಗ್ಯ ಕಾರ್ಡ್ ಪುನಶ್ಚೇತನದ ಜೊತೆಗೆ ಮಣ್ಣಿನ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಾಯ ಮಾಡುತ್ತದೆ. ಮಣ್ಣಿನ ಪರೀಕ್ಷೆಯ ಬೆಳೆ ಪ್ರತಿಕ್ರಿಯೆಯ ಆಧಾರದ ಮೇಲೆ ಸೈಟ್ ನಿರ್ದಿಷ್ಟ ಪೋಷಕಾಂಶ ನಿರ್ವಹಣೆ ಮತ್ತು ರಸಗೊಬ್ಬರ ಶಿಫಾರಸುಗಳು, ರಸಗೊಬ್ಬರಗಳ ವಿವೇಚನಾರಹಿತ ಬಳಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.

ಮಳೆಯಾಶ್ರಿತ ಪ್ರದೇಶಗಳಲ್ಲಿ ಮಳೆನೀರಿನ ನಿರ್ವಹಣೆ: ಅಲ್ಪಾವಧಿಯಲ್ಲಿ ಇದನ್ನು ಸ್ಥಳೀಯ (ಇನ್‌ಸಿಟು) ಮತ್ತು ಹೊರಗಿನ (ಎಕ್ಸಿಟು) ಹಸಿರು ಗೊಬ್ಬರ, ಬೇಸಿಗೆ ಉಳುಮೆ, ಕಲ್ಲು ಮತ್ತು ಸಸ್ಯಕ ಗದ್ದೆ ಬಂಡ್‌ಗಳು ಇತ್ಯಾದಿಗಳ ಮೂಲಕ ಸಾಧಿಸಬಹುದು. ದೀರ್ಘಾವಧಿಯಲ್ಲಿ ಕೃಷಿ ಹೊಂಡಗಳು, ಚೆಕ್‌ಡ್ಯಾಮ್‌ಗಳು, ನಾಲಾ ಮೂಲಕ ನೀರು ಸಂಗ್ರಹಣೆಯಲ್ಲಿ -ಬಂಡ್‌ಗಳು ಮತ್ತು ಅಂತರ್ಜಲ ಮರುಪೂರಣ ರಚನೆಗಳು ಸಹಾಯ ಮಾಡಬಲ್ಲವು. ಈ ರೀತಿ, EMPRI ವರದಿಯಲ್ಲಿನ ಅಂಶಗಳನ್ನು ಟಿ.ಮಹೇಶ್ ಮತ್ತು ಡಾ.ಸರಿತಾ ಸಮಾವೇಶದ ಗಮನಕ್ಕೆ ತಂದರು. ಈ ಕಾರ್ಯಯೋಜನೆಯ ಆಧಾರದ ಮೇಲೆ ಪ್ರತಿ ಸರಕಾರದ ವಿಭಾಗ (ಕೃಷಿ ಇತ್ಯಾದಿ) ವಿವರವಾದ ಯೋಜನೆಗಳನ್ನು ತಯಾರಿಸಿ ಜಾರಿ ಮಾಡುತ್ತದೆ ಎಂದರು.

ಕಾರ್ಯಯೋಜನೆಯ ಮೇಲೆ ಸಂವಾದ

ನಂತರ ಸಂವಾದ ಗೋಷ್ಠಿ ನಡೆಯಿತು. ಇದರ ಅಧ್ಯಕ್ಷತೆಯನ್ನು ವಹಿಸಿ ಸಂವಾದಕ್ಕೆ ಚಾಲನೆ ಕೊಡುತ್ತಾ, ಮಾತನಾಡಿದ ಕೃಷಿ ವಿಜ್ಞಾನಿ ಮತ್ತು ಲೇಖಕರಾದ ಜಿ.ಎನ್.ನಾಗರಾಜ್ ಅವರು, ಹವಾಮಾನ ವೈಪರಿತ್ಯ ಕೃಷಿಯ ಮೇಲೆ ಯಾಕೆ ಪರಿಣಾಮ ಬೀರುತ್ತದೆ ಎಂಬುದರ ಹಿಂದಿರುವ ವಿಜ್ಞಾನದ ಅಂಶವನ್ನು ವಿವರಿಸಿದರು. ಕಾರ್ಯಯೋಜನೆಯ ಅಂಶಗಳನ್ನು ಜಾರಿ ಮಾಡುವುದರ ವೆಚ್ಚಕ್ಕೆ ಸರಕಾರ ಬಜೆಟ್ ಮಾಡಿದೆಯೆ? ಸೌರ ಪಂಪಿನ ವೆಚ್ಚ ಯಾರು ಹೊರುತ್ತಾರೆ? ಹವಾಮಾನ ವೈಪರೀತ್ಯಗಳಿಂದ ಉಂಟಾಗಬಹುದಾದ ಆಹಾರಧಾನ್ಯ ಕೊರತೆ ನೀಗಿಸಲು ಹೆಚ್ಚಿನ ಆಹಾರ ದಾಸ್ತಾನು ಯೋಜಿಸಿದೆಯೆ? ಹವಾಮಾನ ವೈಪರೀತ್ಯ ತಾಳಿಕೊಳ್ಳುವ ತಳಿಗಳ ಸಂಶೋಧನೆಗೆ ಯೋಜನೆಯಿದೆಯೆ ಮುಂತಾದ ಪ್ರಶ್ನೆಗಳನ್ನು ನಾಗರಾಜ್ ಅವರು ಎತ್ತಿದರು. ಸಂವಾದದಲ್ಲಿ ರೈತ ಸಂಘಟನೆಯ ಯಶವಂತ ಮತ್ತು ಕೃಷಿ ಕೂಲಿಕಾರರ ಸಂಘಟನೆಯ ಚಂದ್ರಪ್ಪ ಹೊಸ್ಕೇರಾ ಭಾಗವಹಿಸಿದ್ದರು.

ಈ ಸಂದರ್ಭದಲ್ಲಿ ಹವಾಮಾನದ ಮೇಲೆ ಕೆ.ಎಸ್. ರವಿಕುಮಾರ್ ಅವರು ಬರೆದ ಮತ್ತು ಬಾರತ ಜ್ಞಾನ ವಿಜ್ಞಾನ ಸಮಿತಿ ಪ್ರಕಟಿಸಿದ "ಹವಾಮಾನ ಬದಲಾವಣೆ: ಬೇಕೆ ಈ ದಿನಗಳು" ಪುಸ್ತಕ ಬಿಡುಗಡೆ ಮಾಡಲಾಯಿತು. ಪುಸ್ತಕ ಕುರಿತು ಮಾತನಾಡುತ್ತಾ ರವಿಕುಮಾರ್ ಅವರು, ಬೆಂಗಳೂರಿನ ಜನ ಮಳೆಗೆ ಈಗ ಬೆದರುತ್ತಾರೆಯೆಂದರೆ ಹವಾಮಾನ ಬದಲಾವಣೆ ಆಗುತ್ತಿದೆಯೆಂದೇ ಅರ್ಥವೆಂದರು. ಬಿಸಿಲಿನ ತಾಪದಿಂದ ಕೆಲಸದ ಅವಧಿ ಕಡಿಮೆಯಾಗುತ್ತದೆ. ಇದರಿಂದ ರೈತರು ಹಾಗೂ ಕೂಲಿಕಾರರ ಬದುಕಿನ ಮೇಲೆ ಪರಿಣಾಮ ಬೀರುತ್ತದೆ ಎಂದರು. ಪ್ರೊ. ಕಮಲ್ ಲೊದಾಯ್ ಅವರು ಕೆ.ಎಸ್. ರವಿಕುಮಾರ್ ಅವರನ್ನು ಪರಿಚಯಿಸಿದರು.

ನಾಡಿನ ಪ್ರಮುಖ ರೈತ ಸಂಘಟನೆಗಳು, ➚

ಭೂಮಿಯ ಹಕ್ಕಿಗಾಗಿ ನೋಯ್ಡಾ ರೈತರ ಸಮರಶೀಲ ಹೋರಾಟ

ನೋಯ್ಡಾ ಮತ್ತು ಗ್ರೇಟರ್ ನೋಯ್ಡಾದಲ್ಲಿ ನಡೆಯುತ್ತಿರುವ ರೈತರ ಹೋರಾಟವು ಭೂಮಿಯ ಹಕ್ಕಿನ ನಿರ್ಣಾಯಕ ಸಮಸ್ಯೆಯನ್ನು ರಾಷ್ಟ್ರದ ಗಮನಕ್ಕೆ ತರುವಲ್ಲಿ ಯಶಸ್ವಿಯಾಗಿದೆ. ಇದು ಒಂದು ಕಡೆ ರೈತರು ಮತ್ತು ಭೂರಹಿತ ಗ್ರಾಮೀಣ ಕೂಲಿಕಾರರು, ಇನ್ನೊಂದೆಡೆ ಉತ್ಪಾದನೆ ಮತ್ತು ಸೇವಾ ವಲಯಗಳಲ್ಲಿ ಕಾರ್ಪೊರೇಟ್ ಹಿತಾಸಕ್ತಿಗಳನ್ನು ಪ್ರತಿನಿಧಿಸುವ ಬಿಜೆಪಿ ನೇತೃತ್ವದ ಉತ್ತರ ಪ್ರದೇಶ ಸರ್ಕಾರ, ಇವೆರಡರ ನಡುವಿನ ನೇರ ಸಂಘರ್ಷವಾಗಿದೆ.



ಪಿ. ಕೃಷ್ಣಪ್ರಸಾದ್

ಉತ್ತರ ಪ್ರದೇಶದ ನೋಯ್ಡಾ ಮತ್ತು ಗ್ರೇಟರ್ ನೋಯ್ಡಾ ಪ್ರದೇಶಗಳಲ್ಲಿ ಯಮುನಾ ಎಕ್ಸ್‌ಪ್ರೆಸ್ ವೇ, ಜೇವಾರ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಮತ್ತು ಯುಪಿಎಸ್‌ಐಡಿಸಿ ಸೇರಿದಂತೆ, ವಿವಿಧ ಯೋಜನೆಗಳಿಗೆ ರೈತರಿಂದ ವಶಪಡಿಸಿಕೊಂಡಿರುವ ಫಲವತ್ತಾದ ಭೂಮಿಗೆ ಸರಿಯಾದ ಪರಿಹಾರ ಮತ್ತು ಪರ್ಯಾಯ ಜೀವನೋಪಾಯವನ್ನು ರೂಪಿಸಬೇಕೆಂದು ರೈತರು ಹೋರಾಟ ನಡೆಸುತ್ತಿದ್ದಾರೆ. ರೈತ ಚಳುವಳಿ ಎತ್ತಿರುವ ಸ್ಪಷ್ಟ ಬೇಡಿಕೆಗಳಿಂದಾಗಿ ಭೂಮಿಯ ಹಕ್ಕಿಗಾಗಿನ ಈ ಹೋರಾಟದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭೂಮಿ ಕಳೆದುಕೊಂಡ ಸಂತ್ರಸ್ತರು ಭಾಗವಹಿಸುತ್ತಿರುವುದು ಮತ್ತು ಸ್ಥಿರವಾಗಿ ನಿಂತಿರುವುದು ಸ್ಪಷ್ಟವಾಗಿದೆ.

ಬೆಳೆಯುತ್ತಿರುವ ದೆಹಲಿ ಮತ್ತು ನೋಯ್ಡಾ ರಾಜಧಾನಿಗಳ ನಡುವೆ ನಡೆಯುತ್ತಿರುವ ಈ ಹೋರಾಟವು ರಾಜಕೀಯ ಪ್ರಸ್ತುತತೆಯನ್ನು ಹೊಂದಿದೆ ಮತ್ತು ಭಾರತೀಯ ಕಾರ್ಪೊರೇಟ್ ಶಕ್ತಿಗಳ ಅಮಾನವೀಯ ಮುಖವನ್ನು ಬಹಿರಂಗಪಡಿಸುತ್ತದೆ. ಅಖಿಲ ಭಾರತ ಕಿಸಾನ್ ಸಭಾದ ರಾಷ್ಟ್ರ ನಾಯಕತ್ವದ ಯೋಜಿತ ಮದ್ಯಪ್ರವೇಶದಿಂದಾಗಿ ನೋಯ್ಡಾದಲ್ಲಿನ ರೈತ ಹೋರಾಟಗಳು ಸ್ಥಿರವಾಗಿವೆ. ಕಿಸಾನ್ ಸಭಾದ ರಾಷ್ಟ್ರೀಯ ನಾಯಕತ್ವವು ಸಕ್ರಿಯವಾಗಿ ಈ ಹೋರಾಟದ ಬೆಂಬಲಕ್ಕೆ ನಿಂತಿದೆ. ಕಳೆದ ವರ್ಷ ನಡೆದ ಬೃಹತ್ ಪ್ರತಿಭಟನೆಗಳಿಂದಾಗಿ ಉನ್ನತ ಮಟ್ಟದ ಸಮಿತಿಯನ್ನು ರಚಿಸಲಾಗಿತ್ತು. ಈ ಸಮಿತಿಯ ಶಿಫಾರಸ್ಸಿನಂತೆ ಅಭಿವೃದ್ಧಿ ಹೊಂದಿದ ಭೂಮಿಯಲ್ಲಿ ಶೇ. 10ರಷ್ಟನ್ನು ರೈತರಿಗೆ ಹಿಂದಿರುಗಿಸುವುದು; ಸುಪ್ರಿಂ ಕೋರ್ಟ್ ಅನುಮೋದಿಸಿದಂತೆ ಶೇ. 64.7ರ ಹೆಚ್ಚಿನ ಪರಿಹಾರವನ್ನು ಒದಗಿಸುವುದು; ಉತ್ತರ ಪ್ರದೇಶದಲ್ಲಿ 2017ರಿಂದ ನವೀಕರಿಸದ ಭೂಮಿಯ ದರದ ನಿಯಮಿತ ಪರಿಷ್ಕರಣೆ ಮತ್ತು ಭೂರಹಿತ ಕುಟುಂಬಗಳಿಗೆ ಉದ್ಯೋಗಾವಕಾಶಗಳನ್ನು ಖಾತ್ರಿಪಡಿಸುವುದು. ಈ ಶಿಫಾರಸ್ಸುಗಳನ್ನು ಜಾರಿಗೆ ತರಲು ಯೋಗಿ ಆದಿತ್ಯನಾಥ್ ಅವರ 'ಡಬಲ್ ಇಂಜಿನ್' ಸರ್ಕಾರ ಸಿದ್ಧರಿಲ್ಲ. ಈ ಹಿನ್ನೆಲೆಯಲ್ಲಿ ಹೋರಾಟವನ್ನು ತೀವ್ರಗೊಳಿಸಿ ಗೆಲುವು ಸಾಧಿಸುವವರೆಗೆ ಒಗ್ಗಟ್ಟನ್ನು ಮತ್ತಷ್ಟು ಗಟ್ಟಿಗೊಳಿಸಲು ರೈತರು ನಿರ್ಧರಿಸಿದ್ದಾರೆ.

ಅಹೋರಾತ್ರಿ ಪ್ರತಿಭಟನೆ ಎಚ್ಚರಿಸಿದರು

25 ನವೆಂಬರ್ 2024ರಂದು 10ಕ್ಕೂ ಹೆಚ್ಚು ರೈತ ಸಂಘಟನೆಗಳು ಸಂಯುಕ್ತ ಕಿಸಾನ್ ಮೋರ್ಚಾ (ಎಸ್‌ಕೆಎಂ) ಅಡಿಯಲ್ಲಿ ಗ್ರೇಟರ್ ನೋಯ್ಡಾ ಪ್ರಾಧಿಕಾರದ ಆವರಣದಲ್ಲಿ ಮಹಾಪಂಚಾಯತ್ ಅನ್ನು ಆಯೋಜಿಸಿದವು. ಈ ಹೋರಾಟದಲ್ಲಿ ಮಹಿಳೆಯರು ಸೇರಿದಂತೆ ಸಾವಿರಾರು ರೈತರು ಪಾಲ್ಗೊಂಡಿದ್ದರು. ಅನಿರ್ದಿಷ್ಟಾವಧಿ ಅಹೋರಾತ್ರಿ ಧರಣಿ ಸತ್ಯಾಗ್ರಹಕ್ಕೆ ಮಹಾಪಂಚಾಯತ್ ಕರೆ ನೀಡಿತು. ಉತ್ತರ ಪ್ರದೇಶ ರಾಜ್ಯ ಸರ್ಕಾರ ತಮ್ಮ ಬೇಡಿಕೆಗಳನ್ನು ಪರಿಹರಿಸುವಲ್ಲಿ ವಿಫಲವಾದರೆ, ರೈತರು ಸಂಸತ್ತಿನ ಅಧಿವೇಶನ ನಡೆಯುತ್ತಿರುವಾಗ ಡಿಸೆಂಬರ್ 2, 2024ರಂದು ದೆಹಲಿಗೆ ಮೆರವಣಿಗೆ ನಡೆಸುವುದಾಗಿ ಎಚ್ಚರಿಸಿದರು.

ನವೆಂಬರ್ 26ರಿಂದ 28ರ ವರೆಗೆ ಗ್ರೇಟರ್ ನೋಯ್ಡಾ ಪ್ರಾಧಿಕಾರದ ಮುಂದೆ ಮತ್ತು ನವೆಂಬರ್ 29ರಿಂದ ಡಿಸೆಂಬರ್ ಒಂದರವರೆಗೆ ನೋಯ್ಡಾ ಪ್ರಾಧಿಕಾರದ ಮುಂದೆ ಅಹೋರಾತ್ರಿ ಪ್ರತಿಭಟನೆಗಳು ನಡೆದವು. ಆದಾಗ್ಯೂ, ಈ ಹಂತದಲ್ಲಿ ಉತ್ತರ ಪ್ರದೇಶದ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರವು ಯಾವುದೇ ಪ್ರತಿಕ್ರಿಯೆ ನೀಡದೆ ರೈತರ ನಾಯಕತ್ವದೊಂದಿಗೆ ಯಾವುದೇ ಮಾತುಕತೆ ನಡೆಸಲಿಲ್ಲ.

ಮೂರು ತಡೆಗೋಡೆಗಳನ್ನು ದಾಟಿ ಮುಂದೆ ಸಾಗಿದರು

ಡಿಸೆಂಬರ್ 2ರಂದು, ಸಾವಿರಾರು ರೈತರು ದೆಹಲಿಗೆ ಮೆರವಣಿಗೆ ಮಾಡಲು ಮಹಾಮಾಯಾ ಮೇಲ್ಸೇತುವೆಯಲ್ಲಿ ಜಮಾಯಿಸಿದರು. ಪೊಲೀಸ್ ಬ್ಯಾರಿಕೇಡ್‌ಗಳ ನಡುವೆಯೂ ಅವರು ಮೂರು ತಡೆಗೋಡೆಗಳನ್ನು ದಾಟಿ ಮುಂದೆ ಸಾಗಿದರು. ಇದರಿಂದ ಗಂಟೆಗಟ್ಟಲೆ ಸಂಚಾರ ಅಸ್ತವ್ಯಸ್ತಗೊಂಡಿತು. ಈ ಹಂತದಲ್ಲಿಯೇ ಉತ್ತರ ಪ್ರದೇಶದ ಆಡಳಿತವು ರೈತರ ಹೋರಾಟವನ್ನು ಗಂಭೀರವಾಗಿ ಪರಿಗಣಿಸಲು ಪ್ರಾರಂಭಿಸಿತು. ರೈತರ ಬೇಡಿಕೆಗಳನ್ನು ಈಡೇರಿಸಲು ಏಳು ದಿನಗಳೊಳಗೆ ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿ ಅವರು ಭೇಟಿ ಮಾಡುವುದಾಗಿ ಅಧಿಕಾರಿಗಳು ರೈತರಿಗೆ ಭರವಸೆ ನೀಡಿದರು. ಈ ಭರವಸೆಗೆ ಸೂಕ್ಷ್ಮವಾಗಿ ಪ್ರತಿಕ್ರಿಯಿಸಿದ ರೈತರ ನಾಯಕತ್ವವು, ನೋಯ್ಡಾದ ದಲಿತ ಪ್ರೇರಣಾ ಸ್ಥಳ, ಡಾ. ಅಂಬೇಡ್ಕರ್ ಪಾರ್ಕ್‌ನಲ್ಲಿ ಅಹೋರಾತ್ರಿ ಧರಣಿ ನಡೆಸುವಂತೆ ಪ್ರತಿಭಟನೆಯನ್ನು ಬದಲಾಯಿಸಿತು ಮತ್ತು ಸಂಚಾರಕ್ಕೆ ತೊಂದರೆಯಾಗದಂತೆ ನೋಡಿಕೊಳ್ಳಲಾಯಿತು.

160 ರೈತರನ್ನು ಜೈಲಿಗೆ ಕಳುಹಿಸಿದರು

ಡಿಸೆಂಬರ್ 3ರಂದು, ರೈತರ ನಂಬಿಕೆಯನ್ನು ಉಲ್ಲಂಘಿಸಿ, ಆಡಳಿತವು ಸುಮಾರು 500 ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ, ಸುಮಾರು 100ಕ್ಕೂ ಹೆಚ್ಚು ಮಹಿಳೆಯರು ಸೇರಿದಂತೆ ಸುಮಾರು 300 ಪ್ರತಿಭಟನಾಕಾರರನ್ನು ಧರಣಿ ಸ್ಥಳದಿಂದ ಬಲವಂತವಾಗಿ ಹೊರಹಾಕಿತು. ಮಹಿಳಾ ರೈತರ ಮೇಲೂ ಪುರುಷ ಪೊಲೀಸ್ ಅಧಿಕಾರಿಗಳು ದೌರ್ಜನ್ಯ ನಡೆಸಿದರು. ಧರಣಿ ಸತ್ಯಾಗ್ರಹ ಜಾಮೀನು ಪಡೆಯಬಹುದಾದ ಅಪರಾಧವಾಗಿದ್ದರೂ, 160 ರೈತರನ್ನು ಮ್ಯಾಜಿಸ್ಟ್ರೇಟ್ ಮುಂದೆ ಹಾಜರುಪಡಿಸದೆ ನೇರವಾಗಿ ಲುಕ್ಸಾರ್ ಜೈಲಿಗೆ ಕಳುಹಿಸಲಾಯಿತು. ಹೋರಾಟದ ಪ್ರಮುಖ ನಾಯಕರಾದ ರೂಪೇಶ್ ವರ್ಮಾ (ಎಐಕೆಎಸ್‌ನ ಜಿಲ್ಲಾಧ್ಯಕ್ಷ), ಸುಖಬೀರ್ ಖಲೀಫಾ, ಸುನಿಲ್ ಫೌಜಿ ಮತ್ತು ಪವನ್ ಖಾತಾನಾ ಅವರನ್ನು ಜೈಲಿಗೆ ಹಾಕಲಾಯಿತು. ಮಹಿಳಾ ರೈತರು ಮತ್ತು ಹಿರಿಯರನ್ನು ಬಿಡುಗಡೆಗೊಳಿಸಿದಾಗ, ಮರುದಿನ ಬೆಳಿಗ್ಗೆ ಪೊಲೀಸರು "ಗೃಹಬಂಧನ" ಎಂಬ ನೆಪದಲ್ಲಿ ಮನೆಗಳಿಗೆ ಅತಿಕ್ರಮವಾಗಿ ನುಗ್ಗಿ, ರೈತರನ್ನು ಬಂದಿಸಲಾಯಿತು. ಸಾಮೂಹಿಕ ಪ್ರತಿರೋಧವನ್ನು ಹತ್ತಿಕ್ಕಲು ಪ್ರಯತ್ನಿಸಿದ ಪೊಲೀಸರು ಕಾರ್ಯಕರ್ತರನ್ನು ವ್ಯಾಪಕವಾಗಿ ವಶಕ್ಕೆ ತೆಗೆದುಕೊಂಡು, ಹಳ್ಳಿಗಳಲ್ಲಿ ಭಯದ ವಾತಾವರಣವನ್ನು ಸೃಷ್ಟಿಸಿದರು.

ಪೊಲೀಸ್ ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸಲು ಮಹಾಪಂಚಾಯತ್‌ಗೆ ಕರೆ

ಉತ್ತರ ಪ್ರದೇಶದ ಪ್ರಮುಖ ರೈತ ಸಂಘಟನೆ, ಬಿಕೆಯು(ಟಿಕಾಯತ್) ಪೊಲೀಸ್ ದಬ್ಬಾಳಿಕೆಯ ವಿರುದ್ಧ ಪ್ರತಿಭಟಿಸಲು ಯಮುನಾ ಎಕ್ಸ್‌ಪ್ರೆಸ್ ವೇನ ಝೀರೋ ಪಾಯಿಂಟ್‌ನಲ್ಲಿ ಡಿಸೆಂಬರ್ 4ರಂದು ಮಹಾಪಂಚಾಯತ್‌ಗೆ ಕರೆ ನೀಡಿತು. ಮಹಾಪಂಚಾಯತ್‌ಗೆ ಅವಕಾಶ ನೀಡದಿರಲು ಯೋಗಿ ಆದಿತ್ಯನಾಥ್ ಆಡಳಿತ ನಿರ್ಧರಿಸಿತ್ತು. ಟಿಕಾಯತ್ ಕಾಲ್ನಡಿಗೆಯಲ್ಲಿ ಹೆದ್ದಾರಿಯನ್ನು ತಲುಪಲು ಪ್ರಯತ್ನಿಸಿದಾಗ ಅಲಿಗಢ ಪೊಲೀಸರು ರಾಕೇಶ್ ಟಿಕಾಯತ್‌ರನ್ನು ಬಲವಂತವಾಗಿ ಬಂಧಿಸಿದರು. ಎಸ್‌ಕೆಎಂ ನಾಯಕ ತಜೀಂದರ್ ಸಿಂಗ್ ವಿರ್ಕ್ ಮತ್ತು ಇತರ ಕಾರ್ಯಕರ್ತರನ್ನು ಖಾರ್ಕತ್ ಪೊಲೀಸ್ ಠಾಣೆಯಲ್ಲಿ ಮೂರು ಗಂಟೆಗಳ ಕಾಲ ಬಂಧನದಲ್ಲಿ ಇಡಲಾಯಿತು.



ರಾಜ್ಯ ಸರ್ಕಾರದ ಎಲ್ಲಾ ರೀತಿಯ ಅಡೆತಡೆಗಳ ಹೊರತಾಗಿಯೂ, ಸುಮಾರು 5,000 ರೈತರು ಮಹಾಪಂಚಾಯತ್‌ನಲ್ಲಿ ಸೇರಲು ಯಶಸ್ವಿಯಾದರು. ಸಿಐಟಿಯು ಮತ್ತು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ ಸದಸ್ಯರು ಪ್ರತಿಭಟನೆಯಲ್ಲಿ ಪಾಲ್ಗೊಂಡರು. ಕಾರ್ಯಕ್ರಮದಲ್ಲಿ ಎಐಕೆಎಸ್ ಮುಖಂಡರಾದ ಹನ್ನನ್ ಮೊಲ್ಲಾ, ವಿಜೂ ಕೃಷ್ಣನ್, ಪಿ.ಕೃಷ್ಣಪ್ರಸಾದ್ ಉಪಸ್ಥಿತರಿದ್ದರು. ಆಡಳಿತವು ಎಲ್ಲ ರೈತರನ್ನು ಬೇಷರತ್ತಾಗಿ ಬಿಡುಗಡೆ ಮಾಡದಿದ್ದರೆ, ರೈತರು ನೋಯ್ಡಾದ ಡಾ.ಅಂಬೇಡ್ಕರ್ ಪಾರ್ಕ್‌ಗೆ ಮೆರವಣಿಗೆ ನಡೆಸಿ ಅಹೋರಾತ್ರಿ ಧರಣಿ ಪ್ರತಿಭಟನೆಯನ್ನು ಮತ್ತೆ ಆರಂಭಿಸುವುದಾಗಿ ಮಹಾಪಂಚಾಯತ್ ಘೋಷಿಸಿತು.

ಪರಿಸ್ಥಿತಿಯ ಗಂಭೀರತೆಯನ್ನು ಗ್ರಹಿಸಿದ ಆಡಳಿತವು ಎಲ್ಲಾ ಜೈಲಿನಲ್ಲಿರುವ ರೈತರನ್ನು ಸಂಜೆ 4:30ರೊಳಗೆ ಬಿಡುಗಡೆ ಮಾಡಲು ನಿರ್ಧರಿಸಿತು. ಬಿಡುಗಡೆಯಾದ ರೈತರನ್ನು ಸ್ಫೂರ್ತಿದಾಯಕ ಘೋಷಣೆಗಳು, ಸಂಭ್ರಮಾಚರಣೆಗಳ ನಡುವೆ ಸ್ವಾಗತಿಸಲಾಯಿತು. ಈ ಮಹತ್ವದ ವಿಜಯವು ನಿರಂಕುಶಾಧಿಕಾರದ ಮೇಲೆ ಪ್ರಜಾಪ್ರಭುತ್ವದ ವಿಜಯವನ್ನು ಗುರುತಿಸಿತು. ಇದನ್ನು ವೈಯಕ್ತಿಕ ಸೋಲು ಎಂದು ಭಾವಿಸಿರುವ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರು ಗೌತಮ್ ಬುದ್ಧ ನಗರ ಮತ್ತು ಅಲಿಗಢದಲ್ಲಿ "ಅರಾಜಕತೆ" ಹರಡಲು ಬಿಡುವುದಿಲ್ಲ ಎಂದು ಟ್ವೀಟ್ ಮಾಡಿದ್ದಾರೆ.

ಜೈಲ್ ಭರೋ ಚಳವಳಿ ಘೋಷಣೆ

ಇದಕ್ಕೆ ಪ್ರತೀಕಾರವಾಗಿ ಡಿಸೆಂಬರ್ 4ರ ರಾತ್ರಿ ಧರಣಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ 35 ರೈತರನ್ನು ಮತ್ತೆ ಬಂಧಿಸಿ ನೇರವಾಗಿ ಲುಕ್ಸಾರ್ ಜೈಲಿಗೆ ಕಳುಹಿಸಲಾಯಿತು. ಪೊಲೀಸರು ವ್ಯಾಪಕ ಗೃಹಬಂಧನವನ್ನೂ ಆರಂಭಿಸಿದರು. ಜೈಲ್ ಭರೋ ಚಳವಳಿಯನ್ನು ಘೋಷಿಸಲಾಯಿತು. ಡಿಸೆಂಬರ್ 5ರಂದು, ಮಹಿಳೆಯರು ಸೇರಿದಂತೆ 120 ರೈತರು ಸ್ವಯಂಪ್ರೇರಣೆಯಿಂದ ಬಂಧನಕ್ಕೆ ಒಳಗಾದರು. ಮಹಿಳೆಯರನ್ನು ಬಿಡುಗಡೆಗೊಳಿಸಿದರೆ, ಉಳಿದವರನ್ನು ಜೈಲಿಗೆ ಹಾಕಲಾಯಿತು. ಡಿಸೆಂಬರ್ 6ರಂದು, ಇನ್ನೂ

ಪುಟ 14 ಕ್ಕೆ

ಕೃಷಿ ಕೂಲಿಕಾರರ ಸಂಘಟನೆಗಳು, ಜನ ವಿಜ್ಞಾನ ಸಂಘಟನೆಗಳು, ಪರಿಸರ ಮತ್ತು ಕೃಷಿ ಕ್ಷೇತ್ರದಲ್ಲಿ ಸಕ್ರಿಯವಾಗಿರುವ ಸರ್ಕಾರೇತರ ಸಂಸ್ಥೆಗಳ ನಾಯಕರು ಮತ್ತು ಕಾರ್ಯಕರ್ತರು ಸಮಾವೇಶದಲ್ಲಿ ಭಾಗಿಯಾಗಿದ್ದರು. ಕೃಷಿ ಮತ್ತು ಪರಿಸರ ವಿಜ್ಞಾನದ ಮತ್ತು ಸಂಬಂಧಿತ ಸಮಾಜ ವಿಜ್ಞಾನಗಳ ವಿಶ್ವವಿದ್ಯಾಲಯ, ಕಾಲೇಜುಗಳು, ಸಂಶೋಧನಾ ಸಂಸ್ಥೆಗಳ ಪ್ರಾಧ್ಯಾಪಕರು, ಸಂಶೋಧಕರು, ಸಂಶೋಧನಾ ವಿದ್ಯಾರ್ಥಿಗಳು, ಸ್ನಾತಕ-ಸ್ನಾತಕೋತ್ತರ ವಿದ್ಯಾರ್ಥಿಗಳು ಹಾಗೂ ಈ ವಿಷಯದಲ್ಲಿ ಇತರ ಆಸಕ್ತರೂ ಸಹ ಭಾಗಿಯಾಗಿದ್ದರು.

ಸುಬ್ರಮಣ್ಯ ಗುಡ್ಗೆ ಅವರು ಸ್ವಾಗತಿಸಿ ಕಾರ್ಯಕ್ರಮದ ನಿರೂಪಣೆ ಮಾಡಿದರು. ವಸಂತರಾಜ್ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಗುರುರಾಜ್ ದೇಸಾಯಿ ವಂದನಾರ್ಪಣೆ ಮಾಡಿದರು.

ವರದಿ: ಸಿಚಿ

ಗೃಹಮಂತ್ರಿಗಳ 7 ಜನ್ಮಗಳು, ಪ್ರಧಾನಿಗಳ 11 ಮಂತ್ರಗಳು ಮತ್ತು ತಲ್ಲಾಟದ ರಾಜಕೀಯ


ಡಿಸೆಂಬರ್ 13 ಮತ್ತು 14ರಂದು ಲೋಕಸಭೆ ಮತ್ತು 16, 17ರಂದು ರಾಜ್ಯಸಭೆಯಲ್ಲಿ "ಭಾರತದ ಸಂವಿಧಾನದ 75 ವರ್ಷಗಳ ಭವ್ಯ ಪಯಣ' ಎಂಬ ಹೆಸರಿನಲ್ಲಿ ವಿಶೇಷ ಚರ್ಚೆ ನಡೆಯಿತು. ಸಂವಿಧಾನ ಅಂಗೀಕಾರದ 75ನೇ ವಾರ್ಷಿಕೋತ್ಸವದ ಭಾಗವಾಗಿ ಇದನ್ನು ನಡೆಸಲಾಯಿತು ಎಂದು ಹೇಳಲಾಗಿದೆ. ಆದರೆ ವಾಸ್ತವವಾಗಿ, ಇದನ್ನು ನಡೆಸಿರುವುದು ಬಿಜೆಪಿ ಈ ಸಂವಿಧಾನವನ್ನು ಮೂಲೆಗುಂಪು ಮಾಡಿ ತನ್ನ 'ಹಿಂದೂರಾಷ್ಟ್ರ' ಕಲ್ಪನೆಯನ್ನು ಹೇರಲು ಹೊರಟಿದೆ ಎಂಬ ಸಂದೇಹ ಬಲಗೊಳ್ಳುತ್ತಿರುವುದನ್ನು 2024ರ ಲೋಕಸಭಾ ಚುನಾವಣೆಯ ಫಲಿತಾಂಶಗಳು ಖಚಿತಪಡಿಸಿರುವ ಹಿನ್ನೆಲೆಯಲ್ಲಿ ಇರಬಹುದೇ ಎಂಬುದು ಕೆಲವು ರಾಜಕೀಯ ವಿಶ್ಲೇಷಕರ ಅಭಿಪ್ರಾಯ. ಏಕೆಂದರೆ, ಇದನ್ನು ಸಿಪಿಐ(ಎಂ) ಸಂಸದ ಡಾ. ಜಾನ್ ಬ್ರಿಟ್ಟಾಸ್ ರಾಜ್ಯಸಭೆಯಲ್ಲಿನ ಚರ್ಚೆಯಲ್ಲಿ ವರ್ಣಿಸಿದಂತೆ, ಪ್ರಧಾನ ಮಂತ್ರಿಗಳು ಸೇರಿದಂತೆ ಆಳುವ ಪಕ್ಷದ ಸದಸ್ಯರು 'ಭೀಷಣ ಮತ್ತು ಘೋರ' 65 ವರ್ಷಗಳು ಹಾಗೂ 10 ವರ್ಷಗಳ 'ಭವ್ಯ' ಪಯಣದ ಚರ್ಚೆಯಾಗಿ ಮಾಡಲು ಪ್ರಯತ್ನಿಸಿದರು.

ಅದೇನೇ ಇರಲಿ, ಈ ಚರ್ಚೆ ಮತ್ತು ನಂತರದ ಘಟನೆಗಳು ಆಳುವ ಪಕ್ಷದ ಕುರಿತಂತೆ ಸಂದೇಹವನ್ನು ನಿವಾರಿಸುವ ಬದಲು ಇನ್ನಷ್ಟು ಗಟ್ಟಿಗೊಳಿಸಿರುವಂತೆ ಕಾಣುತ್ತದೆ. ಕಾಂಗ್ರೆಸ್ ಮುಖಂಡರು ಲೋಕಸಭಾ ಚುನಾವಣೆಗಳು ಮತ್ತು ಅದರ ಫಲಿತಾಂಶಗಳ ನಂತರ ಸಂವಿಧಾನದ ಬಗ್ಗೆ ಬಹಳಷ್ಟು ಮಾತನಾಡುತ್ತಿರುವುದರಿಂದ ಕುಪಿತರಾದಂತಿರುವ ಗೃಹಮಂತ್ರಿಗಳು ಕಾಂಗ್ರೆಸ್ ಪಕ್ಷವನ್ನು ಅಂಬೇಡ್ಕರ್–ವಿರೋಧಿ ಎಂದು ಬಿಂಬಿಸುವ ಭರದಲ್ಲಿ ಹೇಳಿರುವ ಮಾತುಗಳು ಈಗ ತಮಗೇ ತಿರುಗು ಬಾಣವಾಗುತ್ತಿವೆ ಎಂದು ಅವರು ನಿರೀಕ್ಷಿಸಿರಲಿಕ್ಕಿಲ್ಲ. ಆದರೆ ಎಂದಿನಂತೆ ಆಳುವ ಪಕ್ಷ ಅದನ್ನೇ ಒಂದು ಅವಕಾಶವಾಗಿ ಪರಿವರ್ತಿಸಿಕೊಳ್ಳುತ್ತಿದೆಯೇ?

ಅರೆ ಸತ್ಯಗಳು, ಮತ್ತು ಸುಳ್ಳುಗಳು

ಅಂಬೇಡ್ಕರ್ ಎನ್ನುವುದು ಈಗೊಂದು ಫ್ಯಾಷನ್ ಆಗಿಬಿಟ್ಟಿದೆ ಎನ್ನುತ್ತ, ಆರು ಬಾರಿ ಅಂಬೇಡ್ಕರ್ ಹೆಸರು ಉಚ್ಚರಿಸಿ, ಇಷ್ಟೊಂದು ಬಾರಿ ದೇವರ ಹೆಸರು ಹೇಳಿದ್ದರೆ ಏಳು ಜನ್ಮಗಳ ಕಾಲ ಸ್ವರ್ಗ ಸಿಗುತ್ತಿತ್ತು ಎಂದು ಅವರು ಹೇಳಿರುವುದಕ್ಕೆ ದೇಶಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗಿದೆ. ನಿಜ ಹೇಳಬೇಕೆಂದರೆ, ಇದರಲ್ಲಿ ಹೊಸತೇನೂ ಇಲ್ಲ. ಮುಖವಾಡ ಬಿದ್ದು ಹೋಗಿ ಇದು ಅವರ ನಿಜರೂಪವನ್ನು ಬಯಲಿಗೆಳೆದು ತಂದಿದೆ ಎನ್ನಬಹುದೇನೋ.

'75 ವರ್ಷಗಳ ಭವ್ಯ ಪಯಣ'ದ ಬಗ್ಗೆ ಹೇಳುವ ಬದಲು ಗೃಹಮಂತ್ರಿ ಅಮಿತ್ ಷಾ ಡಾ. ಅಂಬೇಡ್ಕರ್‌ರವರ ಅವಹೇಳನ ಮಾಡಿದ್ದಷ್ಟೇ ಅಲ್ಲ, ಅವರ ಹೆಸರು ಹೇಳಿ ಕಾಂಗ್ರೆಸ್ ಅನ್ನು ಮೂದಲಿಸಲು ಮಾಡಿದ ಉಲ್ಲೇಖಗಳಲ್ಲಿ ಹೆಚ್ಚಿನವು ಅರೆ ಸತ್ಯಗಳು, ಕೆಲವಂತೂ ಸುಳ್ಳುಗಳು ಎಂದು ಸ್ವತಂತ್ರ ಭಾರತದ ಇತಿಹಾಸ ಕಂಡವರಿಗೆ, ತಿಳಿದವರಿಗೆ ಎದ್ದು ಕಾಣುತ್ತಿದೆ. ಈ ಮೂಲಕ ದೇಶದ ಗೃಹಮಂತ್ರಿಗಳದ್ದು ಮಾತ್ರವಲ್ಲ, ಪ್ರಧಾನ ಮಂತ್ರಿಗಳೂ ಸೇರಿದಂತೆ ಅವರ ಪಕ್ಷದ ನಿಜಚಾರಿತ್ರ್ಯ ಮತ್ತೊಮ್ಮೆ ಬಯಲಿಗೆ ಬಂದಿದೆ ಎಂದು ಹಲವು ವಿಶ್ಲೇಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಏಕೆಂದರೆ ಇಂತಹ ಅವಹೇಳನಕಾರೀ ಟಿಪ್ಪಣಿಗಳ ನಂತರವೂ ಅವರು ದೇಶದ ಗೃಹಮಂತ್ರಿ ಹುದ್ದೆಯಲ್ಲಿರಲು ಅನರ್ಹರು, ಅವರನ್ನು ಆ ಸ್ಥಾನದಿಂದ ತೆಗೆದು ಹಾಕಬೇಕು ಎಂಬ ಬೇಡಿಕೆ ಹಲವೆಡೆಗಳಿಂದ ಬಂದಾಗಲೂ ದೇಶದ ಪ್ರಧಾನ ಮಂತ್ರಿಗಳು ಅವರನ್ನು ಸಮರ್ಥಿಸಿಕೊಳ್ಳಲು ಮುಂದಾಗಿದ್ದಾರೆ.



ಅಂಬೇಡ್ಕರ್, ಅಂಬೇಡ್ಕರ್, ಅಂಬೇಡ್ಕರ್.... ಅಂಬೇಡ್ಕರವರಿಲ್ಲದಿದ್ದರೆ ನಾವು ಅಡಿಯಲ್ಲಿ ಜಜ್ಜಿ ಹೋಗುತ್ತಿದ್ದೆವು ಮತ್ತು ಸ್ವರ್ಗದಲ್ಲಿ ಒಂದು ಜಾಗ ಪಡೆಯುತ್ತಿದ್ದೆವು!

ವ್ಯಂಗ್ಯಚಿತ್ರ ಕೃಪೆ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಈಗ ಪ್ರಧಾನ ಮಂತ್ರಿಗಳ ಸರ್ಟಿಫಿಕೇಟನ್ನೂ ಪಡೆದಿರುವ ಗೃಹಮಂತ್ರಿಗಳ ಈ ಭಾಷಣದಲ್ಲಿ 'ಹಿಂದೂ ಕೋಡ್ ಬಿಲ್'ನ ಪ್ರಸ್ತಾಪವಿದೆ. ಅದು ಕಾಂಗ್ರೆಸ್ ತಂದ 'ಹಿಂದೂ–ವಿರೋಧಿ' ಮಸೂದೆ ಎಂದಿದ್ದಾರೆ. ಆದರೆ ನಿಜವಾಗಿಯೂ ಅದು ಹಿಂದೂ ಸಮುದಾಯಗಳಲ್ಲಿ ಮಹಿಳೆಯರು ಅನುಭವಿಸುತ್ತಿರುವ ಅನ್ಯಾಯಗಳನ್ನು ಕೊನೆಗೊಳಿಸುವ ಉದ್ದೇಶದ ಸುಧಾರಣಾ ಕಾನೂನುಗಳನ್ನು ಹೊಂದಿದ್ದ ಸಂಹಿತೆಯಾಗಿತ್ತು. ಅದನ್ನು ಸಂವಿಧಾನ ಸಭೆಯಲ್ಲಿಯೇ ಅಕ್ಟೋಬರ್ 1947ರಲ್ಲಿ ಮಂಡಿಸಿದವರು ಸ್ವತಃ ಡಾ.ಅಂಬೇಡ್ಕರ್. ಅದನ್ನು ಬಲವಾಗಿ ಬೆಂಬಲಿಸಿದವರು ಆಗಿನ ಪ್ರಧಾನಿ ನೆಹರೂ. ಬಲವಾಗಿ ವಿರೋಧಿಸಿದವರು ಜನಸಂಘದ ಸ್ಥಾಪಕರಾದ ಶ್ಯಾಮಪ್ರಸಾದ್ ಮುಖರ್ಜಿ ಮತ್ತು ಕಾಂಗ್ರೆಸ್ಸಿನಲ್ಲೇ ಇದ್ದ ಕೆಲವು ಬ್ರಾಹ್ಮಣವಾದಿಗಳು. ಆರೆಸ್ಸೆಸ್ ಇದರ ವಿರುದ್ಧ ದೊಡ್ಡ ಅಪಪ್ರಚಾರವನ್ನೇ ನಡೆಸಿತು. ಕಾಂಗ್ರೆಸಿನ ಪ್ರಗತಿಪರರು 'ಸಮತೋಲನ' ತರಲು ಪ್ರಯತ್ನಿಸಿದರೂ ಈ ಮಸೂದೆಗೆ ಅಂಗೀಕಾರ ದೊರೆಯಲಿಲ್ಲ. ಇದರಿಂದ ಬೇಸತ್ತು ಡಾ.ಅಂಬೇಡ್ಕರ್ ಅವರು ತಮ್ಮ ಕಾನೂನು ಮಂತ್ರಿಯ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಹೀಗೆ ಅವರು ರಾಜೀನಾಮೆ ನೀಡಬೇಕಾಗಿ ಬಂದದ್ದು ನೆಹರೂ ಅವರಿಂದಾಗಿ ಅಲ್ಲ, ಬದಲಾಗಿ ಈಗಿನ ಹಿಂದುತ್ವ ಮಂದಿಯ ಪೂರ್ವಜರು ಮತ್ತು ಕೆಲವು ಕಾಂಗ್ರೆಸ್ಸಿಗರಿಂದಾಗಿ ಎಂಬುದನ್ನು ಈ ಸಂದರ್ಭದಲ್ಲಿ ಹಲವರು ನೆನಪಿಸಿದ್ದಾರೆ.

ಗೃಹಮಂತ್ರಿಗಳ ಈ ಮೋದಿ–ಬೆಂಬಲಿತ ಭಾಷಣದಲ್ಲಿನ ಹುಸಿ ಉಲ್ಲೇಖಗಳಿಗೆ ಇದು ಒಂದು ಉದಾಹರಣೆಯಷ್ಟೇ. ಇನ್ನೂ ಹಲವು ಅರೆಸತ್ಯಗಳು ಮತ್ತು ಸುಳ್ಳುಗಳನ್ನು ಹಲವಾರು ರಾಜಕೀಯ ವಿಶ್ಲೇಷಕರು ಬಯಲಿಗೆ ತಂದಿದ್ದಾರೆ.

ಇದಕ್ಕೆ ಮೊದಲು ಈ ವಿಷಯದಲ್ಲಿ ಪ್ರಧಾನ ಮಂತ್ರಿಗಳು ತಮ್ಮದೇ ರೀತಿಯಲ್ಲಿ ದೇಶದ ಒಳಿತಿಗಾಗಿ, 'ಸಂವಿಧಾನ–ಪ್ರೇರಿತ' ಎಂದ ಹನ್ನೊಂದು ನಿರ್ಧಾರಗಳನ್ನು ಅನುಷ್ಠಾನಗೊಳಿಸುವಂತೆ ಕರೆ ನೀಡಿದರು.

ಸಿಪಿಐ(ಎಂ) ಸಂಸದ ಬ್ರಿಟ್ಟಾಸ್ ರಾಜ್ಯಸಭೆಯಲ್ಲಿ ಹೇಳಿರುವಂತೆ, ಪ್ರಧಾನಿಗಳ ಈ ಹೊಸ 'ಹನ್ನೊಂದು ಮಂತ್ರ'ಗಳಲ್ಲಿ ಮೊದಲನೆಯದು ಎಲ್ಲರೂ ತಂತಮ್ಮ ಕರ್ತವ್ಯಗಳನ್ನು ನೆರವೇರಿಸಬೇಕು. ಇದು ಪ್ರಧಾನಮಂತ್ರಿಗಳು ಮಣಿಪುರಕ್ಕೆ ಭೇಟಿ ನೀಡುವುದರೊಂದಿಗೆ ಅವರಿಂದಲೇ ಆರಂಭವಾಗಲಿ ಎಂದು ದೇಶದ ಎಲ್ಲ ಜವಾಬ್ದಾರಿಯುತ ನಾಗರಿಕರು ಆಶಿಸುತ್ತಿದ್ದಾರೆ.

ಇದೊಂದು 'ಮಂತ್ರ' ಮಾತ್ರವಲ್ಲ, ಅವರ ಇತರ ಹತ್ತೂ ಮಂತ್ರಗಳನ್ನು ಮೊದಲು ಸ್ವತಃ ಪ್ರಧಾನಿಗಳು ಮತ್ತು ಅವರ ಪಕ್ಷ ಪಾಲಿಸಿ ಮೇಲ್ಪಂಕ್ತಿ ಹಾಕಿದರೆ ದೇಶಕ್ಕೆ ನಿಜವಾಗಿಯೂ ಒಳಿತಾಗುತ್ತದೆ ಎಂದು ಜಾನ್ ಬ್ರಿಟ್ಟಾಸ್ ಮಾತ್ರವಲ್ಲ ಹಲವಾರು ರಾಜಕೀಯ ವಿಶ್ಲೇಷಕರು ಆಶಿಸಿದ್ದಾರೆ.



ರಾಹುಲ್ ಒಬ್ಬ ಎಂಪಿಯನ್ನು ತಳ್ಳಿದರು | ರಾಹುಲ್ ನನ್ನನ್ನು ತಳ್ಳಿದರು | ಅದೊಂದು ಕೊಲೆ ಪ್ರಯತ್ನ | ಭಯೋತ್ಪಾದಕ ದಾಳಿ! ಯುಎಪಿಎ!

ಆಳುವ ಪಕ್ಷದ 'ವಿಕಾಸವಾದ'

ವ್ಯಂಗ್ಯಚಿತ್ರ ಕೃಪೆ: ಸತೀಶ ಆಚಾರ್ಯ

'ತಲ್ಲಾಟದ ರಾಜಕೀಯ'

ಗೃಹಮಂತ್ರಿಗಳ 'ಫ್ಯಾಷನ್' ಹೇಳಿಕೆಯ ನಂತರ ಈಗ 'ತಳ್ಳಾಟ'ದ ರಾಜಕೀಯ ಆರಂಭವಾದಂತಿದೆ. ಇದು ಗೃಹಮಂತ್ರಿಗಳಿಗಾಗಿರುವ 'ಮುಜುಗರ'ದಿಂದ ಗಮನವನ್ನು ಬೇರೆಡೆಗೆ ತಿರುಗಿಸಲಿಕ್ಕಾಗಿ ಎಂದು ಕೆಲವು ವೀಕ್ಷಕರು ಅಭಿಪ್ರಾಯ ಪಟ್ಟರೆ, ಇದರ ಹಿಂದೆ ಇನ್ನೂ ಗಂಭೀರವಾದ ಯೋಜನೆ ಇರುವಂತಿದೆ ಎಂದು ಇನ್ನು ಕೆಲವರು ಸಂದೇಹ ಪಡುತ್ತಿದ್ದಾರೆ.

ಏಕೆಂದರೆ 'ತಳ್ಳಾಟ'ದಿಂದ ಆರಂಭವಾದ ಆರೋಪ ಹೊಸ–ಹೊಸ ರೂಪ ಪಡೆದು ಈಗ ರಾಹುಲ್ ಗಾಂಧಿ ಬಿಜೆಪಿಯ ಒಬ್ಬ ಮಹಿಳಾ ಬುಡಕಟ್ಟು ಸಂಸದರೊಂದಿಗೆ ಅಸಭ್ಯವಾಗಿ ವರ್ತಿಸಿದ್ದಾರೆ ಎಂದು ಎಫ್‌ಐಆರ್ ದಾಖಲಿಸುವ ಮಟ್ಟವನ್ನು ತಲುಪಿದೆ. ಬಿಜೆಪಿ ಮಂತ್ರಿಗಳು ತಲೆಗೊಬ್ಬರಂತೆ ಹೇಳಿಕೆಗಳನ್ನು ನೀಡುತ್ತಿದ್ದಾರೆ, 'ಸಂತ್ರಸ್ತರು' ಬೇರೆಯೇ ಕತೆ ಹೇಳುತ್ತಿದ್ದಾರೆ. ಆದರೆ ಇದು ಹಾಡುಹಗಲೇ ಸಂಸತ್ತಿನ ಆವರಣದಲ್ಲೇ ನಡೆದಿದ್ದರೂ, ಎರಡೂ ಸದನಗಳ ಅಧ್ಯಕ್ಷರುಗಳು ಸುತ್ತ ಮುತ್ತ ಇರುವ ಸಿಸಿಟಿವಿಗಳ ಮೂಲಕ ನಿಜವಾಗಿ ನಡೆದಿರುವುದೇನು ಎಂದು ಪರಿಶೀಲಿಸುವ ಬದಲು ಮೌನವಾಗಿದ್ದಾರೆ ಏಕೆ ಎಂದು ಹಲವು ರಾಜಕೀಯ ವೀಕ್ಷಕರು ಆತಂಕದಿಂದ ಕೇಳುತ್ತಿದ್ದಾರೆ.

"ರಾಹುಲ್ ಗಾಂಧಿಯ ಮೇಲೆ ಕೊಲೆ ಪ್ರಯತ್ನದ ಆಪಾದನೆ ಹಾಕಲಾಗಿದೆ. ಈ ಆರೋಪ ನೈಜ ಎಂದು ಕಾಣುವಂತೆ ಮಾಡಲು ಆ ಇಬ್ಬರು ಬಿಜೆಪಿ ಸಂಸದರನ್ನು ಬಹಳ ಸಡಗರದೊಂದಿಗೆ ಐಸಿಯುನಲ್ಲಿ ದಾಖಲಿಸಲಾಗಿದೆ. ಪ್ರತಾಪ ಸಾರಂಗಿಯ ಹಣೆಯ ಮೇಲಿದ್ದ ಸಣ್ಣ

ಪುಟ 14 ಕ್ಕೆ

ಸಿಪಿಐ(ಎಂ) ಸಂಸದ ಡಾ.ಜಾನ್ ಬ್ರಿಟ್ಟಾಸ್ ಸಂವಿಧಾನ–75 ಚರ್ಚೆಯಲ್ಲಿ



......ಈ ಚರ್ಚೆ 'ಭೀಷಣ ಮತ್ತು ಘೋರ 65 ವರ್ಷಗಳು ಮತ್ತು 10 ಭವ್ಯ ಮತ್ತು ಬಂಗಾರದ ವರ್ಷಗಳು' ಎಂದಿರಬೇಕಿತ್ತೇನೋ......

.......ಕಳೆದ ಬಾರಿ ಮಾತಾಡುವಾಗ, ಒಂದು ಜವಹರಲಾಲ್ ನೆಹರೂ ಸಚಿವಾಲಯವನ್ನು ತೆರೆಯಿರಿ, ಅದಕ್ಕೆ ಒಬ್ಬ ಮಂತ್ರಿಯನ್ನು ನೇಮಿಸಿ, ಈ ಮಂತ್ರಿ ಜವಹರಲಾಲ್ ನೆಹರೂ ಮಾಡಿದ ಎಲ್ಲ ಕೆಟ್ಟ ಅಂಶಗಳನ್ನು ನೋಡಿಕೊಳ್ಳಲಿ ಎಂದು ಅಮಿತ್ ಷಾರವರಿಗೆ ಸೂಚಿಸಿದ್ದೆ....ಎಷ್ಟು ದಿನ ತಾನೇ ನೀವು ಜವಹರಲಾಲ್ ನೆಹರೂ ಎಂದು ಹೇಳುತ್ತ ಇರುತ್ತೀರಿ. ನಮಗೂ ನೆಹರೂರವರೊಂದಿಗೆ ಭಿನ್ನಾಭಿಪ್ರಾಯಗಳಿದ್ದವು, ಕೇರಳದಲ್ಲಿ ನಮ್ಮ ಸರಕಾರವನ್ನು ವಜಾ ಮಾಡಿದ್ದರು, ತುರ್ತುಪರಿಸ್ಥಿತಿಯ ಬಗ್ಗೆಯೂ ಭಿನ್ನಾಬಿಪ್ರಾಯಗಳಿದ್ದವು. ಆದರೆ ಈಗೇನಾಗುತ್ತಿದೆ? ಅಘೋಷಿತ ತುರ್ತು ಪರಿಸ್ಥಿತಿ ಇದೆ.......

.......ಒಂದು ವಾರದ ಕಾಲ ಸಂಸತ್ತಿನ ಕಲಾಪಗಳು ಅಸ್ತವ್ಯಸ್ತಗೊಂಡವು, ಒಬ್ಬ ಜಾರ್ಜ್ ಸೊರೊಸ್ ಕಾರಣಕ್ಕೆ. 95 ವರ್ಷದ, ತನ್ನ ಬದುಕಿನ ಕೊನೆಯ ಹಂತದಲ್ಲಿರುವ ಈ ವ್ಯಕ್ತಿ ತನ್ನ ಹೆಸರು ನಮ್ಮ ಸಂಸತ್ತನ್ನು, 140 ಕೋಟಿ ಜನರನ್ನು ಮತ್ತು 56 ಅಂಗುಲದ ಪ್ರಧಾನ ಮಂತ್ರಿಯನ್ನು ನಡುಗಿಸಿಬಿಟ್ಟಿದೆ ಎಂದು ಗಹಗಹಿಸಿ ನಗುತ್ತಿರಬಹುದು. ಇದು ನಾಚಿಕೆಗೇಡಿನ ಸಂಗತಿಯಲ್ಲವೇ? ಒಂದು ಜಂಟಿ ಸಂಸದೀಯ ಸಮಿತಿ ನೇಮಿಸಿ ಎಂದು ಹೇಳುತ್ತಿದ್ದೇನೆ, ಇದು ಸೊರೊಸ್ ಹಣ ಎಲ್ಲಿಗೆ ಬರುತ್ತಿದೆ, ಯಾರಿಂದ ಬರುತ್ತಿದೆ ಎಂದು ತನಿಖೆ ಮಾಡಬೇಕು, ನನಗನಿಸುತ್ತದೆ ಅದು ಪ್ರಧಾನ ಮಂತ್ರಿಗಳ ಕಚೇರಿಯ ಮೆಟ್ಟಿಲವರೆಗೂ ಬರಬಹುದು... ಯುಎಸ್ ಸರಕಾರ ಇದರಲ್ಲಿ ಸೇರಿಕೊಂಡಿದೆ ಎನ್ನುವುದಾದರೆ, ಎಲ್ಲ ಅಮೆರಿಕನ್ ರಾಯಭಾರಿ ಕಚೇರಿಗಳನ್ನು ಮುಚ್ಚುವ ಧೈರ್ಯ ತೋರಿಸಿ........

......ನೀವು ಹೇಳುತ್ತಿದ್ದೀರಿ ಡಾ.ಅಂಬೇಡ್ಕರರನ್ನು ಹಣಕಾಸು ಮಂತ್ರಿ ಮಾಡಲಿಲ್ಲ ಸರಿ, ಆದರೆ ನೀವೇಕೇ ಅಡ್ವಾಣಿಯವರನ್ನು ಪ್ರಧಾನ ಮಂತ್ರಿ ಮಾಡಲಿಲ್ಲ? ಬದಲಿಗೆ ಮಾರ್ಗದರ್ಶಕ ಮಂಡಲಿಗೆ ಒದ್ದು ಏರಿಸಿದಿರಿ? ...... ಇಡೀ ದೇಶ ನರೇಂದ್ರ ಮೋದಿಯವರಿಗೆ 75 ವರ್ಷವಾದಾಗ ಏನಾಗುತ್ತದೆ ಎಂದು ಕಾದು ನೋಡುತ್ತಿದೆ. ಅವರಿಗೀಗ 74 ವರ್ಷ. ಅಡ್ವಾಣಿ ಮತ್ತು ಜೋಶಿಯವರಿಗೆ ಅನ್ವಯಿಸಿದ ಸೂತ್ರವನ್ನು ಅವರು ತಮಗೂ ಅನ್ವಯಿಸುತ್ತಾರೆಯೇ?........



ಡಾಲರ್ ಮೇಲಿನ ಅವಲಂಬನೆಯಿಂದ ದೂರ ಸರಿಯ ಬಯಸುವ, ಅಂದರೆ ಅಪ–ಡಾಲರೀಕರಣದತ್ತ ವಾಲುತ್ತಿರುವ ದೇಶಗಳಿಗೆ ಅವರು ಅಮೆರಿಕಕ್ಕೆ ಮಾಡುವ ರಫ್ತುಗಳ ಮೇಲೆ ಶೇ. 100ರಷ್ಟು ಸುಂಕ ವಿಧಿಸುವ ಬೆದರಿಕೆಯನ್ನು ಡೊನಾಲ್ಡ್ ಟ್ರಂಪ್ ಹಾಕಿರುವುದು ಈ ಡಾಲರ್ ಆಧಿಪತ್ಯದ ಹಿಂದೆ ಯುಎಸ್ ಸಾಮ್ರಾಜ್ಯಶಾಹಿಯ ಬಲವಂತವು ಕೆಲಸ ಮಾಡುತ್ತಿದೆ ಎಂಬುದನ್ನು ಸುಸ್ಪಷ್ಟಗೊಳಿಸಿದೆ. ಆದರೆ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿಯ ಏಕಪಕ್ಷೀಯ ನಿರ್ಬಂಧಗಳನ್ನು, ಬಲವಂತಗಳನ್ನು ಎದುರಿಸಬೇಕಾಗುವ ದೇಶಗಳ ಸಂಖ್ಯೆ ಹೆಚ್ಚಾದಂತೆ, ಡಾಲರಿನ ಮೇಲಿನ ಅವಲಂಬನೆಯಿಂದ ದೂರ ಸರಿಯಬೇಕು ಎಂಬ ಪ್ರವೃತ್ತಿಯೂ ಬೆಳೆಯುತ್ತದೆ. ಟ್ರಂಪ್ ಒಡ್ಡಿದ ಈ ಬೆದರಿಕೆಯ ನಂತರ, ಭಾರತವೂ ಸೇರಿದಂತೆ ಹಲವಾರು ದೇಶಗಳು ಅಪ–ಡಾಲರೀಕರಣದ ಬಗ್ಗೆ ತಮ್ಮ ನಿರಾಸಕ್ತಿಯನ್ನು ವ್ಯಕ್ತಪಡಿಸಿವೆ. ಆದರೂ, ಸಾಮ್ರಾಜ್ಯಶಾಹಿಯು ಒಂದು ಗಂಭೀರ ಸವಾಲನ್ನು ಎದುರಿಸುತ್ತಿದೆ ಎಂಬುದರ ಬಗ್ಗೆಯಂತೂ ಸಂದೇಹವೇ ಇಲ್ಲ.

ಪ್ರೊ.ಪ್ರಭಾತ್ ಪಟ್ನಾಯಕ್ ಅನು: ಕೆ.ಎಂ.ನಾಗರಾಜ್

ಡಾಲರ್ ಆಧಿಪತ್ಯಕ್ಕೆ ಬರುತ್ತಿವೆ ಸವಾಲುಗಳು



ಅಂತಾರಾಷ್ಟ್ರೀಯ ಹಣಕಾಸು ಮತ್ತು ವಿತ್ತೀಯ ವ್ಯವಸ್ಥೆಯು, ದೇಶ ದೇಶಗಳ ನಡುವೆ ನಡೆಯುವ ವ್ಯಾಪಾರಗಳಿಗೆ ಅನುಕೂಲಕರವಾದ ಒಂದು ಪಾವತಿ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ, ಭಾಗವಹಿಸುವ ಎಲ್ಲ ದೇಶಗಳ ಹಿತಾಸಕ್ತಿಗಳನ್ನು ಉತ್ತೇಜಿಸುವ ಒಂದು ಸಾಧನವಾಗಿದೆ ಎಂಬ ಒಂದು ಅಭಿಪ್ರಾಯವಿದೆ. ಆದರೆ ವಾಸ್ತವ ಪರಿಸ್ಥಿತಿಯು ಸಂಪೂರ್ಣವಾಗಿ ವಿಭಿನ್ನವಾಗಿದೆ: ಪಾಶ್ಚಾತ್ಯ ಸಾಮ್ರಾಜ್ಯಶಾಹಿಯ ಪ್ರಾಬಲ್ಯದಿಂದ ಸ್ಥಾಪಿಸಲ್ಪಟ್ಟಿರುವ ಈ ಅಂತಾರಾಷ್ಟ್ರೀಯ ವ್ಯವಸ್ಥೆಯು ಪ್ರತಿಯಾಗಿ ಸಾಮ್ರಾಜ್ಯಶಾಹಿಯ ಈ ಪ್ರಾಬಲ್ಯವನ್ನು ಪೋಷಿಸುತ್ತದೆ. ಈ ಅಂತಾರಾಷ್ಟ್ರೀಯ ವ್ಯವಸ್ಥೆಯಲ್ಲಿ ಯುಎಸ್ ಡಾಲರ್ ಒಂದು ಬಾರುಕೋಲು ಆಗಿರುವುದರಿಂದ, ಅದು ಪಾಶ್ಚಾತ್ಯ ಸಾಮ್ರಾಜ್ಯಶಾಹಿಯನ್ನು ಪೋಷಿಸುತ್ತದೆ ಮತ್ತು ಪ್ರತಿಯಾಗಿ ಪಾಶ್ಚಾತ್ಯ ಸಾಮ್ರಾಜ್ಯಶಾಹಿಯು ಇಂತಹ ಅಂತಾರಾಷ್ಟ್ರೀಯ ಅರ್ಥವ್ಯವಸ್ಥೆಯನ್ನು ಪೋಷಿಸುತ್ತದೆ. ಹಾಗಾಗಿ ಡಾಲರ್‌ನ ಪ್ರಾಬಲ್ಯವು ನಿರಂತರವಾಗಿದೆ ಮತ್ತು ಈ ಪ್ರಾಬಲ್ಯವು ವ್ಯಾಪಾರದಲ್ಲಿ ಭಾಗವಹಿಸುವ ದೇಶಗಳ ಪರಸ್ಪರ ಅನುಕೂಲಕರ ವ್ಯಾಪಾರದಲ್ಲಿ ಒಂದು ಅಡ್ಡಿಯೂ ಹೌದು ಎಂದು ಹೇಳಬಹುದು.

ಈ ಅಂಶವನ್ನು ಒಂದು ಉದಾಹರಣೆಯ ಮೂಲಕ ಸ್ಪಷ್ಟಪಡಿಸಬಹುದು. 'ದೇಶ 1' ಕ್ಕೆ 'ದೇಶ 2' ಹೊಂದಿರುವ 'ಸ2' ಎಂಬ ಸರಕು ಬೇಕು ಮತ್ತು 'ದೇಶ 2'ಕ್ಕೆ 'ದೇಶ 1' ಹೊಂದಿರುವ 'ಸ 1" ಎಂಬ ಸರಕು ಬೇಕು ಎಂದು ಭಾವಿಸೋಣ. ಈಗಿರುವ ಅಂತರ್ರಾಷ್ಟ್ರೀಯ ವ್ಯವಸ್ಥೆಯಲ್ಲಿ ಇವೆರಡು ದೇಶಗಳು ಈ ಸರಕುಗಳನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವುದಿಲ್ಲ. ಏಕೆಂದರೆ, ಇಂತಹ ಒಂದು ವಿನಿಮಯಕ್ಕಾಗಿ ಪ್ರತಿಯೊಂದು ದೇಶವೂ ಬೇರೊಂದು ದೇಶವು ಹೊಂದಿರುವ ಸರಕುಗಳನ್ನು ಖರೀದಿಸುವ ಮೊದಲು ತನ್ನ ಬಳಿ ಸಾಕಷ್ಟು ಡಾಲರ್‌ಗಳನ್ನು ಸಂಗ್ರಹಿಸಿ ಇಟ್ಟುಕೊಂಡಿರಬೇಕು. ಪ್ರತಿಯೊಂದು ದೇಶವೂ ಸಾಕಷ್ಟು ಡಾಲರ್‌ಗಳ ಸಂಗ್ರಹವನ್ನು ಆರಂಭಿಕವಾಗಿ ಹೊಂದಿಲ್ಲದಿದ್ದರೆ, ಈ ವ್ಯಾಪಾರವೇ ಸಂಭವಿಸುವುದಿಲ್ಲ. ವಿಷಯವನ್ನು ಬೇರೆ ರೀತಿಯಲ್ಲಿ ಹೇಳುವುದಾದರೆ, ಡಾಲರ್ ಕರೆನ್ಸಿಯು, ಅಂತಾರಾಷ್ಟ್ರೀಯ ವ್ಯಾಪಾರ–ವಹಿವಾಟುಗಳಲ್ಲಿ ಹಣ ಚಲಾವಣೆಯ ಒಂದು ಮಾಧ್ಯಮವಾಗಿದೆ. ಆದ್ದರಿಂದ, ಡಾಲರ್‌ಗಳ ಕೊರತೆಯನ್ನು ಅನುಭವಿಸುವ ದೇಶಗಳ ನಡುವೆ ಪರಸ್ಪರ ವ್ಯಾಪಾರ–ವಹಿವಾಟುಗಳು ಇರುವುದಿಲ್ಲ. ಡಾಲರ್‌ಗಳ ಕೊರತೆಯಿಂದ ಸದಾ ಪೀಡಿತವಾಗಿರುವ ಮೂರನೆಯ ಜಗತ್ತಿನ ದೇಶಗಳ ನಡುವಿನ ವ್ಯಾಪಾರದ ವಿಷಯದಲ್ಲಿ ಇದು ವಿಶೇಷವಾಗಿ ಸತ್ಯ. ಈ ದೇಶಗಳು ಸ್ವಂತ ತಮ್ಮದೇ ಕರೆನ್ಸಿಗಳ ಮೂಲಕವೇ ತಮ್ಮ ವ್ಯಾಪಾರ–ವಹಿವಾಟುಗಳನ್ನು ಕೈಗೊಳ್ಳುವುದು ಸಾಧ್ಯವಿದ್ದರೆ, ಅವರು ತಮ್ಮ ಪರಸ್ಪರ ವ್ಯಾಪಾರವನ್ನು ವಿಸ್ತರಿಸಿಕೊಳ್ಳಬಹುದು. ಅಂದರೆ, ಅವರು ಅಪ–ಡಾಲರೀಕರಣ (de-dollarise) ಪ್ರಕ್ರಿಯೆಯನ್ನು ಕೈಗೊಳ್ಳಬೇಕಾಗುತ್ತದೆ. ಅಪ–ಡಾಲರೀಕರಣ ಎಂಬ ಪದವು, ಹಣ ಚಲಾವಣೆಯ ಒಂದು ಮಾಧ್ಯಮವಾಗಿ, ವ್ಯಾಪಾರ–ವಹಿವಾಟುಗಳನ್ನು ಲೆಕ್ಕ ಹಾಕುವ ಒಂದು ಘಟಕವಾಗಿ ಅಥವಾ ಅಂತಾರಾಷ್ಟ್ರೀಯ ವ್ಯಾಪಾರ–ವಹಿವಾಟುಗಳಿಗಾಗಿ ಯುಎಸ್ ಡಾಲರ್‌ಗಳ ಮೇಲಿನ ಅವಲಂಬನೆಯನ್ನು ಕಡಿಮೆಮಾಡಿಕೊಳ್ಳುವ ಕ್ರಮವನ್ನು ಸೂಚಿಸುತ್ತದೆ.



ವಿಶ್ವ ಅರ್ಥವ್ಯವಸ್ಥೆಯಲ್ಲಿ ತನ್ನ ಕರೆನ್ಸಿಯು ನಿರ್ಣಾಯಕವಾಗಿರುವುದರಿಂದ ಮತ್ತು ಡಾಲರನ್ನು ಸಾಮಾನ್ಯವಾಗಿ "ಚಿನ್ನಕ್ಕೆಸಮ"ಎಂದು ಪರಿಗಣಿಸಲಾಗಿರುವುದರಿಂದ, ಸ್ವಾಭಾವಿಕವಾಗಿಯೇ ಅಪ–ಡಾಲರೀಕರಣವನ್ನು ಯುಎಸ್ ವಿರೋಧಿಸುತ್ತದೆ. ವಿಶ್ವದಲ್ಲಿ ಡಾಲರ್ ಹೊಂದಿರುವ ಸ್ಥಾನ–ಮಾನವು ಅದು ಒಂದು ಮುಕ್ತ ಮತ್ತು ಅಕ್ಷಯ ಚಿನ್ನದ ಗಣಿಯ ಮೇಲೆ ಕುಳಿತಿರುವಷ್ಟು ಅಪಾರ ಪ್ರಯೋಜನವನ್ನು ಯುಎಸ್‌ಗೆ ಒದಗಿಸುತ್ತದೆ. ಅದು ಇತರ ದೇಶಗಳಿಂದ ಸಂಪನ್ಮೂಲಗಳನ್ನು ಕೊಳ್ಳಬಹುದು. ಅದು ಅವರ ಉದ್ದಿಮೆಗಳನ್ನು ಸ್ವಾಧೀನಪಡಿಸಿಕೊಳ್ಳಬಹುದು. ವಿದೇಶಗಳಲ್ಲಿ ತನಗೆ ತೋಚಿದಷ್ಟು ಹೂಡಿಕೆ ಮಾಡಬಹುದು ಮತ್ತು ತನ್ನದೇ ಆದ ಚಾಲ್ತಿ ಖಾತೆ ಕೊರತೆಗಳಿಗೆ ಹಣ ಒದಗಿಸಿಕೊಳ್ಳಬಹುದು. ಇದೆಲ್ಲವನ್ನೂ ಅದು ಸುಮ್ಮನೇ ಹೆಚ್ಚು ಡಾಲರ್‌ಗಳನ್ನು ಮುದ್ರಿಸುವ ಮೂಲಕ ಸಾಧಿಸಿಕೊಳ್ಳಬಹುದು.

ಅಪ–ಡಾಲರೀಕರಣದ ಪ್ರವೃತ್ತಿ

ಇವೆಲ್ಲದರ ಜೊತೆಗೆ ಖಾತ್ರಿ ಮೌಲ್ಯದೊಂದಿಗೆ ಮಿತಿಯೇ ಇಲ್ಲದ ಪ್ರಮಾಣದ ಅಂತಾರಾಷ್ಟ್ರೀಯ ಖರೀದಿ ಸಾಮರ್ಥ್ಯವನ್ನು ಯುಎಸ್ ಹೊಂದಿರುವುದರಿಂದ, ತನ್ನ ಪ್ರಾಬಲ್ಯವನ್ನು ಒಪ್ಪಿಕೊಳ್ಳುವಂತೆ ಯುಎಸ್ ಡಾಲರ್, ದೇಶ ದೇಶಗಳ ಕೈ ತಿರುಚಬಹುದು. ತಾನು ಒಲವು ತೋರುವ ದೇಶಗಳಿಗೆ ಡಾಲರ್‌ಗಳು ಸುಲಭವಾಗಿ ಲಭ್ಯವಾಗುವಂತೆ ನೋಡಿಕೊಳ್ಳಬಹುದು. ಅಂತಹ ಮೀಸಲು ಡಾಲರ್‌ಗಳನ್ನು ಪಶ್ಚಿಮ ದೇಶಗಳ ಬ್ಯಾಂಕುಗಳಲ್ಲಿ ಸಾಮಾನ್ಯವಾಗಿ ಠೇವಣಿ ಇಟ್ಟಿರಲಾಗುತ್ತದೆ. ಪರ್ಯಾಯವಾಗಿ, ಅದು ಶಿಕ್ಷಿಸಬಯಸುವ ನಿರ್ದಿಷ್ಟ ದೇಶಗಳ ಡಾಲರ್ ಮೀಸಲುಗಳನ್ನು ಯುಎಸ್ ವಶಪಡಿಸಿಕೊಳ್ಳಬಹುದು. ಇರಾನ್‌ನಿಂದ ಹಿಡಿದು ರಷ್ಯಾದವರೆಗೆ ಹಲವಾರು ದೇಶಗಳಿಗೆ ಅಂತಹ ಒಂದು ಶಿಕ್ಷೆಯನ್ನು ನೀಡಲಾಗಿದೆ. ಇಂತಹ ವಶಪಡಿಸಿಕೊಳ್ಳುವ ಶಿಕ್ಷೆಯ ಪ್ರಕರಣಗಳು ಇತ್ತೀಚಿನ ವರ್ಷಗಳಲ್ಲಿ ಹೆಚ್ಚುತ್ತಿರುವ ಸಂದರ್ಭದಲ್ಲಿ ಡಾಲರ್‌ಗಳ ಕೊರತೆಯಿಂದ ಬಲಹೀನಗೊಂಡಿರುವ ಮೂರನೇ ಜಗತ್ತಿನ ದೇಶಗಳು ಅಪ–ಡಾಲರೀಕರಣ ಪ್ರಕ್ರಿಯೆಯನ್ನು ಕೈಗೊಳ್ಳುವ, ಅಂದರೆ, ಯುಎಸ್ ಡಾಲರ್‌ಗಳ ಮೀಸಲು ಸಂಗ್ರಹಗಳನ್ನು ಇಟ್ಟುಕೊಳ್ಳುವ ಅವಶ್ಯಕತೆಯನ್ನು ಕಡಿಮೆಮಾಡಿಕೊಳ್ಳುವ ಕ್ರಮವನ್ನು ಕೈಗೊಳ್ಳುವ ಪ್ರವೃತ್ತಿಯನ್ನು ಸಾಮಾನ್ಯವಾಗಿ ಹೊಂದಿವೆ.

ಈ ಹಿಂದೆ, ದಕ್ಷಿಣ ಆಫ್ರಿಕಾದ ವಿರುದ್ಧ ವಿಶ್ವ ಸಂಸ್ಥೆಯು, ಅದು ವರ್ಣಭೇದ ನೀತಿಯನ್ನು ಅನುಸರಿಸುತ್ತಿತ್ತು ಎಂಬ ಕಾರಣಕ್ಕಾಗಿ ಕೆಲವು ನಿರ್ಬಂಧಗಳನ್ನು ಹೇರಿತ್ತು. ಆದರೆ, ಈಗ ವಿಶ್ವದ ಮೂರನೇ ಒಂದು ಭಾಗದಷ್ಟು ದೇಶಗಳು ಏಕಪಕ್ಷೀಯ ಪಾಶ್ಚಿಮಾತ್ಯ ನಿರ್ಬಂಧಗಳಿಗೆ ಒಳಪಟ್ಟಿವೆ, ಅಂದರೆ, ವಿಶ್ವಸಂಸ್ಥೆಯ ಬೆಂಬಲವನ್ನು ಹೊಂದಿರದ ನಿರ್ಬಂಧಗಳಿಗೆ ಒಳಪಟ್ಟಿವೆ. ಇವು ಯಾವುದೇ ಅಂತರರಾಷ್ಟ್ರೀಯ ತತ್ವ ಅಥವ ನೀತಿಗಳ ಉಲ್ಲಂಘನೆಯಾಗಿದೆ ಎಂಬ ಕಾರಣಕ್ಕಾಗಿ ವಿಧಿಸಿದ ನಿರ್ಬಂಧಗಳಲ್ಲ, ಇಂತಹ ಸನ್ನಿವೇಶದಲ್ಲಿ ಜಾಗತಿಕ ದಕ್ಷಿಣದ ದೇಶಗಳಲ್ಲಿ ಮತ್ತು ಇಂತಹ ನಿರ್ಬಂಧಗಳಿಗೆ ಗುರಿಯಾದ ದೇಶಗಳಲ್ಲಿ ಅಪ–ಡಾಲರೀಕರಣ ಪ್ರಕ್ರಿಯೆಯನ್ನು ಕೈಗೊಳ್ಳುವ ಬಯಕೆಯು ಬಲಗೊಳ್ಳುವುದು ಸಹಜವೇ. ಈ ರೀತಿಯ ಒಂದು ಆಶಯವು ಇತ್ತೀಚೆಗೆ ಜರುಗಿದ ಬ್ರಿಕ್ಸ್ ದೇಶಗಳ ಕಜಾನ್ ಶೃಂಗಸಭೆಯಲ್ಲಿ ವ್ಯಕ್ತವಾಗಿದೆ.

ಈ ರೀತಿಯಲ್ಲಿ ಅಪ–ಡಾಲರೀಕರಣ ಪ್ರಕ್ರಿಯೆಯನ್ನು ಕೈಗೊಳ್ಳುವ ಬಯಕೆಯನ್ನು ಬಲಪಡಿಸುವಲ್ಲಿ ಯುಎಸ್ ನೇತೃತ್ವದ ಪಾಶ್ಚಾತ್ಯ ನಿರ್ಬಂಧಗಳು ವಹಿಸಿದ ಪಾತ್ರವನ್ನು ಸ್ವತಃ ಯುಎಸ್ ಆಡಳಿತವೇ ಗುರುತಿಸಿದೆ. ಜುಲೈನಲ್ಲಿ ಸದನದ ಆರ್ಥಿಕ ಸೇವೆಗಳ ಸಮಿತಿಯೊಂದಿಗೆ ಮಾತನಾಡಿದ ಯುಎಸ್ ಖಜಾನೆ ಕಾರ್ಯದರ್ಶಿ ಜಾನೆಟ್ ಯೆಲೆನ್, ಯುಎಸ್ ಹೇರಿದ ಆರ್ಥಿಕ ನಿರ್ಬಂಧಗಳು ಬ್ರಿಕ್ಸ್ ದೇಶಗಳು ಅಪ–ಡಾಲರೀಕರಣ ಪ್ರಕ್ರಿಯೆಯನ್ನು ಪ್ರಾರಂಭಿಸಲು ಪ್ರಯತ್ನಿಸಲು ಕಾರಣವಾಗಿವೆ ಎಂದು ಹೇಳಿದರು. "ಯುಎಸ್ ಎಷ್ಟು ಹೆಚ್ಚು ನಿರ್ಬಂಧಗಳನ್ನು ಹೇರುತ್ತದೆಯೋ, ಅಷ್ಟು ಹೆಚ್ಚು ದೇಶಗಳು (ಬ್ರಿಕ್ಸ್) ಯುಎಸ್ ಡಾಲರ್ ಅನ್ನು ಒಳಗೊಂಡಿರದ ಹಣಕಾಸು ವಹಿವಾಟು ವಿಧಾನಗಳನ್ನು ಹುಡುಕುತ್ತವೆ" ಎಂಬುದನ್ನು ಅವರು ಒಪ್ಪಿಕೊಂಡರು. ಹೀಗೆ ತಾನು ಎಳೆದ ಗೆರೆಯನ್ನು ದಾಟದಂತೆ ದೇಶ ದೇಶಗಳನ್ನು ಬೆದರಿಸಲು ಡಾಲರ್ ಹೊಂದಿರುವ ಪ್ರಾಬಲ್ಯವನ್ನು ಯುಎಸ್ ಬಳಸಿಕೊಳ್ಳುತ್ತದೆ ಎಂಬುದನ್ನು ಮತ್ತು ಹೀಗೆ ಬೆದರಿಸಲ್ಪಟ್ಟ ದೇಶಗಳ ಸಂಖ್ಯೆಯು ಹೆಚ್ಚುತ್ತಿದೆ ಎಂಬುದನ್ನು ಅಮೆರಿಕನ್ ಆಡಳಿತ ಒಪ್ಪಿಕೊಳ್ಳುತ್ತಿದೆ ಎಂಬ ಅಂಶವನ್ನು ಯೆಲೆನ್ ಅವರ ಹೇಳಿಕೆಯು ಸೂಚಿಸುತ್ತದೆ.

ಏಕಪಕ್ಷೀಯ ನಿರ್ಬಂಧಗಳನ್ನು ಹೇರುವ ಮೂಲಕ ಪ್ರಾಬಲ್ಯವನ್ನು ಚಲಾಯಿಸುವಲ್ಲಿ ಒಂದು ನಿರ್ದಿಷ್ಟ ದ್ವಂದ್ವವಿದೆ. ಸಾಮ್ರಾಜ್ಯಶಾಹಿಯು ಹೇಳಿದ ಮಾತನ್ನು ಕೇಳದ ಒಂದು ಅಥವಾ ಎರಡು ಹಠಮಾರಿ ದೇಶಗಳ ಮೇಲೆ ನಿರ್ಬಂಧಗಳನ್ನು ವಿಧಿಸಿದರೆ, ಸಾಮ್ರಾಜ್ಯಶಾಹಿಯ ಇಡೀ ಸಂರಚನೆಗೆ ಯಾವ ಧಕ್ಕೆಯನ್ನೂ ಉಂಟುಮಾಡದ ರೀತಿಯಲ್ಲಿ ನಿರ್ಬಂಧಗಳು ಪರಿಣಾಮಕಾರಿಯಾಗಬಹುದು. ಆದರೆ, ನಿರ್ಬಂಧಗಳನ್ನು ಹಲವಾರು ದೇಶಗಳ ಮೇಲೆ ಹೇರಿದರೆ ಈ ಸಂರಚನೆಯೇ ಅಪಾಯಕ್ಕೆ ಒಳಗಾಗುತ್ತದೆ. ನವ ಉದಾರವಾದದ ಅಡಿಯಲ್ಲಿ ಎಷ್ಟೊಂದು ದೇಶಗಳನ್ನು ಸಂಕಷ್ಟಗಳಿಗೆ ಒಳಪಡಿಸಲಾಗಿದೆ ಎಂಬುದನ್ನು ಗಮನಿಸಿದರೆ, ಕಾಲಾನಂತರದಲ್ಲಿ ಅವಿಧೇಯ ದೇಶಗಳ ಸಂಖ್ಯೆಯು ಹೆಚ್ಚುವ ಪ್ರವೃತ್ತಿ ಕಂಡುಬರುತ್ತದೆ. ನಿರ್ಬಂಧಗಳಿಗೆ ಒಳಗಾದ ದೇಶಗಳ ಸಂಖ್ಯೆಯು ಹೆಚ್ಚುತ್ತಾ ಹೋದಂತೆಯೇ, ಅಪ–ಡಾಲರೀಕರಣದ ಪ್ರವೃತ್ತಿಯೂ ಸಹ ಅಗತ್ಯವಾಗಿ ಬಲಗೊಳ್ಳುತ್ತಲೇ ಹೋಗುತ್ತದೆ. ಡಾಲರ್‌ನ ಪ್ರಾಬಲ್ಯದ ಹಿಂದೆ ಸಂಪೂರ್ಣ ದಬ್ಬಾಳಿಕೆ ಇದೆ ಮತ್ತು ಈ ಪ್ರಾಬಲ್ಯವು ಸಾಮ್ರಾಜ್ಯಶಾಹಿಯ ಒತ್ತಡವನ್ನು ಆಧರಿಸಿದೆ ಎಂಬ ಅಂಶವು ಸ್ಪಷ್ಟವಾಗಿ ಗೋಚರಿಸುತ್ತಿರುವ ಸಮಯದಲ್ಲಿ ಡಾಲರ್ ವ್ಯವಸ್ಥೆಯು ಎಲ್ಲ ದೇಶಗಳಿಗೂ ಹಿತಕಾರಿ ಎಂಬ ಉದಾರವಾದಿ ದಾವೆ ಬರೀ ಪೊಳ್ಳು ಎಂಬುದನ್ನು ಬಯಲಿಗೆ ತರುತ್ತಿದೆ.

ಟ್ರಂಪ್ ಬೆದರಿಕೆ

ಡಾಲರ್ ಆಧಿಪತ್ಯದ ಹಿಂದಿರುವ ಒಂದು ನಿಕಟತಮ ಕಾರಣವನ್ನು 1970ರ ಪುಟ 14 ಕ್ಕೆ

ಡಾಲರ್ ಆಧಿಪತ್ಯಕ್ಕೆ ಬರುತ್ತಿವೆ.... ಪುಟ 13 ರಿಂದ

ದಶಕದಲ್ಲಿ ಯುಎಸ್ ಮತ್ತು ತೈಲ ಉತ್ಪಾದಿಸುವ ದೇಶಗಳ ನಡುವೆ ಆದ ಒಪ್ಪಂದದಲ್ಲಿ ಕಾಣಬಹುದು. ಸೌದಿ ಅರೇಬಿಯಾದ ಮಧ್ಯಸ್ಥಿಕೆಯ ಮೂಲಕ ನಡೆದ ಈ ಒಪ್ಪಂದ ಡಾಲರನ್ನು ತೈಲ ಬೆಲೆಗಳನ್ನು ವ್ಯಕ್ತಪಡಿಸುವ ಮತ್ತು ತೈಲ ವ್ಯಾಪಾರವನ್ನು ಕೈಗೊಳ್ಳುವ ಮಾಧ್ಯಮವಾಗಿ ಬಳಸಲಾಗುವುದು ಎಂದಿತ್ತು. ತೈಲವು ಹೊಂದಿರುವ ಪ್ರಾಮುಖ್ಯತೆ ಡಾಲರ್‌ಗೆ ಒಂದು ಬಹು ದೊಡ್ಡ ಉತ್ತೇಜನವನ್ನು ಕೊಟ್ಟಿತು. ಒಂದು ನಿಜಸಂಗತಿಯೆಂದರೆ, ಇತ್ತೀಚೆಗೆ ರಷ್ಯಾದ ನಾಣ್ಯ ರೂಬಲನ್ನು ನಾಶಮಾಡುವ ಉದ್ದೇಶದಿಂದ ಪಾಶ್ಚಾತ್ಯ ದೇಶಗಳು ರಷ್ಯಾದ ವಿರುದ್ಧ ನಿರ್ಬಂಧಗಳನ್ನು ವಿಧಿಸಿದಾಗ, ತನ್ನ ತೈಲ ಮತ್ತು ಅನಿಲ ರಫ್ತಿನ ಬಾಬ್ತು ಮಾಡುವ ಎಲ್ಲ ಪಾವತಿಗಳನ್ನೂ ರೂಬಲ್‌ನಲ್ಲೇ ಮಾಡಬೇಕೆಂದು ರಷ್ಯಾ ಒತ್ತಾಯಿಸಿದ್ದರಿಂದಾಗಿ, ರಷ್ಯಾಕ್ಕೆ ತನ್ನ ಕರೆನ್ಸಿಯನ್ನು ರಕ್ಷಿಸಿಕೊಳ್ಳುವುದು ಸಾಧ್ಯವಾಯಿತು.

ಆದರೆ ಈಗ, ಡಾಲರ್ ಆಧಿಪತ್ಯವನ್ನು ಮುಂದುವರೆಸಿಕೊಂಡು ಹೋಗಲು ತೈಲ ರಫ್ತುದಾರರೊಂದಿಗೆ 1970ರ ದಶಕದಲ್ಲಿ ಮಾಡಿಕೊಂಡಂತಹ ಒಪ್ಪಂದವು ಈಗ ಸಾಕಾಗುವುದಿಲ್ಲ ಎಂದನಿಸುತ್ತಿದೆ. ಅಪ-ಡಾಲರೀಕರಣದ ಸಂಬಂಧವಾಗಿ ಕೇಳಿಬರುತ್ತಿದ್ದ ಎಲ್ಲಾ ಮಾತುಗಳನ್ನೂ ಅಸಂಬದ್ಧವೆಂದು ಈ ಹಿಂದೆ ತಳ್ಳಿಹಾಕುತ್ತಿದ್ದ ಜಾನೆಟ್ ಯೆಲೆನ್ ಕೂಡ ಈಗ ಅದನ್ನು ಹೆಚ್ಚು ಗಂಭೀರವಾಗಿ ಪರಿಗಣಿಸುತ್ತಾರೆ. ಈ ಸನ್ನಿವೇಶದಲ್ಲಿ, ಡಾಲರ್‌ನಿಂದ ದೂರ ಸರಿಯ ಬಯಸುವ ದೇಶಗಳಿಗೆ ಅವರು ಅಮೆರಿಕಕ್ಕೆ ಮಾಡುವ ರಫ್ತುಗಳ ಮೇಲೆ ಶೇ. 100ರಷ್ಟು ಸುಂಕ ವಿಧಿಸುವ ಬೆದರಿಕೆಯನ್ನು ಡೊನಾಲ್ಡ್ ಟ್ರಂಪ್ ಹಾಕಿರುವುದು ಆಶ್ಚರ್ಯವೇನಲ್ಲ. ಟ್ರಂಪ್ ಅವರ ಈ ಬೆದರಿಕೆಯು ಡಾಲರ್ ಆಧಿಪತ್ಯದ ಹಿಂದೆ ಯುಎಸ್ ಸಾಮ್ರಾಜ್ಯಶಾಹಿಯ ಬಲವಂತವು ಕೆಲಸ ಮಾಡುತ್ತಿದೆ ಎಂಬುದನ್ನು ಸುಸ್ಪಷ್ಟಗೊಳಿಸಿದೆ.

ಅಂತಹ ಒಂದು ಬಲವಂತವು ಪರಿಣಾಮಕಾರಿಯಾಗಲೂ ಬಹುದು. ಏಕೆಂದರೆ, ಯಾವುದೇ ಅಪ-ಡಾಲರೀಕರಣವು ಒಂದು ಪ್ರಕ್ರಿಯೆಯಾಗಿರುವುದರಿಂದ, ಅದು ಸಾಕಷ್ಟು ಸಮಯ ತೆಗೆದುಕೊಳ್ಳುತ್ತದೆ. ಅಪ-ಡಾಲರೀಕರಣವನ್ನು ಕೈಗೊಳ್ಳುವ ದೇಶಗಳು ಈ ಮಧ್ಯೆ ಯುಎಸ್‌ಗೆ ತಮ್ಮ ರಫ್ತುಗಳನ್ನು ಮೊಟಕುಗೊಳಿಸಿದರೆ, ಅವು ಡಾಲರ್‌ಗಳ ತೀವ್ರ ಕೊರತೆಯನ್ನು ಎದುರಿಸುತ್ತವೆ. ಅದು ಅವರ ಜೀವನವನ್ನು ಅತ್ಯಂತ ಕಷ್ಟಕರವಾಗಿಸುತ್ತದೆ. ಡಾಲರ್-ಅಲ್ಲದ ಪಾವತಿಗಳ ಮೂಲಕ ತಮ್ಮ ಆಮದು ಅವಶ್ಯಕತೆಗಳನ್ನು ಅವರು ಹಾಗೂ ಹೀಗೂ ನಿರ್ವಹಿಸಿಕೊಳ್ಳಬಹುದಾದರೂ, ಐಎಂಎಫ್ ಅಥವಾ ವಿಶ್ವ ಬ್ಯಾಂಕ್ ಅಥವಾ ಪಾಶ್ಚಾತ್ಯ ಹಣಕಾಸು ಸಂಸ್ಥೆಗಳೊಂದಿಗೆ ಡಾಲರ್ ಕರೆನ್ಸಿಯ ಬಾಹ್ಯ ಸಾಲಗಳನ್ನು ಅವರು ಒಂದು ವೇಳೆ ಹೊಂದಿದ್ದರೆ, ಆನಂತರ ಅವುಗಳನ್ನು ತೀರಿಸುವುದು ಅಸಾಧ್ಯವಾಗುತ್ತದೆ. ಹಾಗಾಗಿ ಟ್ರಂಪ್ ಅವರ ಈ ಬೆದರಿಕೆಯು ಒಂದು ಗಂಭೀರ ಸ್ವರೂಪವನ್ನು ಪಡೆಯುತ್ತದೆ. ಯುಎಸ್ ಸಾಮ್ರಾಜ್ಯಶಾಹಿಯ ಪ್ರಕ್ರಿಯೆಯನ್ನು ಉದಾರವಾದಿ ವಟಗುಟ್ಟುವಿಕೆಯು ಸಾಮಾನ್ಯವಾಗಿ ಮರೆಮಾಚುತ್ತದೆಯಾದರೂ, ಈ ಬೆದರಿಕೆಯನ್ನು ಒಡ್ಡುವ ಮೂಲಕ ಟ್ರಂಪ್ ನಿರ್ಲಜ್ಜವಾಗಿ ಅದನ್ನು ಬಹಿರಂಗಪಡಿಸಿರುವುದು ಗಮನಾರ್ಹವಾಗಿದೆ.

ಸವಾಲಿನ ಗಂಭೀರತೆಗೆ ಸಾಕ್ಷಿ

ವಿಪರ್ಯಾಸವೆಂದರೆ, ಅಲ್ಪಾವಧಿಯಲ್ಲಿ ಪರಿಣಾಮಕಾರಿ ಆಗಬಹುದಾದ ಈ ಬೆದರಿಕೆಯೇ ಅಪ-ಡಾಲರೀಕರಣದ ಅಗತ್ಯವಾಗಿದೆ ಮತ್ತು ಡಾಲರ್ ಆಧಿಪತ್ಯವು ಯುಎಸ್‌ಗೆ ಗುಲಾಮರಾಗುವ ಪರಿಸ್ಥಿತಿಯನ್ನು ಉಂಟುಮಾಡುತ್ತದೆ ಎಂದು ಹೆಚ್ಚೆಚ್ಚು ದೇಶಗಳನ್ನು ಜಾಗೃತಗೊಳಿಸುತ್ತದೆ. ಯಾವುದೇ ಒಂದು ಅರ್ಥಪೂರ್ಣ ಅಪ-ಡಾಲರೀಕರಣವು ಸಂಭವಿಸುವ ಮೊದಲು ಇನ್ನೂ ಹೆಚ್ಚು ದೂರವನ್ನು ಕ್ರಮಿಸಬೇಕಾಗುತ್ತದೆ, ಮತ್ತು ಕಜಾನ್ ಶೃಂಗಸಭೆಗೆ ಈ ಸತ್ಯ ಚೆನ್ನಾಗಿ ತಿಳಿದಿತ್ತು. ಟ್ರಂಪ್ ಒಡ್ಡಿದ ಈ ಬೆದರಿಕೆಯ ನಂತರ, ಭಾರತವೂ ಸೇರಿದಂತೆ ಹಲವಾರು ದೇಶಗಳು ಅಪ-ಡಾಲರೀಕರಣದ ಬಗ್ಗೆ ತಮ್ಮ ನಿರಾಸಕ್ತಿಯನ್ನು ವ್ಯಕ್ತಪಡಿಸಿವೆ. ಅದು ಅಮೆರಿಕದೊಂದಿಗಿನ ತಮ್ಮ ಸಂಬಂಧವನ್ನು ಉಳಿಸಿಕೊಳ್ಳುವ ತಕ್ಷಣದ ಕ್ರಮವೇ ಆಗಿದ್ದರೂ, ಸಾಮ್ರಾಜ್ಯಶಾಹಿಯು ಒಂದು ಗಂಭೀರ ಸವಾಲನ್ನು ಎದುರಿಸುತ್ತಿದೆ ಎಂಬುದರ ಬಗ್ಗೆ ಸಂದೇಹವೇ ಇಲ್ಲ. ಉಕ್ರೇನ್ ಮತ್ತು ಗಾಜಾದ ವಿಷಯದಲ್ಲಿ ಗೋಚರಿಸುವ ಸಾಮ್ರಾಜ್ಯಶಾಹಿ ಶಕ್ತಿಗಳ ನಡುವಿನ ಐಕ್ಯತೆ ಮತ್ತು ಎಲ್ಲ ಸಾಮ್ರಾಜ್ಯಶಾಹಿ ದೇಶಗಳ ಸೋಶಲ್ ಡೆಮಾಕ್ರೇಟರು ಸಾಮ್ರಾಜ್ಯಶಾಹಿಯ ಬೆಂಬಲಕ್ಕೆ ನಿಂತಿರುವುದು ಸಾಮ್ರಾಜ್ಯಶಾಹಿಗೆ ಎದುರಾಗಿರುವ ಸವಾಲಿನ ಗಂಭೀರತೆಗೆ ಒಂದು ಸಾಕ್ಷಿಯಾಗಿದೆ.

ಅಪ-ಡಾಲರೀಕರಣದ ಚರ್ಚೆಯು ಈ ಸವಾಲಿನ ಭಾಗವಾಗಿದೆ. ಬ್ರಿಕ್ಸ್ ದೇಶಗಳ ನಡುವೆಯೂ ಸಹ ಹಾಲಿ ವ್ಯವಸ್ಥೆಯನ್ನು ಬದಲಿಸುವ ಪರ್ಯಾಯ ಹಣಕಾಸು ವ್ಯವಸ್ಥೆ ಬಗ್ಗೆ ಯಾವುದೇ ಒಂದು ಸ್ಪಷ್ಟ ಕಲ್ಪನೆ ಇಲ್ಲ. ಇಂತಹ ಬದಲಿಯು ಸಂಭವಿಸಿದಾಗ, ಡಾಲರ್ ಆಧಿಪತ್ಯಕ್ಕೆ ಬದಲಾಗಿ ಬೇರೊಂದು ದೇಶದ ಅಥವಾ ಕೆಲವು ದೇಶಗಳ ಆಧಿಪತ್ಯವನ್ನು ಬಿಂಬಿಸುವ ಕರೆನ್ಸಿ ಬರುವಂತಾಗಬಾರದು ಎಂಬುದನ್ನು ವಿಶ್ವದ ಪ್ರಗತಿಪರ ಅಭಿಪ್ರಾಯವು ಖಚಿತಪಡಿಸಿಕೊಳ್ಳಬೇಕು.

ಇದಕ್ಕಾಗಿ, ಡಾಲರಿನ ಸ್ಥಾನದಲ್ಲಿ ಬೇರೊಂದು ಕರೆನ್ಸಿ– ಅದು ಅಸ್ತಿತ್ವದಲ್ಲಿರುವ ಯಾವುದೋ ಒಂದು ಕರೆನ್ಸಿಯಾಗಿರಬಹುದು ಅಥವಾ ಯಾವುದೋ ಪರ್ಯಾಯ ಬ್ರಿಕ್ಸ್ ಕರೆನ್ಸಿಯಾಗಬಹುದು– ಬಂದಾಗ ಹಿಂದಿನದೇ ವ್ಯವಸ್ಥೆಗಳು ಜೀವಂತವಾಗಿ ಉಳಿಯದಂತೆ ಮಾಡುವುದು ಅವಶ್ಯವಾಗುತ್ತದೆ. ಸ್ವತಃ ನಿಯಮಗಳೇ ಬದಲಾಗಬೇಕಾಗುತ್ತದೆ. ಮತ್ತು ಇದರಲ್ಲಿರುವ ಒಂದು ಬಲು ಮುಖ್ಯವಾದ ಬದಲಾವಣೆಯೆಂದರೆ, ಪಾವತಿಗಳ ಸಮತೋಲನವನ್ನು ಸಾಧಿಸಲು ಮಾಡಬೇಕಾದ ಹೊಂದಾಣಿಕೆಯ ಹೊರೆಯು ಬ್ರೆಟನ್ ವುಡ್ಸ್ ವ್ಯವಸ್ಥೆಯ ಅಡಿಯಲ್ಲಿದ್ದಂತೆ ಮತ್ತು ಈಗಿರುವಂತೆ ಕೊರತೆಯ ದೇಶಗಳ ಮೇಲೆ ಬೀಳಬಾರದು. ಬದಲಿಗೆ ಹೊಂದಾಣಿಕೆಯ ಹೊರೆಯನ್ನು ಮೀಸಲು ವಿನಿಮಯವನ್ನು ಅಧಿಕವಾಗಿ ಹೊಂದಿರುವ ದೇಶಗಳು ಹೊರಬೇಕು.

ಗೃಹಮಂತ್ರಿಗಳ 7 ಜನ್ಮಗಳು...... ಪುಟ 12 ರಿಂದ

ಪಟ್ಟಿ ಕ್ರಮೇಣ ಒಂದು ಮುಂಡಾಸಿನ ರೂಪ ಪಡೆದಿದೆ. ಆಸ್ಪತ್ರೆಯ ಮುಖ್ಯಸ್ಥ ಕ್ಯಾಮರಾ ಮುಂದೆ ಅವರು ವೈದ್ಯಕೀಯ ವೀಕ್ಷಣೆಯಲ್ಲಿ ಇದ್ದಾರೆ ಎನ್ನುತ್ತಾರೆ....... ಇವೆಲ್ಲವೂ ಹಾಸ್ಯಾಸ್ಪದವಾಗಿ ಕಾಣುತ್ತವೆ, ಜತೆಗೇ ಅಷ್ಟೇ ಭೀತಿಯನ್ನೂ ಉಂಟುಮಾಡುತ್ತವೆ" ಎನ್ನುತ್ತಾರೆ ಪ್ರಖ್ಯಾತ ಚಿಂತಕ ಮತ್ತು ದಿಲ್ಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅಪೂರ್ವಾನಂದರವರು (ದಿ ವೈರ್, ಡಿ.20)

ತಳ್ಳಾಟದಲ್ಲಿ 'ಗಾಯಗೊಂಡು ಸಣ್ಣ ತಲೆಪಟ್ಟಿ ಮುಂಡಾಸು ಮಟ್ಟಕ್ಕೇರಿದ ಬಿಜೆಪಿ ಸಂಸದರು, 25 ವರ್ಷಗಳ ಹಿಂದೆ ಆಸ್ಟ್ರೇಲಿಯನ್ ಮಿಷನರಿ ಗ್ರಹಂ ಸ್ಟೇನ್ಸ್ ಮತ್ತು ಆತನ ಮೂವರು ಪುಟ್ಟ ಮಕ್ಕಳನ್ನು ಜೀವಂತ ಸುಟ್ಟ ಪ್ರಕರಣದಲ್ಲಿ ಮತ್ತು ನಂತರ ಒಡಿಶಾ ವಿಧಾನಸಭೆಯ ಮೇಲೆ ಭಜರಂಗದಳ ಮತ್ತು ಇತರ ಸಂಘಟನೆಗಳು ನಡೆಸಿದರೆನ್ನಲಾದ ದಾಳಿಯಲ್ಲಿ ಆರೋಪಿಯಾಗಿದ್ದವರು ಎಂದು ವಿಕಿಪಿಡಿಯದಲ್ಲಿ ದಾಖಲಾಗಿದೆ!

ಯಾವುದೇ ಪ್ರಶ್ನೆಯನ್ನು ಹೂತು ಹಾಕಬಲ್ಲೆವು ಎಂಬುದನ್ನು ಇದುವರೆಗೆ ಬೀದಿಗಳಲ್ಲಿ ತೋರಿಸುತ್ತಿದ್ದುದನ್ನು ಈಗ ಸಂಸತ್ತಿನಲ್ಲೇ ತೋರಿಸುತ್ತಿದ್ದಾರೆ ಎಂದು ಪ್ರೊ. ಅಪೂರ್ವಾನಂದ ಮಾರ್ಮಿಕವಾಗಿ ಹೇಳುತ್ತಾರೆ.

ನೋಯ್ಡಾ ರೈತರ ಸಮರಶೀಲ........ ಪುಟ 11 ರಿಂದ

120 ರೈತರನ್ನು ಬಂಧಿಸಲಾಯಿತು. ಡಿಸೆಂಬರ್ 7ರಂದು ಲುಕ್ಸರ್ ಜೈಲಿನಲ್ಲಿ ಸ್ಥಳಾವಕಾಶದ ಕೊರತೆಯಿಂದಾಗಿ ಅಂತಿಮವಾಗಿ ರೈತರನ್ನು ಬಿಡುಗಡೆ ಮಾಡಲಾಯಿತು.

ಪ್ರತಿಭಟನೆಯ ಈ ವಿನೂತನ ರೂಪವು ರಾಜ್ಯ ಯಂತ್ರದ ಮಿತಿಗಳನ್ನು ಬಹಿರಂಗಪಡಿಸಿತು. ಪ್ರತಿ ಹಳ್ಳಿಯ ರೈತರು ಪೊಲೀಸ್ ದಬ್ಬಾಳಿಕೆಯನ್ನು ಅನುಭವಿಸಿದರು. ಆದರೆ ಅದನ್ನು ಪರಿಣಾಮಕಾರಿಯಾಗಿ ವಿರೋಧಿಸುವುದು ಮತ್ತು ಉತ್ತರ ಪ್ರದೇಶ ಪೊಲೀಸರ ಅಕ್ರಮ ಮತ್ತು ಅರಾಜಕ ಕಾರ್ಯವನ್ನು ಹೇಗೆ ಬಹಿರಂಗಪಡಿಸಬೇಕು ಎಂಬುದನ್ನು ಕಲಿತರು.

ಉತ್ತರ ಪ್ರದೇಶದ ಮುಖ್ಯ ಕಾರ್ಯದರ್ಶಿ ಮನೋಜ್ ಕುಮಾರ್ ಸಿನ್ಹಾ ಅವರು ಡಿಸೆಂಬರ್ 7ರಂದು ಗ್ರೇಟರ್ ನೋಯ್ಡಾಗೆ ಭೇಟಿ ನೀಡಿದ್ದರು. ಆದರೆ ಮುಖ್ಯಮಂತ್ರಿಗಳು ಜೈಲಿನಲ್ಲಿದ್ದ ರೈತರನ್ನು ಬಿಡುಗಡೆ ಮಾಡದೆ ಇರುವ ಬಗ್ಗೆ ಹಠ ಹಿಡಿದಿದ್ದರಿಂದ, ಚರ್ಚೆಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಲು ವಿಫಲರಾದರು. ಅಕ್ರಮವಾಗಿ ಜೈಲಿನಲ್ಲಿರುವ ಎಲ್ಲ ರೈತರನ್ನು ಬೇಷರತ್ ಬಿಡುಗಡೆ ಮಾಡದೆ ಆಡಳಿತದೊಂದಿಗೆ ಯಾವುದೇ ಚರ್ಚೆ ನಡೆಸುವುದಿಲ್ಲ ಎಂದು ರೈತರು ತಾತ್ವಿಕ ನಿಲುವು ತಳೆದರು.

ಡಿಸೆಂಬರ್ 10ರಂದು, ಎಐಕೆಎಸ್, ಸಿಐಟಿಯು ಮತ್ತು ಎಐಡಿಡಬ್ಲ್ಯೂಎ ಸದಸ್ಯರನ್ನೊಳಗೊಂಡ ನಿಯೋಗ, ಸಂಸದ ಮತ್ತು ಎಐಕೆಎಸ್ ಉಪಾಧ್ಯಕ್ಷ ಅಮ್ರಾರಾಮ್ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಮನೀಶ್ ಕುಮಾರ್ ವರ್ಮಾ ಅವರನ್ನು ಭೇಟಿ ಮಾಡಿತು. ಹಳ್ಳಿಗಳಲ್ಲಿ ಇನ್ನು ಮುಂದೆ ಯಾವುದೇ ಗೃಹಬಂಧನಗಳನ್ನು ನಡೆಸುವುದಿಲ್ಲ, ಶಾಂತಿಯುತ ಪ್ರತಿಭಟನೆಗಳು, ಧರಣಿಗಳ ವಿರುದ್ಧ ಪೊಲೀಸರು ಬಲಪ್ರಯೋಗ ಮಾಡುವುದನ್ನು ತಡೆಯುತ್ತೇವೆ. ಮತ್ತು ಆಡಳಿತವು ರೈತರೊಂದಿಗೆ ಶೀಘ್ರವಾಗಿ ಚರ್ಚೆಯನ್ನು ಪ್ರಾರಂಭಿಸಲು ಅನುಕೂಲಕರ ವಾತಾವರಣವನ್ನು ಸೃಷ್ಟಿಸುತ್ತೇವೆ ಎಂದು ನಿಯೋಗಕ್ಕೆ ಜಿಲ್ಲಾಧಿಕಾರಿ ಭರವಸೆ ನೀಡಿದರು. ಹೆಚ್ಚುವರಿಯಾಗಿ, ಜೈಲಿನಲ್ಲಿರುವ ರೈತರ ಬಿಡುಗಡೆಯನ್ನು ತ್ವರಿತಗೊಳಿಸಲು ಉತ್ತರ ಪ್ರದೇಶ ಆಡಳಿತದೊಂದಿಗೆ ಸಮಾಲೋಚಿಸುವುದಾಗಿ ಡಿಎಂ ನಿಯೋಗಕ್ಕೆ ಭರವಸೆ ನೀಡಿದರು.

ಕಳೆದ ಮೂರು ದಶಕಗಳಿಂದ ಹೋರಾಟ

ಕಳೆದ ಮೂರು ದಶಕಗಳಿಂದ ಈ ಭಾಗದಲ್ಲಿ ರೈತರ ಹೋರಾಟಗಳು ನಡೆಯುತ್ತಲೇ ಇವೆ. 1990 ಮತ್ತು 2000ದ ಸಮಯದಲ್ಲಿ ಜಾರಿಯಲ್ಲಿದ್ದ ವಸಾಹತುಶಾಹಿ ಕಾಲದ ಭೂಸ್ವಾಧೀನ ಕಾಯ್ದೆಯಡಿಯಲ್ಲಿ ರೈತರು ತಮ್ಮ ಭೂಮಿಯನ್ನು ನೀಡುವಂತೆ ಒತ್ತಾಯಿಸಲಾಯಿತು. ಈ ಕ್ರಮಗಳು ವ್ಯಾಪಕ ಪ್ರತಿರೋಧ ಮತ್ತು ಸಾಮೂಹಿಕ ಪ್ರತಿಭಟನೆಗಳನ್ನು ಹುಟ್ಟುಹಾಕಿದವು.

2008, 2011 ಮತ್ತು 2012ರಲ್ಲಿ ಭಟ್ಟ ಪರ್ಸೌಲ್ ಸೇರಿದಂತೆ ನೋಯ್ಡಾ ಗ್ರಾಮಗಳಲ್ಲಿ ಹೋರಾಟಗಳನ್ನು ಹತ್ತಿಕ್ಕುವ ಉದ್ದೇಶದಿಂದ ಪೊಲೀಸರು ಗುಂಡು ಹಾರಿಸಿದ ಘಟನೆಗಳಲ್ಲಿ ಆರು ರೈತರು ಮತ್ತು ಐವರು ಪೊಲೀಸ್ ಸಿಬ್ಬಂದಿ ಪ್ರಾಣ ಕಳೆದುಕೊಂಡಿದ್ದರು. ದೇಶಾದ್ಯಂತ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ-2 ಸರ್ಕಾರವು 2013ರ ಭೂಸ್ವಾಧೀನ ಮತ್ತು ಪುನರ್ವಸತಿ (LARR) ಕಾಯಿದೆಯನ್ನು ಜಾರಿಗೊಳಿಸಲು ಮುಂದಾಯಿತು.

ಮೋದಿ ಸರ್ಕಾರದಿಂದ ಭೂಸ್ವಾಧೀನ ಸುಗ್ರೀವಾಜ್ಞೆ ಪರಿಚಯ

ರೈತರ ಹಕ್ಕುಗಳ ವಿರುದ್ಧ ಮತ್ತು ಕಾರ್ಪೊರೇಟ್ ಹಿತಾಸಕ್ತಿಗಳ ಪರವಾಗಿ ಬಿಜೆಪಿ ನಿರಂತರವಾಗಿ ನಿಂತಿದೆ. ಮೊದಲ ಮೋದಿ ಸರ್ಕಾರವು LARR ಕಾಯಿದೆ 2013ರ ನಿಬಂಧನೆಗಳನ್ನು ರದ್ದುಗೊಳಿಸಲು 2014ರಲ್ಲಿ ಭೂಸ್ವಾಧೀನ ಸುಗ್ರೀವಾಜ್ಞೆಯನ್ನು ಪರಿಚಯಿಸಿತು. ಆದರೆ, ಭೂಮಿ ಅಧಿಕಾರ್ ಆಂದೋಲನದ ಅಡಿಯಲ್ಲಿ ರೈತರು ದೇಶಾದ್ಯಂತ ಹೋರಾಟಗಳನ್ನು ಪ್ರಾರಂಭಿಸಿದರು ಮತ್ತು ಅದರ ಜಾರಿಗೊಳಿಸುವಿಕೆಯನ್ನು ಯಶಸ್ವಿಯಾಗಿ ವಿರೋಧಿಸಿದರು. ಇದರ ನಂತರ, ರೈತರಿಗೆ LARR ಕಾಯಿದೆ 2013ರ ಪ್ರಯೋಜನಗಳನ್ನು ನಿರಾಕರಿಸುವ ಕಾನೂನುಗಳನ್ನು ಅಂಗೀಕರಿಸಲು ಬಿಜೆಪಿ ತನ್ನ ರಾಜ್ಯ ಸರ್ಕಾರಗಳನ್ನು ಉತ್ತೇಜಿಸಿತು. ಇದರಿಂದಾಗಿ ಕಾರ್ಪೊರೇಟ್ ಸಂಸ್ಥೆಗಳು ಅಗ್ಗದ ದರದಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಅನುಕೂಲವಾಯಿತು.

ಸೂಕ್ತ ಪರಿಹಾರ, ಪುನರ್ವಸತಿ, ಪರ್ಯಾಯ ಉದ್ಯೋಗ ಇಲ್ಲದೆ ಭೂಮಿಯನ್ನು ಕಳೆದುಕೊಂಡ ರೈತರು ಮತ್ತು ಭೂಮಾಲೀಕರು ಈಗ ನೋಯ್ಡಾ ಗ್ರಾಮಗಳಂತೆ ದೇಶಾದ್ಯಂತ ಸ್ಥಳೀಯ ಜಂಟಿ ಕ್ರಿಯಾ ಸಮಿತಿಗಳನ್ನು ರಚಿಸುತ್ತಿದ್ದಾರೆ. ನೋಯ್ಡಾ ಮತ್ತು ಗ್ರೇಟರ್ ನೋಯ್ಡಾದ ಗ್ರಾಮಸ್ಥರು ಇತರರಿಗೆ ಮಾದರಿಯಾಗಿದ್ದಾರೆ, ಸಮಸ್ಯೆ ಆಧಾರಿತ ಏಕತೆಯನ್ನು ನಿರ್ಮಿಸುವುದು, ಸಂತ್ರಸ್ತ ಕುಟುಂಬಗಳನ್ನು ಸಾಮೂಹಿಕ ಹೋರಾಟಗಳಿಗೆ ಸಜ್ಜುಗೊಳಿಸುವುದು ಮತ್ತು ರೈತ-ಕಾರ್ಮಿಕರ ಒಗ್ಗಟ್ಟನ್ನು ಬೆಳೆಸುವ ಮೂಲಕ ಹಾಗೂ ಸಾರ್ವಜನಿಕ ಬೆಂಬಲವನ್ನು ಪಡೆಯುವ ಮೂಲಕ ಪ್ರಭುತ್ವದ ದಬ್ಬಾಳಿಕೆಯನ್ನು ಎದುರಿಸುವುದು ಹೇಗೆ ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಹೋರಾಟ ಮುಂದುವರಿದಿದೆ

ಸಿಐಟಿಯು, ಎಐಕೆಎಸ್, ಎಐಎಡಬ್ಲ್ಯೂಎ ಸಂಘಟನೆಗಳು ಡಿಸೆಂಬರ್ 12ರಂದು ಪೊಲೀಸ್ ಕಮಿಷನರೇಟ್‌ಗೆ ಮೆರವಣಿಗೆ ನಡೆಸಿ ಜೈಲಿನಲ್ಲಿರುವ ರೈತರನ್ನು ಕೂಡಲೇ ಬಿಡುಗಡೆ ಮಾಡುವಂತೆ ಒತ್ತಾಯಿಸಿವೆ. ಎಸ್‌ಕೆಎಂ ನಿಯೋಗವು ಡಿಸೆಂಬರ್ 14ರಂದು ಗ್ರಾಮಗಳಿಗೆ ಭೇಟಿ ನೀಡಿದೆ. ಎಸ್‌ಕೆಎಂ ಚಳುವಳಿಗೆ ತನ್ನ ಬೆಂಬಲವನ್ನು ಘೋಷಿಸಿದೆ ಮತ್ತು ದೇಶಾದ್ಯಂತ ಭೂಸ್ವಾಧೀನ ಸಂತ್ರಸ್ತ ರೈತರನ್ನು ಒಟ್ಟುಗೂಡಿಸುವ ಮೂಲಕ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದೆ. ರೈತರ ನಿಜವಾದ ಬೇಡಿಕೆ ಈಡೇರುವವರೆಗೂ ಹೋರಾಟ ನಡೆಸಲಾಗುವುದು ಎಂದು ಘೋಷಿಸಿದೆ.

ಅನು: ಎಚ್.ಆರ್. ನವೀನ್ ಕುಮಾರ್

'ಒಂದು ರಾಷ್ಟ್ರ, ಒಂದು ಚುನಾವಣೆ' –ಪರ–ವಿರೋಧ ಚರ್ಚೆಗಳ ಸುತ್ತ.....

ಪುಟ 9 ರಿಂದ

ಹಿಂತೆಗೆಯದೆ ಜಾರಿಗೆ ತರುತ್ತಿತ್ತು. ಭಾರತದ ಕೃಷಿ ಕಾರ್ಪೊರೇಟ್ ಹಿಡಿತದ ಕಡೆಗೆ ಹೋಗುತ್ತಿತ್ತು. ಚುನಾವಣೆಗಳಲ್ಲಿ ಸೋಲುವ ಭೀತಿಯಿಂದಾಗಿಯೇ ಕಾರ್ಪೊರೇಟ್ ಕುಳಗಳ ಕೃಷಿ ವಲಯ ಮತ್ತು ಕೃಷಿ ಉತ್ಪನ್ನಗಳ ಮೇಲೆ ಮತ್ತಷ್ಟು ಹಿಡಿತ ಸಾಧಿಸುವ 'ಅಭಿವೃದ್ಧಿ'ಯ ವೇಗಕ್ಕೆ ಅಡ್ಡಿಯಾಯಿತು ಎಂಬುದು ಇದರ ಅರ್ಥ.

3) ಚುನಾವಣಾ ವೆಚ್ಚ ಹೆಚ್ಚಾಗುತ್ತದೆ:

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಭುತ್ವವು ಚುನಾವಣೆಗಾಗಿ ಮಾಡುವ ವೆಚ್ಚವನ್ನು ಅನಗತ್ಯ ವೆಚ್ಚ ಎಂದು ವಾದಿಸುವುದೇ ಸರಿಯಾದುದಲ್ಲ ಎಂಬುದನ್ನು ಹೇಳುತ್ತಲೇ, ಸರ್ಕಾರ ಚುನಾವಣೆಗಳಿಗಾಗಿ ಮಾಡುವ ವೆಚ್ಚಕ್ಕಿಂತ, ರಾಜಕೀಯ ಪಕ್ಷಗಳು ಮಾಡುವ ವೆಚ್ಚವೇ ಹೆಚ್ಚು. ಒಂದು ಮಾಹಿತಿಯ ಪ್ರಕಾರ ಚುನಾವಣೆಗಾಗಿ ಸರ್ಕಾರ ಮಾಡುವ ವೆಚ್ಚ ಐದಾರು ಸಾವಿರ ಕೋಟಿ ಮಾತ್ರ. ಸರ್ಕಾರವು ದೊಡ್ಡ ಬಂಡವಾಳಗಾರರ 15 ಲಕ್ಷ ಕೋಟಿ ಬ್ಯಾಂಕ್ ಸಾಲ ಮನ್ನಾ ಮಾಡಿರುವುದು, ಶೇ. 8ರಷ್ಟು ಕಾರ್ಪೊರೇಟ್ ತೆರಿಗೆ ಕಡಿತದ ಮೂಲಕ ಸರ್ಕಾರಕ್ಕೆ ಬರಬೇಕಾದ ತೆರಿಗೆ ಆದಾಯ ವರ್ಷಕ್ಕೆ ಒಂದು ಲಕ್ಷ ಕೋಟಿಗೂ ಹೆಚ್ಚಿನ ನಷ್ಟ, ಪ್ರೋತ್ಸಾಹದ ಹೆಸರಿನಲ್ಲಿ ಉದ್ಯಮಿಗಳಿಗೆ ಲಕ್ಷಾಂತರ ಕೋಟಿ ಆರ್ಥಿಕ ನೆರವು ಇವುಗಳ ಮುಂದೆ ಸರ್ಕಾರ ಚುನಾವಣೆಗಾಗಿ ಮಾಡುವ ವೆಚ್ಚ ತೀರಾ ಸಣ್ಣ ಪ್ರಮಾಣದ್ದು.

ಒಟ್ಟಾರೆ ವೆಚ್ಚ 1.35 ಲಕ್ಷ ಕೋಟಿ ವೆಚ್ಚ!

ಅಭ್ಯರ್ಥಿಗಳ ವೆಚ್ಚಕ್ಕೆ ಸಂಬಂಧಿಸಿದಂತೆ, ಪ್ರತಿಯೊಬ್ಬ ಸ್ಪರ್ಧಿಯು ಲೋಕಸಭೆ ಕ್ಷೇತ್ರಗಳಿಗೆ 75-95 ಲಕ್ಷ (ಪ್ರದೇಶವನ್ನು ಅವಲಂಬಿಸಿ) ಮತ್ತು ವಿಧಾನಸಭಾ ಸ್ಥಾನಗಳಿಗೆ 28-40 ಲಕ್ಷಕ್ಕಿಂತ ಹೆಚ್ಚು ಖರ್ಚು ಮಾಡುವಂತಿಲ್ಲ. ಸಾರ್ವಜನಿಕ ಸಭೆಗಳು, ರ್‍ಯಾಲಿಗಳು, ಜಾಹೀರಾತುಗಳು, ಪೋಸ್ಟರ್‌ಗಳು, ಬ್ಯಾನರ್‌ಗಳು, ವಾಹನಗಳು ಮತ್ತು ಇತರವುಗಳನ್ನು ಒಳಗೊಂಡಂತೆ ಪ್ರತಿ ಅಭ್ಯರ್ಥಿಯು ಪ್ರಚಾರಕ್ಕಾಗಿ ಕಾನೂನುಬದ್ಧವಾಗಿ ಖರ್ಚು ಮಾಡಬಹುದಾದ ಮೊತ್ತವನ್ನು ಖರ್ಚು ಮಿತಿಗಳು ಉಲ್ಲೇಖಿಸುತ್ತವೆ.

ಆದರೆ, ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು (ಎಡ ಪಕ್ಷಗಳು ಮತ್ತು ಅಭ್ಯರ್ಥಿಗಳನ್ನು ಹೊರತುಪಡಿಸಿ) ಈ ಮಿತಿಯ ಹಲವು ಪಟ್ಟು ಹೆಚ್ಚು ವೆಚ್ಚ ಮಾಡುತ್ತಾರೆ. ಚುನಾವಣಾ ವೆಚ್ಚವನ್ನು ಟ್ರ್ಯಾಕ್ ಮಾಡುವ ಸೆಂಟರ್ ಫಾರ್ ಮೀಡಿಯಾ ಸ್ಟಡೀಸ್ (ಅಐಖ) ಪ್ರಕಾರ 2024ರ ಲೋಕಸಭಾ ಚುನಾವಣೆಯಲ್ಲಿನ ಒಟ್ಟಾರೆ ವೆಚ್ಚ 1.35 ಲಕ್ಷ ಕೋಟಿ. ಅಂದರೆ, 96 ಕೋಟಿ ಮತದಾರರಿರುವ ಭಾರತದಲ್ಲಿ ತಲಾ ಮತದಾರನಿಗೆ ಮಾಡಿದ ಸರಾಸರಿ ವೆಚ್ಚ 1,400 ರೂಪಾಯಿಗಳು. 2019 ರ ಚುನಾವಣೆಯಲ್ಲಿ 60,000 ಕೋಟಿ ಖರ್ಚು ಮಾಡಲಾಗಿದೆ.

ಬಿಜೆಪಿಯವರಿಂದಲೇ ಹೆಚ್ಚಿನ ವೆಚ್ಚ

ಚುನಾವಣೆಯಲ್ಲಿ ಅತ್ಯಧಿಕ ಹಣವನ್ನು ಖರ್ಚು ಮಾಡುವ ಬಿಜೆಪಿಯವರೇ 'ಅನಗತ್ಯ ವೆಚ್ಚ' ಎಂಬ ಮಾತುಗಳನ್ನು ಹೇಳುತ್ತಾರೆ. 2024ರ ಚುನಾವಣೆಯಲ್ಲಿ ರಾಜಕೀಯ ಪಕ್ಷಗಳು ಮಾಡಿದ ವೆಚ್ಚದಲ್ಲಿ ಅರ್ಧಕ್ಕಿಂತ ಹೆಚ್ಚು ಹಣವನ್ನು ಬಿಜೆಪಿ ಒಂದೇ ಮಾಡಿದೆ. ಚುನಾವಣಾ ಬಾಂಡ್ ಮೂಲಕ ಉದ್ಯಮಿಗಳಿಂದ ರಾಜಕೀಯ ಪಕ್ಷಗಳು ಪಡೆದ ಒಟ್ಟು ದೇಣಿಗೆಯಲ್ಲಿ ಶೇ. 60ರಷ್ಟು ದೇಣಿಗೆಯನ್ನು ಬಿಜೆಪಿ ಒಂದೇ ಪಡೆದಿರುವುದು ಇದಕ್ಕೆ ಒಂದು ಸಾಕ್ಷಿಯಾಗಿದೆ.

ಕಮ್ಯೂನಿಸ್ಟ್ ಪಕ್ಷಗಳು ಮಾತ್ರವೇ ಚುನಾವಣಾ ಬಾಂಡ್ ಪಡೆಯಲಿಲ್ಲ, ಮಾತ್ರವಲ್ಲ, ಕಮ್ಯೂನಿಸ್ಟರು ಮಾತ್ರವೇ ಸಿದ್ಧಾಂತದ ಆಧಾರದಲ್ಲಿ, ತಾವು ಅನುಸರಿಸುವ ನೀತಿ, ನಿಲುವುಗಳ ಆಧಾರದಲ್ಲಿ ಮತದಾರರ ಬಳಿ ಹೋಗಿ ಮತ ಯಾಚಿಸುತ್ತವೆ. ಹಣ ಕೊಡುವ ಅಥವಾ ಮತ್ಯಾವುದೇ ಅಕ್ರಮ ರೀತಿಯಲ್ಲಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುವುದಿಲ್ಲ. ಚುನಾವಣಾ ವೆಚ್ಚಕ್ಕಾಗಿ ಜನರ ಬಳಿಯೇ ಹಣ ಸಂಗ್ರಹಿಸುತ್ತವೆ. ಎಲ್ಲಾ ಪಕ್ಷಗಳು ಇದನ್ನು ಅನುಸರಿಸಿದರೆ, ಚುನಾವಣಾ ವೆಚ್ಚ ತೀರಾ ಕಡಿಮೆಯಾಗುತ್ತದೆ. ಆದರೆ, ಬಂಡವಾಳಶಾಹಿ ಪಕ್ಷಗಳ ಬಳಿ ಜನಪರವಾದ ನೀತಿ, ನಿಲುವುಗಳಿಲ್ಲ. ಅವು ತಮ್ಮ ಉದಾರವಾದಿ ಪರವಾದ ನೀತಿ ನಿಲುವುಗಳನ್ನು ಸಂಪೂರ್ಣವಾಗಿ ಬಹಿರಂಗ ಪಡಿಸುವುದಿಲ್ಲ. ಅವುಗಳು ದೊಡ್ಡ ಬಂಡವಾಳಗಾರರ ಬಾಲಂಗೋಚಿಗಳು. ಹಾಗಾಗಿ ಜನರ ಬಳಿ ಹೇಳಿಕೊಳ್ಳುವಂತಹ ಜನಪರ ಯೋಜನೆಗಳು ಇರುವುದಿಲ್ಲ. ಚುನಾವಣಾ ಆಮಿಷಗಳ ಮೂಲಕ, ಸುಳ್ಳುಗಳ ಅಬ್ಬರದ ಪ್ರಚಾರದ ಮೂಲಕ, ಬಂಡವಾಶಾಹಿ ಪಕ್ಷಗಳು ಪ್ರಜಾಪ್ರಭುತ್ವ ಕುರಿತಂತೆ ಜನರಲ್ಲಿರುವ ಅರಿವುಗಳ ಕೊರತೆಯನ್ನು ದುರುಪಯೋಗ ಪಡಿಸಿಕೊಳ್ಳುತ್ತಿವೆ.

ಪದೇ ಪದೇ ನಡೆಯುವ ಚುನಾವಣೆಗಳಿಂದ ಜನಜೀವನಕ್ಕೆ ಅಡ್ಡಿಯುಂಟಾಗುತ್ತದೆ, ಅವರನ್ನು ಜೀವನದ ಮುಖ್ಯ ಚಟುವಟಿಕೆಗಳಿಂದ ವಿಮುಖರನ್ನಾಗುವಂತೆ ಮಾಡುತ್ತದೆ ಎಂಬುದೊಂದು ವಾದ. ದೇಶದಲ್ಲಿ ನಿರುದ್ಯೋಗದಿಂದ ಬಳಲುತ್ತಿರುವ ಕೋಟ್ಯಾಂತರ ಜನರ ಕುರಿತು ಇದೇ ರೀತಿ ಚಿಂತನೆ ಮಾಡಿ, ಅವರನ್ನು ಉದ್ಯೋಗಿಗಳನ್ನಾಗಿ ಮಾಡಿ ಅಭಿವೃದ್ಧಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಬೇಕಿತ್ತು. ಇಂತಹ ನಿರುದ್ಯೋಗದ ಕಾರಣದಿಂದಲೇ ಐದು ವರ್ಷಗಳ ಅವಧಿಯಲ್ಲಿ ಬರುವ ಮೂರ್ನಾಲ್ಕು ಚುನಾವಣೆಗಳಲ್ಲಿ (ಲೋಕಸಭೆ, ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಚುನಾವಣೆಗಳು) ಕೆಲವೇ ಸಮಯ ಭಾಗಿಯಾಗಲು ಯುವಜನರು ಮುಂದೆ ಬರುತ್ತಾರೆ. ಇವರನ್ನೇ, ರಾಜಕೀಯ ಪುಡಾರಿಗಳು, ನಿರುದ್ಯೋಗಿಗಳು, ಪದೇ ಪದೇ ಚುನಾವಣೆ ನಡೆಯುವುದನ್ನು ಬಯಸುತ್ತಾರೆ ಎಂದೆಲ್ಲಾ ಏಕಕಾಲಿಕ ಚುನಾವಣೆಯನ್ನು ಬೆಂಬಲಿಸುವ ಸಂಘಪರಿವಾರದ ಅನುಯಾಯಿಗಳು ಹೀಯಾಳಿಸತೊಡಗಿದ್ದಾರೆ. ಆದರೆ, ಚುನಾವಣೆಯಲ್ಲಿ ಇಂತಹ ನಿರುದ್ಯೋಗಿಗಳನ್ನು ಹೆಚ್ಚಾಗಿ ಬಳಕೆ ಮಾಡಿಕೊಳ್ಳುವ ಇತ್ತೀಚಿನ ಪಕ್ಷ ಎಂದರೆ, ಅದು ಬಿಜೆಪಿ ಮತ್ತು ಅದರ ಮಾತೃ ಸಂಸ್ಥೆ ಆರೆಸ್ಸೆಸ್. ಏಕೆಂದರೆ, ಹೆಚ್ಚು ಚುನಾವಣಾ ನಿಧಿ ಸಂಗ್ರಹ ಮಾಡುವ ಮತ್ತು ಹೆಚ್ಚು ಹಣ ಖರ್ಚು ಮಾಡುವ ಪಕ್ಷಗಳ ಸಾಲಿನಲ್ಲಿ ಬಿಜೆಪಿ ಮೊದಲ ಸ್ಥಾನದಲ್ಲಿದೆ. ಅಂದರೆ, ಇವರು ಹೇಳುತ್ತಿರುವ ರಾಜಕೀಯ ಪುಡಾರಿಗಳು, ನಿರುದ್ಯೋಗಿಗಳಲ್ಲಿ ಬಿಜೆಪಿ ಬೆಂಬಲಿಗರೇ ಹೆಚ್ಚಿರುತ್ತಾರೆ.

ವಿಶ್ವದ ಹಲವು ದೇಶಗಳಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಯುತ್ತವೆ: ಇಲ್ಲಿ ನಡೆಸುವುದರಿಂದ ತಪ್ಪೇನಿದೆ? ಇವರು ಈ ವಾದವನ್ನೂ ಮಾಡುತ್ತಾರೆ. ಭಾರತದಲ್ಲಿ ಇರುವಷ್ಟು ಭಾಷೆಗಳು ಮತ್ತು ವೈವಿಧ್ಯತೆಯನ್ನು ಹೊಂದಿರುವ ಯಾವುದೇ ದೇಶಗಳು ಜಗತ್ತಿನಲ್ಲಿಲ್ಲ. ಭಾರತದ ನಗರಗಳಿಗಿಂತ ತೀರಾ ಚಿಕ್ಕದಾದ, ಕಡಿಮೆ ಜನಸಂಖ್ಯೆ ಇರುವ, ಒಂದೇ ಭಾಷೆ, ಒಂದೇ ಸಂಸ್ಕೃತಿ ಇರುವ ದೇಶಗಳ ಚುನಾವಣೆಗೆ ಭಾರತದ ಚುನಾವಣೆಯನ್ನು ಹೋಲಿಕೆ ಮಾಡುವುದು ಸರಿಯಲ್ಲ.

ಇಂತಹ ಸುಳ್ಳು ಕಥೆಗಳು ಹೊಸದೇನಲ್ಲ

ಒಟ್ಟಾರೆ ಹೇಳುವುದಾದರೆ, ಬಿಜೆಪಿ ನೇತೃತ್ವದ ಸರ್ಕಾರ ಜನವಿರೋಧಿಯಾದ ತಮ್ಮ ನೀತಿ ನಿಲುವುಗಳನ್ನು ಜಾರಿಗೆ ತರುವ ಸಂದರ್ಭಗಳಲ್ಲೆಲ್ಲಾ, ಮತ್ತು ಸಂಘಪರಿವಾರವು ಇಂತಹ ಸುಳ್ಳು ಕಥೆಗಳನ್ನು ಕಟ್ಟಿ ಜನರ ಬೆಂಬಲ ಪಡೆಯಲು ಮತ್ತು ಅವುಗಳಿಗೆ ಇರುವ ವಿರೋಧದ ಮಟ್ಟವನ್ನು ತಗ್ಗಿಸಲು ಪ್ರಯತ್ನಿಸುತ್ತದೆ. 500 ಮತ್ತು 1000 ಮುಖಬೆಲೆಯ ನೋಟುಗಳ ರದ್ದತಿ, ಜಿಎಸ್ ಟಿ ಜಾರಿ, ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡಿದ್ದ 370ನೇ ವಿಧಿ ರದ್ದು, ಮೂರು ಕೃಷಿ ಕಾಯ್ದೆಗಳನ್ನು ತಂದಾಗ ರೈತರ ಹೋರಾಟವನ್ನು ಹತ್ತಿಕ್ಕಲು, ತ್ರಿವಳಿ ತಲಾಖ್ ಸಂಬಂಧಿಸಿದ ಕಾನೂನು, ರಾಮ ಜನ್ಮಭೂಮಿ ಮತ್ತು ಬಾಬರಿ ಮಸೀದಿ ವಿವಾದದ ಸಂದರ್ಭ, ಅಡುಗೆ ಅನಿಲದ ಮೇಲಿನ ಸಬ್ಸಿಡಿ ರದ್ದು ಮಾಡಲು, ಈ ಸಂದರ್ಭಗಳಲ್ಲೆಲ್ಲಾ ಸಂಘಪರಿವಾರದವರು, ಇವೆಲ್ಲವೂ ಜನರ ಹಿತಕ್ಕಾಗಿ ಎನ್ನುತ್ತಾ ಏನೆಲ್ಲಾ ಕಥೆಗಳನ್ನು ಕಟ್ಟಿ ಜನರ ನಡುವೆ ಹರಡಿದರು ಎಂಬುದನ್ನು ನೆನಪಿಸಿಕೊಂಡಾಗ ಮಾತ್ರ, 'ಒಂದು ರಾಷ್ಟ್ರ, ಒಂದು ಚುನಾವಣೆ' ಪರವಾದ ಅವರ ವಾದಗಳು ಎಷ್ಟು ವಂಚನೆಗಳಿಂದ ಕೂಡಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯ.

ನವ ಉದಾರವಾದಿ ನೀತಿಗಳನ್ನು ಒಪ್ಪಿಕೊಂಡು ಮೂರು ದಶಕಗಳು ಕಳೆದರೂ, ವಿಶ್ವ ಬ್ಯಾಂಕ್ ಮತ್ತು ವಿಶ್ವ ವಾಣಿಜ್ಯ ಸಂಸ್ಥೆ ಪ್ರೇರಿತ ಆರ್ಥಿಕ ನೀತಿಗಳನ್ನು ಸಂಪೂರ್ಣವಾಗಿ ಜಾರಿಗೆ ತರಲು ಭಾರತದ ಆಳುವ ವರ್ಗಕ್ಕೆ ಸಾಧ್ಯವಾಗಿಲ್ಲ. ಈ ನೀತಿಗಳ ಜಾರಿಯ ಕಾರಣದಿಂದಾಗಿಯೇ ಹಿಂದೆ ಆಳುತ್ತಿದ್ದ ಕಾಂಗ್ರೆಸ್ ಪಕ್ಷವನ್ನು ಜನರು ತಿರಸ್ಕರಿಸಿದ್ದಾರೆ. ಇದೇ ಕಾರಣದಿಂದ ಕಳೆದ ಚುನಾವಣೆಯಲ್ಲಿ ಬಿಜೆಪಿಯನ್ನು ಬಹುಮತದಿಂದ ಕೆಳಗೆ ತಳ್ಳಿದ್ದಾರೆ. ಜನರು ಚುನಾವಣೆ ಮೂಲಕ ವ್ಯಕ್ತಪಡಿಸುವ ಇಂತಹ ಅಭಿಪ್ರಾಯಗಳು ನವ ಉದಾರವಾದಿ ನೀತಿಗಳನ್ನು ಜಾರಿ ಮಾಡಲು ಆಳುವ ವರ್ಗಕ್ಕೆ ಅಡ್ಡಿಯಾಗಿವೆ. ಇದನ್ನು ನಿವಾರಿಸಲೆಂದೇ ಏಕಕಾಲಕ್ಕೆ ಚುನಾವಣೆ ನಡೆಸುವ ಪ್ರಯತ್ನಕ್ಕೆ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮುಂದಾಗಿದೆ. ಸರ್ಕಾರದ ಸ್ಥಿರತೆಯ ಜಪವು ಹೆಚ್ಚು ಅಸ್ಥಿರತೆ ಮತ್ತು ಹೆಚ್ಚು ಆರ್ಥಿಕ ಹೊರೆಗೆ ಕಾರಣವಾಗುತ್ತದೆ. ಜೊತೆಗೆ, ಏಕರೂಪದ ಬಹುಸಂಖ್ಯಾತ ಧಾರ್ಮಿಕ ನಿರಂಕುಶಾಧಿಕಾರಕ್ಕಾಗಿ ಹಿಂದುತ್ವವಾದಿಗಳು ಆತೊರೆಯುತ್ತಿದ್ದಾರೆ. ಜನರು ಇದನ್ನು ತಡೆಯುವ ಪ್ರಯತ್ನ ಮಾಡಬೇಕಿದೆ.

ಇ-ಕಾಮರ್ಸ್ ಕಂಪನಿಗಳ ವಿರುದ್ಧ 12 ಲಕ್ಷ ದೂರು!

ಇ-ಕಾಮರ್ಸ್ ಕಂಪನಿಗಳ ವಿರುದ್ಧ 12 ಲಕ್ಷ ದೂರುಗಳು ಬಂದಿವೆ ಎಂದು ಕೇಂದ್ರ ರಾಜ್ಯ ಸಚಿವ ಪಿ.ಎಲ್. ವರ್ಮಾ ಲೋಕಸಭೆಯಲ್ಲಿ ಹೇಳಿದ್ದಾರೆ.

ಇ-ಕಾಮರ್ಸ್ ಕಂಪನಿಗಳ ವಿರುದ್ಧ ಎಷ್ಟು ದೂರುಗಳು ಬಂದಿವೆ ಮತ್ತು ಅವುಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ಎಂದು ಸಿಪಿಐ(ಎಂ) ಮದುರೈ ಸಂಸದ ಎಸ್. ವೆಂಕಟೇಶನ್ ಲೋಕಸಭೆಯಲ್ಲಿ ಗ್ರಾಹಕ ವ್ಯವಹಾರಗಳ ಸಚಿವಾಲಯವನ್ನು ಕೇಳಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ ರಾಜ್ಯ ಗ್ರಾಹಕ ಕಲ್ಯಾಣ ಸಚಿವ ಪಿ.ಎಲ್.ವರ್ಮಾ ಅವರು 4 ವರ್ಷದಲ್ಲಿ 12 ಲಕ್ಷ ದೂರುಗಳು ಬಂದಿವೆ ಎಂಬ ಉತ್ತರ ಕೊಟ್ಟಿದ್ದಾರೆ.

ಈ ಕುರಿತು ಸಂಸದ ಎಸ್.ವೆಂಕಟೇಶನ್ ತಮ್ಮ 'ಎಕ್ಸ್' ಪೇಜ್ ನಲ್ಲಿ ಹೀಗೆ ಹೇಳಿದ್ದಾರೆ.

"ಇ-ಕಾಮರ್ಸ್ ಕಂಪನಿಗಳ ವಿರುದ್ಧ ಎಷ್ಟು ದೂರುಗಳು ಬಂದಿವೆ ಮತ್ತು ಅವುಗಳ ವಿರುದ್ಧ ಗ್ರಾಹಕ ವ್ಯವಹಾರಗಳ ಸಚಿವಾಲಯವು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ಎಂಬುದರ ಕುರಿತು ನಾನು ಸಂಸತ್ತಿನಲ್ಲಿ (ಸಂ. 3815/18.12.2024) ಪ್ರಶ್ನೆಯನ್ನು ಎತ್ತಿದ್ದೇನೆ.

ಇದಕ್ಕೆ ಪ್ರತಿಕ್ರಿಯಿಸಿದ ಗ್ರಾಹಕ ವ್ಯವಹಾರಗಳ ರಾಜ್ಯ ಸಚಿವ ಪಿ.ಎಲ್. ವರ್ಮಾ, 2021-2024ರ ಆರ್ಥಿಕ ವರ್ಷದಲ್ಲಿ ಇ-ಕಾಮರ್ಸ್ ಕಂಪನಿಗಳ ವಿರುದ್ಧ 12,92,728 ದೂರುಗಳು ಬಂದಿವೆ.

ಈ ನಾಲ್ಕು ವರ್ಷಗಳಲ್ಲಿ ಪ್ರತಿ ವರ್ಷ ದೂರುಗಳ ಸಂಖ್ಯೆ ಹೆಚ್ಚುತ್ತಿದೆಯೇ ಹೊರತು ಕಡಿಮೆಯಾಗಿಲ್ಲ. 2020-21ರಲ್ಲಿ 2,05,000 ದೂರುಗಳಿಂದ 2023-24ರಲ್ಲಿ 4,45,000ಕ್ಕೆ ಏರಿಕೆಯಾಗಿವೆ.

ಫ್ಲಿಪ್‌ಕಾರ್ಟ್ ವಿರುದ್ಧವೇ ನಾಲ್ಕು ವರ್ಷಗಳಲ್ಲಿ 4,34,000 ದೂರುಗಳು ಬಂದಿವೆ. ಅಮೆಜಾನ್ ವಿರುದ್ಧ 1,55,000 ದೂರುಗಳು ಬಂದಿವೆ.

ಗ್ರಾಹಕರ ಹಿತಾಸಕ್ತಿ ಕಾಪಾಡಲು ಈ ದೂರುಗಳ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗುತ್ತದೆ ಎಂಬ ಪ್ರಶ್ನೆಗೆ ಸಚಿವರಿಂದ ನೇರ ಉತ್ತರವಿಲ್ಲ. ಕಾನೂನು ಏನು ಹೇಳುತ್ತದೆ ಮತ್ತು ನಾವು ಹೇಗೆ ದೂರುಗಳನ್ನು ದಾಖಲಿಸುತ್ತೇವೆ ಎಂಬುದನ್ನು ಮಾತ್ರ ಸಚಿವರು ವಿವರಿಸಿದರು. ದೀರ್ಘ ವಿವರಣೆಯಲ್ಲಿ, ಗ್ರಾಹಕರಿಗೆ ತೊಂದರೆ ಉಂಟುಮಾಡುವ ಇ-ಕಾಮರ್ಸ್ ಕಂಪನಿಗಳ ವಿರುದ್ಧ ತೆಗೆದುಕೊಂಡ ಕ್ರಮಗಳ ವಿವರಗಳಿಲ್ಲ.

ಪರಿಸ್ಥಿತಿ ಹೀಗಿದ್ದರೆ ಪ್ರತಿ ವರ್ಷ ದೂರುಗಳು ಹೆಚ್ಚಾಗುತ್ತಲೇ ಇರುತ್ತವೆ!

ಅಮಿತ್ ಷಾ ಅವಹೇಳನಕಾರೀ ಟಿಪ್ಪಣಿ: ಗೃಹ ಸಚಿವ ಹುದ್ದೆಯಲ್ಲಿ ಉಳಿಯುವ ಹಕ್ಕು ಇಲ್ಲ

ರಾಜ್ಯಸಭೆಯಲ್ಲಿ ಸಂವಿಧಾನದ 75ನೇ ವರ್ಷಾಚರಣೆಯ ಚರ್ಚೆಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವಹೇಳನಕಾರಿ ಟಿಪ್ಪಣಿ ಮಾಡಿದ್ದಾರೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡಿಸಿದೆ. ಇದು ದೇಶಾದ್ಯಂತ ಜನರ ಭಾವನೆಗಳನ್ನು ಕೆರಳಿಸಿದೆ ಎಂದಿರುವ ಅದು, ಡಾ.ಅಂಬೇಡ್ಕರ್ ಭಾರತದ ಸಂವಿಧಾನ ಶಿಲ್ಪಿ, ಅಂತಹ ಭಾರತದ ಸಂವಿಧಾನದ ಬಗ್ಗೆ ಮಾತನಾಡುತ್ತಾ ಅಮಿತ್ ಷಾ ಈ ಟಿಪ್ಪಣಿಗಳನ್ನು ಮಾಡಿದ್ದಾರೆ ಎಂಬುದು ಅವರ ಮನುವಾದಿ ದೃಷ್ಟಿಕೋನವನ್ನು ಬಯಲಿಗೆ ತಂದಿದೆಯಷ್ಟೇ ಎಂದು ಟೀಕಿಸಿದೆ.

ಪ್ರಧಾನ ಮಂತ್ರಿ ಮೋದಿಯವರು ಅಮಿತ್ ಷಾರನ್ನು ಸಮರ್ಥಿಸಿಕೊಂಡಿರುವುದು ವಿವೇಚನಾರಹಿತವಾಗಿದೆ. ಅಮಿತ್ ಷಾ ಅವರಿಗೆ ಗೃಹ ಸಚಿವರ ಹುದ್ದೆಯಲ್ಲಿ ಉಳಿಯುವ ಹಕ್ಕು ಇಲ್ಲ ಎಂದೂ ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ.

NEW No. MAG(3)/NPP/205/2021-2022
JANASHAKTHI KANNADA VARA PATRIKE December 23-29, 2024 Price: Rs. 10/- Date of Publication:20 December 2024 RNI No. KARKAN /2006/17926 Posted on 27-12-2024
Posted at BG PSO, BG - 560026 **Posted at Periodical Rate -** Rs. 2

ಕರ್ನಾಟಕದ ಕೃಷಿ, ಆಹಾರ ಭದ್ರತೆಗಳ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳು

"ಕರ್ನಾಟಕದ ಕೃಷಿ, ಆಹಾರ ಭದ್ರತೆ ಮತ್ತು ಹವಾಮಾನ ಬದಲಾವಣೆ" ಎಂಬ ವಿಷಯ ಕುರಿತು ಪರಿಸರ ಅರಿವು ಸಮಾವೇಶವನ್ನು EMPRI ಸಹಯೋಗದೊಂದಿಗೆ ಜನ ಶಿಕ್ಷಣ ಟ್ರಸ್ಟ್, ಡಿಸೆಂಬರ್ 20, 2024ರಂದು ಬೆಂಗಳೂರಿನ ಸೌಹಾರ್ದ ಸಭಾಂಗಣದಲ್ಲಿ ಆಯೋಜಿಸಿತ್ತು. ಡಾ.ಮದುರಾ ಸ್ವಾಮಿನಾಥನ್ ಆಶಯ ಭಾಷಣ ಮಾಡಿದರು. EMPRI ಯ ಟಿ.ಮಹೇಶ ಮತ್ತು ಡಾ. ಸರಿತಾ ಕರ್ನಾಟಕ ಕಾರ್ಯಯೋಜನೆಯನ್ನು ಮಂಡಿಸಿದರು. ಜಿ.ಎನ್.ನಾಗರಾಜ್ ಅಧ್ಯಕ್ಷತೆಯಲ್ಲಿ ಸಂವಾದವೂ ನಡೆಯಿತು. ಸಮಾವೇಶದಲ್ಲಿ ಎಸ್. ರವಿಕುಮಾರ್ ಅವರು ಬರೆದ ಮತ್ತು ಬಾರತ ಜ್ಞಾನ ವಿಜ್ಞಾನ ಸಮಿತಿ ಪ್ರಕಟಿಸಿದ "ಹವಾಮಾನ ಬದಲಾವಣೆ: ಬೇಕೆ ಈ ದಿನಗಳು" ಪುಸ್ತಕ ಬಿಡುಗಡೆ ಮಾಡಲಾಯಿತು. ಈ ಸಮಾವೇಶದ ಕುರಿತ ಒಂದು ವರದಿ.

ಹವಾಮಾನ ಬದಲಾವಣೆಯು ಕೃಷಿ, ಪಶುಸಂಗೋಪನೆ ಸೇರಿದಂತೆ ಎಲ್ಲಾ ವಲಯದ ಮೇಲೆ ಪರಿಣಾಮ ಬೀರುತ್ತದೆ. ಆದರೆ ಕೃಷಿ ಉತ್ಪಾದನೆಯ ಮೇಲೆ ಹವಾಮಾನ ಬದಲಾವಣೆಯಿಂದ ಆಗುವ ಆರ್ಥಿಕ ಪರಿಣಾಮವು ವರ್ಗ (ಸಣ್ಣ ರೈತರು, ಶ್ರೀಮಂತ ರೈತರು, ಜಮೀಂದಾರರು) ಮತ್ತು ಲಿಂಗಕ್ಕೆ ಅನುಸಾರವಾಗಿ ವಿಭಿನ್ನವಾಗಿರುತ್ತದೆ. ಎಂದು ಅರ್ಥಶಾಸ್ತ್ರಜ್ಞರು, ಮತ್ತು ಕೃಷಿಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳ ಬಗ್ಗೆ ಸಂಶೋಧನೆ ಕೈಗೊಂಡಿರುವ ಬೆಂಗಳೂರಿನ ಐಎಸ್ಐ ಸಂಸ್ಥೆಯ ಪ್ರೊಫೆಸರ್ ಮದುರಾ ಸ್ವಾಮಿನಾಥನ್ ಅವರು ಹೇಳಿದರು.

ಡಿಸೆಂಬರ್ 20, 2024ರಂದು ಬೆಂಗಳೂರಿನ ಸೌಹಾರ್ದ ಸಭಾಂಗಣದಲ್ಲಿ, EMPRI ಸಹಯೋಗದೊಂದಿಗೆ ಜನ ಶಿಕ್ಷಣ ಟ್ರಸ್ಟ್ ಆಯೋಜಿಸಿದ್ದ ಪರಿಸರ ಅರಿವು ಸಮಾವೇಶದಲ್ಲಿ "ಕರ್ನಾಟಕದ ಕೃಷಿ, ಆಹಾರ ಭದ್ರತೆ ಮತ್ತು ಹವಾಮಾನ ಬದಲಾವಣೆ" ಎಂಬ ವಿಷಯ ಕುರಿತು ಆಶಯ ಭಾಷಣದಲ್ಲಿ ಈ ರೀತಿ ಹೇಳಿದರು.



ಜಾಗತಿಕ ಕೃಷಿ ಉತ್ಪಾದಕತೆ ಮತ್ತು ಉತ್ಪಾದನೆ ಎರಡೂ – ಒಟ್ಟಾರೆ ಮತ್ತು ತಲಾವಾರು – ಸತತವಾಗಿ ಏರುತ್ತಲೇ ಇವೆ. ಪ್ರಸ್ತುತ ತಂತ್ರಜ್ಞಾನದೊಂದಿಗೆ ಉತ್ಪಾದಕತೆಯ ಇಂದಿನ ದರಗಳು ಗಮನಾರ್ಹ ಸುಧಾರಣೆಗೆ ಸಮರ್ಥವಾಗಿವೆ. ಅದೇ ರೀತಿ ಪ್ರದೇಶಗಳು ಮತ್ತು ಬೆಳೆಗಳಾದ್ಯಂತ ಗಮನಾರ್ಹ ಇಳುವರಿ ಅಂತರವು ದೊಡ್ಡ ಪ್ರಮಾಣದಲ್ಲಿ ಅಸ್ತಿತ್ವದಲ್ಲಿದೆ. ಜಾಗತಿಕ ಉತ್ಪಾದಕತೆಯ ಅಂಕಿಅಂಶಗಳಿಗೆ ಹೋಲಿಸಿದರೆ, ಭಾರತವು ಗಮನಾರ್ಹವಾಗಿ ಹಿಂದುಳಿದಿದೆ ಎಂಬುದೂ ಇನ್ನೊಂದು ವಾಸ್ತವ. ಭಾರತದ ಅವಶ್ಯಕತೆಗಳನ್ನು ಗಮನಿಸಿದರೆ, ಇಳುವರಿ ಮಟ್ಟಗಳು ಹೆಚ್ಚಾಗಬೇಕು. ಕಡಿಮೆ ಉತ್ಪಾದಕತೆಯ ಸವಾಲನ್ನು ಹೊಸ ತಳಿಗಳಿಂದ ಮತ್ತು ಸಂಬಂಧಿತ ನಿರ್ವಹಣಾ ಸುಧಾರಣೆಗಳಿಂದ ಪರಿಹರಿಸಬಹುದು ಎಂದು ಹವಾಮಾನ ಬದಲಾವಣೆಯ ಪರಿಣಾಮಗಳನ್ನು ನಿರೂಪಿಸುವ ಮೊದಲು ಇಂದಿನ ಕೃಷಿ ಪರಿಸ್ಥಿತಿಯ ಸಾರವನ್ನು ಡಾ.ಮದುರಾ ಅವರು ತಿಳಿಸಿದರು.



ಕೃಷಿಗೆ ಜಾಗತಿಕ ತಾಪಮಾನದ ಒಟ್ಟಾರೆ ಬೆದರಿಕೆ ಸುಸ್ಥಾಪಿತವಾಗಿದೆ. IPCC ಆರನೇ ಮೌಲ್ಯಮಾಪನ ವರದಿ ಇದನ್ನು ಖಚಿತಪಡಿಸುತ್ತದೆ. ಬೆಳೆ ಉತ್ಪಾದನೆಯ ಮೇಲೆ ತಾಪಮಾನ ಮತ್ತು ಮಳೆಯಲ್ಲಿನ ವಿಪರೀತಗಳ ಪಾತ್ರವು ಅತ್ಯಂತ ಮಹತ್ವದ್ದಾಗಿದೆ. ರಬಿ ಬೆಳೆಗಳಿಗೆ ತಾಪಮಾನದಲ್ಲಿನ ವ್ಯತ್ಯಾಸವು ಅತ್ಯಂತ ಮಹತ್ವದ್ದಾಗಿದೆ. ಖಾರಿಫ್ ಬೆಳೆಗಳಿಗೆ ಮಳೆಯಲ್ಲಿನ ವ್ಯತ್ಯಾಸವು ಅತ್ಯಂತ ಮಹತ್ವದ್ದಾಗಿದೆ. ಆದರೆ, ವಿಪರೀತಗಳ ಪ್ರಾದೇಶಿಕ ವೈವಿಧ್ಯತೆಯು ಒಟ್ಟಾರೆ ಉತ್ಪಾದಕತೆ ಮತ್ತು ಉತ್ಪಾದನೆಯು ಯಾವುದೇ ಪರಿಣಾಮವನ್ನು ತೋರಿಸುವುದಿಲ್ಲ. ಕರ್ನಾಟಕದಲ್ಲಿ ಕೈಗೊಂಡ ಅಧ್ಯಯನವು ಖಾರಿಫ್ ಮತ್ತು ರಬಿ ಋತುಗಳಲ್ಲಿ ಅಕ್ಕಿ, ರಾಗಿ, ಜೋಳ ಮತ್ತು ತೊಗರಿಗಳಲ್ಲಿ ಇಳುವರಿ ಮೇಲೆ ತೀವ್ರ ದಿನಗಳ ಋಣಾತ್ಮಕ ಪರಿಣಾಮವನ್ನು ದಾಖಲಿಸುತ್ತದೆ. ಅಂದರೆ, ದೈನಂದಿನ ತಾಪಮಾನವು ನಿರ್ಣಾಯಕ ತಾಪಮಾನವನ್ನು ಮೀರಿದರೆ ಬೆಳವಣಿಗೆ ಮತ್ತು ಇಳುವರಿ ಕಡಿಮೆಯಾಗುತ್ತದೆ. ಇದು ಆಹಾರ ಭದ್ರತೆಯ ಮೇಲೆ ಪರಿಣಾಮ ಬೀರುತ್ತದೆ ಎಂದು ಕೃಷಿಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ನಿರೂಪಿಸಿದರು.

ಹವಾಮಾನ ಬದಲಾವಣೆಯಿಂದಾಗಿ ಇಳುವರಿ ಕುಸಿತ ಉಂಟಾಗುತ್ತದೆ. ಇದರಿಂದಾಗಿ ಕೃಷಿ ಉತ್ಪಾದನೆಯ ಅಸ್ಥಿರತೆ ಉಂಟಾಗುತ್ತದೆ. ಬರೀ ಇಳುವರಿ ಮಾತ್ರವಲ್ಲ, ಸಣ್ಣ ಮತ್ತು ಅತಿ ಸಣ್ಣ ರೈತರ ಸಾಮಾಜಿಕ-ಆರ್ಥಿಕ ದುರ್ಭರ ಸ್ಥಿತಿಯು ಅವರಿಗೆ ಹವಾಮಾನ ಬದಲಾವಣೆಯ ಅಪಾಯವನ್ನು ಹೆಚ್ಚಿಸುತ್ತದೆ. ದೊಡ್ಡ ರೈತರೂ ನಷ್ಟ ಅನುಭವಿಸುತ್ತಾರೆ ಆದರೆ ಅವರು ಚೇತರಿಸಿಕೊಳ್ಳಬಲ್ಲರು. ಹವಾಮಾನ ಬದಲಾವಣೆಯು ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಸಂಪೂರ್ಣ ಅಭಾವದ ಪರಿಸ್ಥಿತಿಗೆ ಅಥವಾ ಇನ್ನೂ ಆಳದ ಅಭಾವಕ್ಕೆ ತಳ್ಳುತ್ತದೆ. ಅದೇ ರೀತಿಯಲ್ಲಿ ಅರ್ಧಕ್ಕಿಂತ ಹೆಚ್ಚು ಕೃಷಿ ಕೆಲಸದಲ್ಲಿ ತೊಡಗಿರುವ, ಆದರೆ ತೀರಾ ಕಡಿಮೆ ಭೂಒಡೆತನ ಇರುವ ಮಹಿಳೆಯರೂ ತೀವ್ರ ದುಷ್ಪರಿಣಾಮಗಳಿಗೆ ಒಳಗಾಗುತ್ತಾರೆ. ಹೆಚ್ಚಿನ ಮಟ್ಟದ ಆದಾಯ ಮತ್ತು ಆಸ್ತಿ ಅಸಮಾನತೆ ಒತ್ತಡಗಳು ಮತ್ತು ಆಘಾತಗಳಿಗೆ ಸ್ಥಿತಿಸ್ಥಾಪಕತ್ವವು ಗಣನೀಯವಾಗಿ ಬದಲಾಗುತ್ತದೆ, ಎಂದು ಕೃಷಿಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳಿಂದಾಗಿ ಆಗುವ ಸಾಮಾಜಿಕ-ಆರ್ಥಿಕ ಪರಿಣಾಮಗಳತ್ತ ಡಾ. ಮದುರಾ ಗಮನ ಸೆಳೆದರು.

ಕೊನೆಗೆ ಹವಾಮಾನ ಬದಲಾವಣೆಗೆ ಕಾರಣವಾದ ಹಿಂದಿನ ಮತ್ತು ಪ್ರಸ್ತುತ ಸಂಚಿತ ಹಸಿರು ಮನೆ ಅನಿಲಗಳ ಹೊರಸೂಸುವಿಕೆಯ ಸಿಂಹಪಾಲು (1850–1990 ಅವಧಿಯಲ್ಲಿ 18% ಜನಸಂಖ್ಯೆ 71% ಹೊರಸೂಸುವಿಕೆ) ಹೊಂದಿರುವ ಪಾಶ್ಚಿಮಾತ್ಯ ಶ್ರೀಮಂತ ದೇಶಗಳದ್ದು. ಅವು ಉಪಶಮನ ಮತ್ತು ಹೊಂದಾಣಿಕೆಯನ್ನು ಸಾಧಿಸಲು ಹಣ ಮತ್ತು ತಂತ್ರಜ್ಞಾನದ ಸಿಂಹಪಾಲು ಹೊರಬೇಕೆಂಬ ಜಾಗತಿಕ ಸಮಾನತೆಯ ನೀತಿಯ ಜಾರಿಯಲ್ಲಿ ವಿಳಂಬ, ನಿರ್ಲಕ್ಷದತ್ತವೂ ಡಾ.ಮಧುರಾ ಗಮನ ಸೆಳೆದರು. ಈ ಚೌಕಾಶಿಯಲ್ಲಿ ಮೂರನೇ ಜಗತ್ತಿನ ಬಡ ದೇಶಗಳ ಆಹಾರ ಭದ್ರತೆಯಂತಹ ಬೆಳವಣಿಗೆಯ ಅಗತ್ಯಗಳನ್ನೂ ನಿರ್ಲಕ್ಷಿಸಲಾಗುತ್ತಿದೆ. ಶೂನ್ಯ ಹಸಿವು, ಶೂನ್ಯ ಅಪೌಷ್ಟಿಕತೆ ಸಾಧಿಸದ ಜಗತ್ತು ಶೂನ್ಯ ಹೊರಸೂಸುವಿಕೆ ಸಾಧಿಸಲು ಸಾಧ್ಯವಿಲ್ಲ ಎಂದು ಡಾ.ಮದುರಾ ಮಾರ್ಮಿಕ ಮಾತುಗಳೊಂದಿಗೆ ತಮ್ಮ ಆಶಯ ಭಾಷಣ ಕೊನೆಗೊಳಿಸಿದರು.



EMPRI ತಯಾರಿಸಿದ ಕರ್ನಾಟಕ ಕಾರ್ಯಯೋಜನೆ

'ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (EMPRI), ಬೆಂಗಳೂರು' ತಯಾರಿಸಿದ ಹವಾಮಾನ ಬದಲಾವಣೆಯ ಕುರಿತು ಕರ್ನಾಟಕ ಕಾರ್ಯ ಯೋಜನೆಯಲ್ಲಿನ ಕೃಷಿ ಸಂಬಂಧಿತ ಭಾಗವನ್ನು ಅದೇ ಸಂಸ್ಥೆಯ ನಿರ್ದೇಶಕ (ಸಂಶೋಧನೆ) ಟಿ.ಮಹೇಶ್ ಮತ್ತು ಹಿರಿಯ ಸಮಾಲೋಚಕರಾದ ಡಾ.ಸರಿತಾ ಅವರು ಪ್ರಸ್ತುತ ಪಡಿಸಿದರು. ಕರ್ನಾಟಕದ ಕೃಷಿಯ ಮೇಲೆ ಹವಾಮಾನ ಬದಲಾವಣೆಯ ಪರಿಣಾಮಗಳ ಉಪಶಮನ ಮಾಡಲು, ಮತ್ತು ತಾಳಿಕೊಳ್ಳಲು ಕಾರ್ಯಯೋಜನೆಯ ಮುಖ್ಯ ಅಂಶಗಳನ್ನು ಅವರು ಮಂಡಿಸಿದರು. EMPRI ಕರ್ನಾಟಕ ಸರಕಾರದ ಅರಣ್ಯ ಮತ್ತು ಪರಿಸರ ಇಲಾಖೆಯಡಿ ಸ್ಥಾಪಿಸಿದ ಸಂಶೋಧನಾ ಸಂಸ್ಥೆಯಾಗಿದ್ದು ಈ ನಿಟ್ಟಿನಲ್ಲಿ ನಡೆಸಿದ ನಿರ್ದಿಷ್ಟ ಸಂಶೋಧನೆ, ಮಾಹಿತಿ ಮತ್ತು ಅದರ ಫಲಿತವಾಗಿ ರೂಪಿಸಿದ ನೀತಿ, ಯೋಜನೆ, ಉಪಕ್ರಮಗಳನ್ನು ನಿರೂಪಿಸಿದರು.



ಹವಾಮಾನ ನಿಯತಾಂಕಗಳಲ್ಲಿನ ವ್ಯತ್ಯಯಗಳು ಕೃಷಿ ಕಾರ್ಯಾಚರಣೆಗಳು, ಬೆಳೆಗಳ ಬೆಳವಣಿಗೆಯ ಪ್ರತಿಕ್ರಿಯೆ ಮತ್ತು ಅದರ ಪ್ರದರ್ಶನದ ಮೇಲೆ ಪ್ರಮುಖ ಪರಿಣಾಮವನ್ನು ಬೀರುತ್ತವೆ. ಮಳೆಗಾಲದ ಮಳೆಯ ಪ್ರಮಾಣದಲ್ಲಿ ವ್ಯತ್ಯಯಗಳು ಕೃಷಿ ಎದುರಿಸುತ್ತಿರುವ ಪ್ರಮುಖ ಸವಾಲುಗಳಲ್ಲಿ ಒಂದು. ಇದು ಅನಿಶ್ಚಿತತೆ ಸೃಷ್ಟಿಸುತ್ತದೆ ಮತ್ತು ನೀರಿನ ಲಭ್ಯತೆ ಮತ್ತು ಬೆಳೆ ಉತ್ಪಾದನೆಯ ಮೇಲೆ ಗಮನಾರ್ಹ ಪರಿಣಾಮ ಬೀರುತ್ತದೆ. ಹೆಚ್ಚಿನ ತೀವ್ರತೆ ಮಳೆ ಪ್ರವಾಹ, ಭೂಕುಸಿತ ಮತ್ತು ಬೆಳೆ ಹಾನಿಗೆ ಕಾರಣವಾಗುತ್ತವೆ. ಮತ್ತೊಂದೆಡೆ ಜಾಗತಿಕ ತಾಪಮಾನ ಏರಿಕೆಯಿಂದಾಗಿ ತಾಪಮಾನದಲ್ಲಿ ಹೆಚ್ಚಳವೊಂದರಿಂದಲೇ ಬೆಳೆ ಇಳುವರಿಯ ಮೇಲೆ ನೇರವಾಗಿ ಪರಿಣಾಮ ಬೀರಬಹುದು. ಅದು ಬಾಷ್ಪೀಕರಣವನ್ನು ಹೆಚ್ಚಿಸಬಹುದು, ತೇವಾಂಶದ ಒತ್ತಡ, ಅಂತಿಮವಾಗಿ ಕೃಷಿಗೆ ನೀರಿನ ಬೇಡಿಕೆ ಮತ್ತು ನೀರಾವರಿ ಅಗತ್ಯತೆಗಳನ್ನು ಹೆಚ್ಚಿಸಬಹುದು. ವಿಪರೀತ ಸಂದರ್ಭಗಳಲ್ಲಿ, ಹೆಚ್ಚಿನ ತಾಪಮಾನವು ಶಾಖದ ಒತ್ತಡಕ್ಕೆ ಕಾರಣವಾಗಬಹುದು, ಮತ್ತು ಮನುಷ್ಯರು ಮತ್ತು ಪ್ರಾಣಿಗಳಿಗೆ ಹಾನಿ ಮಾಡಬಹುದು ಎಂದು ಅವರು ಹೇಳಿದರು.

ಕರ್ನಾಟಕದ ಕೃಷಿಯ ಮೇಲೆ ನಿರೀಕ್ಷಿತ ಹವಾಮಾನ ಬದಲಾವಣೆಯ ಪರಿಣಾಮಗಳು

ಕೃಷಿಯ ಮೇಲೆ ನಿರೀಕ್ಷಿತ ಹವಾಮಾನ ಬದಲಾವಣೆಯ ಪರಿಣಾಮಗಳನ್ನು ಅಂದಾಜು ಮಾಡಲು, ಹವಾಮಾನ ಬದಲಾವಣೆ ಮಾದರಿಗಳಲ್ಲದೆ, ಕೃಷಿಯ ಉತ್ಪಾದಕತೆಯ ಮೇಲೆ ಹವಾಮಾನ ನಿಯತಾಂಕಗಳ ಮತ್ತು ಇತರ ಅಂಶಗಳ ಪರಿಣಾಮಗಳನ್ನು ಪರಿಗಣಿಸಬೇಕಾಗುತ್ತದೆ. 2030ರ ವರೆಗೆ ವಿವಿಧ ಬೆಳೆಗಳ ಉತ್ಪಾದಕತೆಯ ಮತ್ತು ಹವಾಮಾನ ಬದಲಾವಣೆಯ ವಿವಿಧ ಗಣಿತಶಾಸ್ತ್ರೀಯ ಮತ್ತು ಸಂಖ್ಯಾಶಾಸ್ತ್ರೀಯ ಮಾದರಿಗಳನ್ನು ಬಳಸಿ ಅಧ್ಯಯನ ಮಾಡಲಾಗಿದೆ. ಇಂತಹ ಮಾದರಿಗಳನ್ನು ಕೃಷಿ ವಿವಿಯಲ್ಲಿ ಬಟಾಣಿ, ಜೋಳ, ಭತ್ತ, ಮೆಕ್ಕೆಜೋಳ, ತೊಗರಿ, ಹತ್ತಿ, ಸೋಯಾ, ರಾಗಿ, ಕಬ್ಬು ಮತ್ತು ಶೇಂಗಾ ಈ ಬೆಳೆಗಳಿಗೆ ಅಭಿವೃದ್ಧಿಪಡಿಸಲಾಗಿದೆ. ಈ ಅಧ್ಯಯನಗಳು ಬಟಾಣಿ (13.5%), ಹತ್ತಿ (55.6%), ಮೆಕ್ಕೆಜೋಳ (24.5%) ಮತ್ತು ಕಬ್ಬು (6.1%) ಉತ್ಪಾದಕತೆ ಹೆಚ್ಚಾಗುತ್ತವೆ ಎಂದು ತೋರಿಸಿವೆ. ಭತ್ತ (5.6%), ಜೋಳ (20.3%), ಸೋಯಾ (28.9%), ತೊಗರಿ (19.2%), ಗೋಧಿ (0.6%) ರಾಗಿ (12%), ಶೇಂಗಾ (9.6%) ಈ ಬೆಳೆಗಳಲ್ಲಿ ಉತ್ಪಾದಕತೆ ಕಡಿಮೆಯಾಗುತ್ತದೆ. ಹವಾಮಾನ ಬದಲಾವಣೆಯ ಹೊಂದಾಣಿಕೆಯ ನಂತರವೂ 2 ರಿಂದ 3.5 ಡಿಗ್ರಿ ಸೆಂಟಿಗ್ರೇಡ್ ತಾಪಮಾನ ಹೆಚ್ಚಳಕ್ಕೆ ಒಟ್ಟು ಕೃಷಿ ಬೆಳೆಗಳ ಮೌಲ್ಯದಲ್ಲಿ 9ರಿಂದ 25%ರಷ್ಟು ಕಡಿಮೆಯಾಗಬಹುದು ಎಂದು ಕುಮಾರ್ ಮತ್ತು ಪಾರಿಖ್ (1998) ಅಧ್ಯಯನ ತಿಳಿಸುತ್ತದೆ ಎಂದು ತಿಳಿಸಿದರು.

ಪುಟ 10 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**